ಶೂದ್ರ

ಈ ಸಂಚಿಕೆಯಲ್ಲಿ :

ಮಹೇಶ ತಿಪ್ಪಶೆಟ್ಟಿ – ಹೋಚಿಮಿನ್ – ಆರ್. ಲಕ್ಷ್ಮೀನಾರಾಯಣ – ಸರಜೂ ಕಾಟ್ಕರ್
ಜಾರ್ಜ್ ಥಾಮ್ಸನ್ – ಬಿದರಹಳ್ಳಿ ನರಸಿಂಹಮೂರ್ತಿ – ಸಿ. ವಿ. ಕೃಷ್ಣರಾವ್
ಸ. ರಘುನಾಥ – ಹಣಮಂತ – ಶಂಕರ ಪಾಟೀಲ – ಎಂ. ಎಚ್. ಲಕ್ಷ್ಮೀನರಸಮ್ಮ
ಡಾ॥ ರಾಮಚಂದ್ರದೇವ-ಎಚ್. ಪ್ರೇಮಲೀಲಾ-ವಾಸುದೇವ ನಾಡಿಗ್–ಟಿ.ಪಿ. ಅಶೋಕ
ಕನಸಿಗೊಂದು ಕಣ್ಣು – ಪುಸ್ತಕ ವಿಮರ್ಶೆ : ಜರಗನಹಳ್ಳಿ ಶಿವಶಂಕರ್.
ಡಾ॥ ಎಚ್. ಎಸ್. ಸುಜಾತಾ – ಈಗ ಕಂಡ ಪುಸ್ತಕಗಳು

ಗ್ರೀಕ್ ಮಹಾನ್ ಕವಯತ್ರಿ: ಸಾಫೋ–ಕೆ. ಎನ್. ವಿಜಯಲಕ್ಷ್ಮಿ

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ನಾವು ಇಂದು ಅತ್ಯಂತ ದುರಂತ ಸಮಯದಲ್ಲಿ ಬದುಕುತ್ತಿದ್ದೇವೆ. ನಮ್ಮ ಜನ ನಮಗೊಬ್ಬ ಪ್ರಾಮಾಣಿಕ ನಾಯಕರಿಲ್ಲವಲ್ಲ ಎಂದು ಒದ್ದಾಡುತ್ತಿದ್ದಾರೆ. ಇಂಥ ಸಂಕಷ್ಟ ಸಮಯದಲ್ಲಿ ವಿವಿಧ ಕ್ಷೇತ್ರಗಳಿಗೆ ಸೇರಿದ ಅರ್ಥಪೂರ್ಣ ವ್ಯಕ್ತಿಗಳು ಕಣ್ಮರೆಯಾಗಿದ್ದಾರೆ. ಸಾವಿರಾರು ಮಂದಿ ಮತೀಯ ಗಲಭೆಗಳಿಂದ ಸತ್ತಿದ್ದಾರೆ. ಕೋಟ್ಯಾನುಕೋಟಿ ಮಂದಿಯ ಮನಸ್ಸು ನರಳುವಂತೆ ಮಾಡಿದೆ. ಈ ಎಲ್ಲದರ ಮಧ್ಯೆ ಧ್ವನಿಯಾಗಿದ್ದ ಮಲ್ಲಿಕಾರ್ಜುನ ಮನ್ಸೂರ್, ಗೋಪಾಲಕೃಷ್ಣ ಅಡಿಗ, ಬಸವಲಿಂಗಪ್ಪ, ಎನ್. ಡಿ. ಸುಂದರೇಶ್, ಪೋಲಂಕಿ ರಾಮಮೂರ್ತಿಯವರು ನಿಧನ ಹೊಂದಿದ್ದಾರೆ. ಇವರೆಲ್ಲ ಶೂದ್ರಕ್ಕೆ ಪ್ರಿಯರಾದವರು. ಈಗ ಇವರು ನಮ್ಮ ನಡುವೆ ಇಲ್ಲ ಎಂಬ ವೇದನೆ ನಮ್ಮೆಲ್ಲರಿಗೂ ಇದೆ. ಶೂದ್ರದ ಓದುಗರ ಪರವಾಗಿ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಲು ಬಯಸುವೆ.

—ಸಂ.

ಮುಕ್ತ ಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 6–7 ಡಿಸೆಂಬರ್ 92–ಜನವರಿ 93 ಸಂಪುಟ : 19

ಸಹಾಯಕ ಸಂಪಾದಕರು : ಜರಗನಹಳ್ಳಿ ಶಿವಶಂಕರ್ – ಮಂಗಳಾ ಶ್ರೀಧರ್
ಕೆ. ಎನ್. ಅರುಣ್ – ಎಲ್. ಎನ್. ಮುಕುಂದರಾಜ್
ಕರೀಗೌಡ ಬೀಚನಹಳ್ಳಿ – ಚಂದ್ರಶೇಖರ ಉಪಾಲ

ವಾರ್ಷಿಕ ಚಂದಾ : 60-00 ರೂ. ಪುಸ್ತಕ ಭಂಡಾರಗಳಿಗೆ 65-00 ರೂ.
ಆಜೀವ ಚಂದಾ : 500-00 ರೂ. (ನಾಲ್ಕು ಕಂತುಗಳಲ್ಲಿ) 550–00 ರೂ.

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ,
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಬೆಲೆ : 5-00 ರೂ. ದೂರವಾಣಿ : 643337

ಈ ಸಂಚಿಕೆಯ ಪುಟಗಳಲ್ಲಿ

ಮಹಿಳಾ ಶೋಷಣೆಯ ಸ್ವರೂಪ	1
ಶೀತಲ ರಾತ್ರಿ	6
ಸರಜೂ ಕಾಟ್ಕರ್‌ರವರ ಎರಡು ಕವನಗಳು	7
ಆರ್ಫಿಸು	8
ಮೂರು ತೆಲುಗು ಕವಿತೆಗಳು	24
ದಾರಿಗಳು	26
ಕಲಾಶಿಕ್ಷಣ – ಒಂದು ವಿವೇಚನೆ	27
ನಲವತ್ತರ ನಂತರದ ಕನಸು	29
ಬರೆಯಬೇಕಿತ್ತು ಹೀಗೆ	30
ಮನೆಯ ನಕ್ಷೆ	32
ನನ್ನ ಗೆಳತಿಯ ತಾಯಿ ಇನ್ನಿಲ್ಲ	33
ಶಿವರಾಮ ಕಾರಂತರ "ಮೂಕಜ್ಜಿಯ ಕನಸುಗಳು"	34
ಗ್ರೀಕ್ ಮಹಾನ್ ಕವಯತ್ರಿ : ಸಾಫೋ	43
ಕನಸಿಗೊಂದು ಕಣ್ಣು	54
ಪುಸ್ತಕ ವಿಮರ್ಶೆ	58
ಐದು ಮಿನಿ ಕವನಗಳು	60
ಈಗ ಕಂಡ ಪುಸ್ತಕಗಳು	61

ಮಹಿಳಾ ಶೋಷಣೆಯು ಸ್ವರೂಪ

— ಮಹೇಶ ತಿಪ್ಪಶೆಟ್ಟಿ

ಭಾರತದಲ್ಲಿ ಮಹಿಳೆ ಅಲ್ಪಸಂಖ್ಯಾತಳೂ ಅಲ್ಲ, ಅಸ್ಪೃಶ್ಯಳೂ ಅಲ್ಲ. ಆದರೆ ಅಲ್ಪಸಂಖ್ಯಾತರು ಅನುಭವಿಸುವ ಎಲ್ಲ ನೋವುಗಳನ್ನು ಮಹಿಳೆ ಇಲ್ಲಿ ಅನುಭವಿಸು ತ್ತಿದ್ದಾಳೆಂದು ಹೇಳಬಹುದು. ಹೆಣ್ಣು ಹಾಗೂ ಗಂಡಿನ ನಡುವೆ ಮೂಲಭೂತ ದೈವಿಕ ಅಂತರವಿದೆ. ಈ ನಿಸರ್ಗದತ್ತ ವ್ಯತ್ಯಾಸ ಮತ್ತೆ ಹಲವು ಅಂತರಗಳಿಗೆ ಮಾರ್ಗ ಮಾಡಿಕೊಟ್ಟಿದೆ. ದಾರ್ಶನಿಕ ಹಂತದಲ್ಲಿ ನಿಂತು ಅವಲೋಕಿಸಿದಾಗ "ಒಳಗೆ ಸುಳಿಯುವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ" ಎಂದು ಹೇಳಬಹುದು. ಆದರೆ ನಿತ್ಯ ಬದುಕಿನ ಎಲ್ಲ ಪ್ರಸಂಗಗಳಲ್ಲಿ ಹೆಣ್ಣು-ಗಂಡಿನ ಅಂತರ ನಿಖರವಾಗಿ ನಿರೂಪಣೆಗೊಂಡಿದೆ.

ಶ್ರಮಕ್ಕೆ ತಕ್ಕ ಪ್ರತಿಫಲ ನಿರಾಕರಣೆಯಾದಾಗ ಶೋಷಣೆ ಹುಟ್ಟಿಕೊಳ್ಳುತ್ತದೆ. ಅಸಮಾನತೆ, ಗುಲಾಮಗಿರಿ, ಪರಾವಲಂಬನೆ ಇದ್ದಾಗಲೂ ಶೋಷಣೆಗೆ ವಿಶೇಷ ಅರ್ಥ ಬರುತ್ತದೆ. ಸ್ವಇಚ್ಛೆಗೆ ವಿರುದ್ಧವಾದ ಕೆಲಸ ಜರುಗುವಾಗಲೂ ಶೋಷಣೆ ಹುಟ್ಟಿ ಕೊಳ್ಳಬಹುದು. ಆದರೆ ಶೋಷಣೆಗೆ ಒಳಗಾಗಿದ್ದೇವೆ ಎಂಬ ಪ್ರಜ್ಞೆ ಜಾಗೃತ ವಾಗಿದ್ದರೆ ಮಾತ್ರ ಈ ಶಬ್ದಕ್ಕೆ ಮಹತ್ವ ಬರುತ್ತದೆ.

ಭಾರತದಲ್ಲಿ ಮಹಿಳೆಯರ ಆರ್ಥಿಕ ಶೋಷಣೆ ಕೇವಲ ಆರ್ಥಿಕ ಸ್ವರೂಪ ದ್ದಾಗಿರದೇ ಆದಕ್ಕೆ ಸಾಮಾಜಿಕ ಬಂಧನ, ಧರ್ಮದ ಕಪಿಮುಷ್ಟಿ, ಶೈಕ್ಷಣಿಕ ಹಿಂಬೀಳಿಕೆ ಮುಂತಾದವುಗಳು ಕಾರಣವಾಗಿವೆ. ಆದ್ದರಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆಧುನೀಕರಣದ ಪ್ರಭಾವ ಮುಂತಾದ ಅಂಶಗಳ ಹಿನ್ನೆಲೆಗಳಲ್ಲಿ ಮಹಿಳಾ ಶೋಷಣೆಯು ಸ್ವರೂಪ ಗ್ರಹಿಸಬೇಕಾಗಿದೆ.

ಭಾರತದಲ್ಲಿ ಮಹಿಳೆ ಬಾಲ್ಯದಿಂದ ಮುಪ್ಪಿನವರೆಗೆ ಹಲವು ತೆರನಾದ ಶೋಷಣೆಗೆ ಬಲಿಯಾಗಿದ್ದಾಳೆ. ಹೆಣ್ಣು ಹುಟ್ಟಿದರೆ ಏನೋ ಆಘಾತವಾಯಿತು ಎಂಬ ಉದ್ವೇಗ ದಂಪತಿಗಳಲ್ಲಿ ಉಂಟಾಗುತ್ತದೆ. ಗಂಡು ಹಾಗೂ ಹೆಣ್ಣುಮಗುವಿಗೆ ತರತಮ ವರ್ತನೆಯು ಸಂಹಿತೆ ಬಾಲ್ಯದಿಂದಲೆ ರೂಪಗೊಂಡು ಬಿಡುತ್ತದೆ. ಇದರಿಂದ ಹೆಣ್ಣುಮಗು ಭಿನ್ನ ಸಾಮಾಜಿಕ ಪರಿಸರದಲ್ಲಿ ಸಾಮಾಜೀಕರಣಗೊಂಡು ಬೇರೆತೆರನಾದ ಮೌಲ್ಯಗಳನ್ನು ಅಂತರ್ಗತಮಾಡಿಕೊಳ್ಳುತ್ತಾಳೆ. ಇದರ ಒಟ್ಟು ಪರಿಣಾಮವೆಂದರೆ, ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಸಾಮಾಜಿಕ ನಂಬಿಕೆ ಬೇರೂರಿದೆ.

ಮಹೇಶ ತಿಪ್ಪಶೆಟ್ಟಿ, ಪ್ರಾಧ್ಯಾಪಕ, ಸಮಾಜಶಾಸ್ತ್ರ ವಿಭಾಗ, ವಿಜಯ ಮಹಾಂತೇಶ ಕಾಲೇಜ್
ಹುನಗುಂದ-587 118

ಹಿಂದೂ ಪರಂಪರೆಯಲ್ಲಿ ಮಹಿಳೆಯರ ಬಗ್ಗೆ ಪರಸ್ಪರ ವಿರೋಧಾಭಾಸವಾದ ವಿಚಾರಗಳು ವ್ಯಕ್ತವಾಗಿವೆ. ಒಂದು ಕಡೆ ಇವಳು ದೇವತೆಯಾಗಿ, ಗೃಹಲಕ್ಷ್ಮಿಯಾಗಿ ಪೂಜ್ಯಸ್ಥಾನ ಹೊಂದಿದ್ದಾಳೆ. ಅರ್ಧನಾರೀಶ್ವರ ಕಲ್ಪನೆಯ ಹಿನ್ನಲೆಯಲ್ಲಿ ಹಾಗೂ ಉಮಾಶಂಕರ, ಜಾನಕಿರಾಮ, ರಾಧಾಕೃಷ್ಣ ಮುಂತಾದ ಹೆಸರುಗಳನ್ನು ಹೇಳಿ ಸ್ತ್ರೀಯರಿಗೆ ಮೊದಲ ಪ್ರಾಶಸ್ತ್ಯ ಕೊಡಲಾಗಿದೆ ಎಂದು ವಾದಿಸಲಾಗುತ್ತದೆ. ಮತ್ತೊಂದು ಕಡೆ ಹೆಣ್ಣು ಪರಾವಲಂಬಿ, ಅಬಲೆ, ಆಶ್ರಯವಿಲ್ಲದೇ ಬದುಕಲಾರಳು ಎಂಬ ನಂಬಿಕೆ ಕೂಡಾ ಇದೆ. ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಪತಿ ಹಾಗೂ ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿರಬೇಕು. "ಅವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ" ಎಂಬ ಮನುಮಹಾಶಯನ ಉವಾಚ ಇದೆ. ಅವಳು ತಾಯಿ, ಮಗಳು, ಸೊಸೆ, ಹೆಂಡತಿಯಾಗಿ ಮಾತ್ರ ಗುರುತಿಸಲ್ಪಟ್ಟಿದ್ದಾಳೆಯೇ ಹೊರತು ಸ್ವತಂತ್ರ ಅಸ್ತಿತ್ವ ಹೊಂದಿದ ವ್ಯಕ್ತಿಯಾಗಿ ಅಲ್ಲ. ಕನ್ಯಾದಾನ, ಅತಿಸರ್ಗ, ವಿಕ್ರಯಗಳ ಮೂಲಕ ಇನ್ನೊಂದು ಕುಟುಂಬಕ್ಕೆ ವರ್ಗಾಯಿಸಲ್ಪಡುವ ವಸ್ತುವಾಗಿದ್ದಾಳೆ. ಪಿತೃ ಕುಟುಂಬದಲ್ಲಿ ಅವಳಿಗೆ ಬೇರುಗಳಿಲ್ಲ. ಸಾಂಪ್ರದಾಯಿಕವಾಗಿ ಬ್ರಹ್ಮಚರ್ಯ ಆಶ್ರಮದಿಂದ ವಂಚಿತಳಾದ ಮಹಿಳೆ ಶಿಕ್ಷಣ ಪಡೆಯುವ ಅರ್ಹತೆ ಹೊಂದಿಲ್ಲ ಹಾಗೂ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು ಅವಳಿಗೆ ನಿರಾಕರಿಸಲಾಗಿದೆ. ಕೆಲಸದಲ್ಲಿ — ದಾಸಿಯಂತೆ, ಪಾಲನೆಯಲ್ಲಿ — ತಾಯಿಯಂತೆ, ಶಯನದಲ್ಲಿ—ವೇಶ್ಯೆಯಂತೆ, ಸಲಹೆಯಲ್ಲಿ-ಮಂತ್ರಿಯಂತೆ ಮುಂತಾಗಿ ಆರು ಗುಣಗಳನ್ನು ಅವಳಿಗೆ ಆರೋಪಿಸಲಾಗಿದೆ. "ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ", "ಸ್ತ್ರೀಯರ ಬುದ್ಧಿ ಮೊಣಕಾಲ ಕೆಳಗೆ" ಎಂಬ ಗಾದೆಗಳು ಪ್ರಚಲಿತವಾಗಿವೆ. ಸಾಮಾಜಿಕವಾಗಿ ಹಲವು ವಂಚನೆಗೆ ಒಳಗಾದ ಮಹಿಳೆ ಆರ್ಥಿಕವಾಗಿಯೂ ಶೋಷಣೆಗೆ ಒಳಗಾಗಿದ್ದಾಳೆಂಬುವದು ನಿರ್ವಿವಾದ. ಆದ್ದರಿಂದಲೆ ಆಧುನೀಕರಣದ ಪ್ರವೇಶದೊಂದಿಗೆ ಮಹಿಳಾ ಸಮಾನತೆ, ಮಹಿಳಾ ಸ್ವಾತಂತ್ರ್ಯ, ಮಹಿಳಾ ವಿಮೋಚನಾ ಚಳುವಳಿಗಳು ರೂಪಗೊಂಡು "ಮಹಿಳಾ ವರ್ಷ", "ಮಹಿಳಾ ದಿನ"ಗಳ ಆಚರಣೆಯಲ್ಲಿ ಪರ್ಯವಸಾನಗೊಂಡಿವೆ.

ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ ಸೈದ್ಧಾಂತಿಕ ವರ್ಣನೆ ಹಾಗೂ ವಾಸ್ತವಿಕ ಆಚರಣೆಯ ಮಧ್ಯ ಅಪಾರ ಕಂದಕವಿದೆ. ಪೌರಾಣಿಕ ಸಾಹಿತ್ಯವನ್ನು ಈ ಚಾರಿತ್ರಿಕ ದಾಖಲೆ ಎಂದು ನಂಬಲಾಗಿದೆ. ಮೈತ್ರಿ, ಗಾರ್ಗಿಯರ ಉದಾಹರಣೆ ಉಲ್ಲೇಖಿಸುತ್ತಾ, ಸೀತೆ, ದ್ರೌಪತಿಯರನ್ನು ವರ್ಣಿಸುತ್ತಾ ಮಹಿಳೆಯರ ಬದುಕನ್ನು ವೈಭವೀಕರಿಸಲಾಗಿದೆ. ಮೀರಾಬಾಯಿ, ಅಕ್ಕಮಹಾದೇವಿಯವರಂಥವರು ಆಧ್ಯಾತ್ಮಿಕ ಮಟ್ಟದ ಸಮಾನತೆ ಪಡೆದಿರಬಹುದು. ಇವೆಲ್ಲಾ ಹೊರತಾದ ಉದಾಹರಣೆಗಳು. ನೀತಿ, ಶೀಲಗಳ ಗುತ್ತಿಗೆಯನ್ನು ಮಹಿಳೆಯರ ಮೇಲೆ ಹೇರಲಾಗಿದೆ. ಶೀಲದ ಗುತ್ತಿಗೆ ಮಹಿಳೆಯರಿಗೆ ಏಕೆ ಎಂಬ ಪ್ರಶ್ನೆಗೆ ಜೈವಿಕವಾಗಿ ರಕ್ತ ಸಂಕರಗೊಳ್ಳುವದು ಮಹಿಳೆಯ ದೇಹದೊಂದಿಗೆ

ಮಾತ್ರ ಎಂಬ ಜಾಣತನದ ಉತ್ತರ ಕೊಡಲಾಗುತ್ತಿದೆ. ಇತ್ತೀಚೆಗೆ ರಾಜಾರಾಮ ಮೋಹನ್‌ರಾಯ್, ದಯಾನಂದ ಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ, ಮಹಾತ್ಮಾ ಗಾಂಧಿ ಮುಂತಾದ ಸಮಾಜ ಸುಧಾರಕರು ಸಮಾಜ ಸುಧಾರಣಾ ಚಳುವಳಿಯೊಂದಿಗೆ ಮಹಿಳಾ ಸುಧಾರಣಾ ಚಳುವಳಿಯನ್ನು ವ್ಯವಸ್ಥೆಯ ಚೌಕಟ್ಟಿನೊಳಗೆ ಪ್ರಾರಂಭಿಸಿದರು. ಮಹಿಳೆಯರಿಗೆ ಮತದಾನದ ಹಕ್ಕು ತೀರ ಇತ್ತೀಚಿನದು ಎಂದು ಹೇಳಿದರೆ ಉತ್ಪ್ರೇಕ್ಷೆ ಯಾಗಲಾರದು.

ಬದುಕಿನ ಹಲವು ಪ್ರಕ್ರಿಯೆಗಳಲ್ಲಿ ಮಹಿಳೆ ಪುರುಷನೊಂದಿಗೆ ಹೇಗೆ ಪಾಲ್ಗೊಳ್ಳು ತ್ತಿದ್ದಾಳೆಂದು ಅವಲೋಕಿಸುವ ಮೂಲಕ ಮಹಿಳಾ ಶೋಷಣೆಯ ಸ್ವರೂಪವನ್ನು ಚಿತ್ರಿಸಬಹುದು. ಬೇಟೆಯ ಯುಗ, ಪ್ರಾಣಿಸಾಕಾಣಿಕೆಯ ಯುಗದಲ್ಲಿ ಅಲೆಮಾರಿ ಯಾಗಿದ್ದ ಮಾನವನ ಬದುಕಿನಲ್ಲಿ ಮಹಿಳೆ ಹೆಚ್ಚು ಸಮಾನತೆ, ಸ್ವಾತಂತ್ರ್ಯ ಪಡೆದಿದ್ದ ಳೆಂದು ಹೇಳಲಾಗುತ್ತಿದೆ. ಆದರೂ ಗಂಡು ಬೇಟೆಯಾಡುವ ಚಿತ್ರ ಲಭ್ಯವಿವೆಯೆ ಹೊರತು ಹೆಣ್ಣು ಬೇಟೆಯಾಡುವ ಚಿತ್ರ ದಾಖಲೆಗಳಿಲ್ಲ. ವ್ಯವಸಾಯ ಯುಗದ ಪ್ರಾರಂಭದೊಡನೆ ಹೊಲಕ್ಕೆ ಪುರುಷ ಒಲೆಗೆ ಸ್ತ್ರೀ ಎಂಬ ಸರಳ ಶ್ರಮವಿಭಜನೆ ರೂಪ ಗೊಂಡಿರಬಹುದು. ನೈಸರ್ಗಿಕವಾಗಿ ಹೆಚ್ಚು ತೋಳ್ಬಲ ಹೊಂದಿದ ಗಂಡು ಕುಟುಂಬದ ಹೊರಗೆ ದುಡಿದರೆ, ಗೃಹ ಕೃತ್ಯದ ಕಾರ್ಯಗಳಿಗೆ ಹೆಣ್ಣು ತನ್ನನ್ನು ಅರ್ಪಿಸಿಕೊಂಡಿರ ಬಹುದು. ಕೃಷಿವೃತ್ತಿ ಹೆಚ್ಚು ಶ್ರಮಜೀವಿಗಳನ್ನು ಅಪೇಕ್ಷಿಸುವದರಿಂದ, ಪುರುಷ ತನ್ನ ಪೌರುಷ ಮೆರೆಸಲು ಬಹುಪತ್ನಿತ್ವ ಜಾರಿಯಲ್ಲಿ ತಂದಿರಬಹುದು. ಮಹಿಳೆ ಪುರುಷನ ತೊತ್ತು, ಭೋಗದ ವಸ್ತು ಎಂಬ ನಂಬಿಕೆ ಬೆಳೆದಿರಬಹುದು. ವಿಜ್ಞಾನದ ಬೆಳವಣಿಗೆ, ಔದ್ಯಮೀಕರಣ ಕೂಡ ಪುರುಷಪಕ್ಷಪಾತಿಯಾಗಿಯೇ ಬೆಳೆಯತೊಡಗಿದೆ.

ಆಧುನಿಕ ಸ್ವತಂತ್ರ ಭಾರತದಲ್ಲಿ ಸಂವಿಧಾನಾತ್ಮಕವಾಗಿ ಮಹಿಳೆ ಸಮಾನಳು. ಆದರೆ, ಬದುಕಿನ ಎಲ್ಲ ಹೆಜ್ಜೆಗಳಲ್ಲಿ ಅವಳು ಅಸಮಾನತೆ ಅನುಭವಿಸುತ್ತಿದ್ದಾಳೆ. ಇತಿ ಹಾಸದ ಯಾವ ಕಾಲದಲ್ಲಿಯೂ ಮಹಿಳೆ ಆರ್ಥಿಕ ಸ್ವಾತಂತ್ರ್ಯ ಪಡೆದು ಸ್ವಾವಲಂಬಿಯಾಗಿ ಬದುಕುವ ಅವಕಾಶ ಹೊಂದಿಲ್ಲ. ಇದರಿಂದ ಅವಳು ತನ್ನ ಕ್ರಿಯಾಶೀಲತೆ ಕಳೆದು ಕೊಂಡು ವ್ಯವಸ್ಥೆಯೊಂದಿಗೆ ನಿರಂತರ ಹೊಂದಾಣಿಕೆ ಮಾಡಿಕೊಳ್ಳುತ್ತಲೇ ಬಂದಿದ್ದಾಳೆ. ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಎಲ್ಲಾ ಸ್ವಾತಂತ್ರ್ಯಗಳೂ ಶೂನ್ಯವೆಂಬುವದು ಅಷ್ಟೇ ಸತ್ಯ. ಭಾರತದ ಎಲ್ಲ ಮಹಿಳೆಯರ ಸ್ಥಿತಿಯನ್ನು ಒಂದೆ ತಕ್ಕಡಿಯಲ್ಲಿಟ್ಟು ತೂಗುವದು ಕಠಿಣ. ಇಲ್ಲಿ ಎಲ್ಲ ಮಹಿಳೆಯರು ಆರ್ಥಿಕ ಶೋಷಣೆಗೆ ಒಳಗಾಗಿದ್ದಾರೆಂದು ಸಾರ್ವತ್ರೀಕರಣ ಗೊಳಿಸುವಂತಿಲ್ಲ. ಏಕೆಂದರೆ, ಜಾತಿ, ವರ್ಗ, ಶಿಕ್ಷಣ, ಮುಂತಾದ ಸಾಮಾಜಿಕ ಬೇಲಿ ಗಳಲ್ಲಿ ಬೇರೆ ಬೇರೆ ಗುಂಪಿನ ಮಹಿಳೆಯರು ಸೇರ್ಪಡೆಯಾಗುತ್ತಾರೆ.

ಮೇಲಿನ ಜಾತಿಗಳಲ್ಲಿ ಮಹಿಳೆ ವೈದಿಕ ಪರಂಪರೆಗೆ ಪಕ್ಕವಾಗಿ ಪಂಚಕನ್ಯೆಯರ

ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದಾಳೆ. ಪತಿ ಕ್ರೂರಿ, ಲಂಪಟ, ರೋಗಿಷ್ಟನಾಗಿದ್ದರೂ ಅವನ ಸೇವೆಯಲ್ಲಿ ಮೋಕ್ಷ ಕಂಡುಕೊಳ್ಳಬೇಕು. ಇಲ್ಲಿ ಮಹಿಳೆ ಜೀವಂತ ಶವವಾಗಿದ್ದಾಳೆ. ಕೆಳಜಾತಿಗಳಲ್ಲಿ ಮಹಿಳೆ ಉಡಿಕೆ, ಕೂಡಿಕೆ, ವಿಧವಾಪುನರ್‌ವಿವಾಹದ ಸೌಲಭ್ಯ ಪಡೆದಿದ್ದಾಳೆ. ಗಂಡನ ಅಧಿಕಾರಶಾಹಿತ್ವದ ವಿರುದ್ಧ ಕೆಳಜಾತಿ ಮಹಿಳೆ ಬಂಡಾಯ ಏಳಬಹುದು. ಬಂಡಾಯದ ಸಂಕೇತವಾಗಿ ತನ್ನ ತಾಳಿಯನ್ನು ಹರಿದೊಗೆದರೆ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ, ಮೇಲ್ಜಾತಿ ಮಹಿಳೆಗೆ ಮಂಗಲಸೂತ್ರ ಕನಸಿನಲ್ಲಿ ಹರಿದರೂ ಉದ್ವೇಗಕ್ಕೆ ಒಳಗಾಗುತ್ತಾಳೆ. ಬಹುಶಃ ಆರ್ಥಿಕ ಸ್ವಾತಂತ್ರ್ಯವು ಇತರ ಸ್ವಾತಂತ್ರ್ಯಗಳನ್ನೂ ಕೆಳಜಾತಿಯ ಮಹಿಳೆಗೆ ನೀಡಿರಬಹುದು. ಆರ್ಥಿಕವಾಗಿ ಪರಾವಲಂಬಿಯಾದ ಮೇಲ್ಜಾತಿಯ ಮಹಿಳೆ "ಪತಿಪಾದವೇ ಗತಿ" ಎಂಬ ಅನಿವಾರ್ಯತೆಯನ್ನು ಒಪ್ಪಲೇಬೇಕಾಗುತ್ತದೆ.

ವರ್ಗಗಳ ಆಧಾರದ ಮೇಲೆ ಮಹಿಳೆಯರ ಬದುಕಿನ ಸ್ವರೂಪ ಹೆಚ್ಚು ಗೊಂದಲವಾಗಿದೆ. ಮೇಲಿನ ವರ್ಗಕ್ಕೆ ಹೋದಂತೆಲ್ಲಾ ಮಹಿಳೆ ಶಯನಕ್ಕೆ ರಂಭೆಯಾಗುತ್ತಾಳೆಯೇ ಹೊರತು ಸಲಹೆಗೆ ಮಂತ್ರಿಯಾಗಿ ಉಳಿಯುವುದಿಲ್ಲ. ಪುರುಷನ ಅಂತಸ್ತನ್ನು ಅಭಿವ್ಯಕ್ತಗೊಳಿಸುವ ಸಾಧನವಾಗಿ ಅವಳು ರೂಪಗೊಳ್ಳುತ್ತಾಳೆ. ಕ್ಲಬ್, ಕಾರ್, ಫ್ಯಾಶನ್, ಆಡಂಬರದ ಬದುಕಿನ ತಿರುಗುಣಿ ಮಡುವಿನಲ್ಲಿ ಅವಳ ಬದುಕು ಗಿರಕಿ ಹೊಡೆಯುತ್ತದೆ. ಮಹಿಳೆ ದುಡಿಯಲು ಹೊಸ್ತಿಲು ದಾಟಿ ಹೋಗುವದೇ ಮರ್ಯಾದೆಗೆ ಕಲಂಕ ಎಂದು ಮೇಲಿನ ವರ್ಗ ನಂಬಿರುತ್ತದೆ. ಆದ್ದರಿಂದ ಇಲ್ಲಿ ಮಹಿಳೆ ಒಂದು ರೀತಿ ಗೃಹಬಂಧನದಲ್ಲೇ ಇದ್ದಂತೆ. ಕೆಳವರ್ಗಕ್ಕೆ ಬಂದಂತೆ ಕುಟುಂಬ ನಿರ್ವಹಣೆಯಲ್ಲಿ ಪುರುಷನಿಗೆ ಸಮನಾಗಿ ಶ್ರಮಿಸುತ್ತಾಳೆ. ಅವಳ ಶೋಷಣೆ ಇಲ್ಲಿ ಕಡಿಮೆ. ಆಧುನಿಕ, ವಿದ್ಯಾವಂತೆ, ಉದ್ಯೋಗಸ್ಥ ನಗರೀಕರಣ ಹೊಂದಿದ ಮಹಿಳೆಯ ಆರ್ಥಿಕ ಶೋಷಣೆ ಹೆಚ್ಚು ಸಂಕೀರ್ಣವಾಗಿದೆ. ಈ ಗುಂಪಿನ ಮಹಿಳೆ ತಾನೇ ಸ್ವತಃ ದುಡಿಯುತ್ತಿದ್ದರೂ ಸ್ವತಂತ್ರವಾಗಿ ವೆಚ್ಚಮಾಡುವ ಅಧಿಕಾರ ಹೊಂದಿರುವುದು ಕಡಿಮೆ. ಪಿತೃ ಅಥವಾ ಪತಿಗೆ ತನ್ನ ಸಂಬಳದ ಜಮಾ ಖರ್ಚು ಒಪ್ಪಿಸಬೇಕಾಗುತ್ತದೆ. ಮಹಿಳಾ ಶೋಷಣೆಯ ಮುಖಗಳು ಇನ್ನೂ ಹೆಚ್ಚು ವಿಶಾಲವಾಗಿದೆ. ಬಾಲಮಹಿಳಾ ಕಾರ್ಮಿಕರು ಹಾಗೂ ಮಹಿಳಾ ಕಾರ್ಮಿಕರು ಹೆಚ್ಚು ಶೋಷಣೆಗೆ ಒಳಗಾಗಿದ್ದಾರೆ. ಅವರ ಸಂಬಳದ ಸ್ವರೂಪವೇ ಬೇರೆಯಾಗಿರುತ್ತದೆ. ಬೀಡಿ, ಊದುಬತ್ತಿ, ಗೃಹನಿರ್ಮಾಣ ಉದ್ದಿಮೆಗಳಲ್ಲಿ ತೊಡಗಿದ ಮಹಿಳೆ ಆರ್ಥಿಕ ಶೋಷಣೆಗೆ ಒಳಗಾಗಿದ್ದಾಳೆ. ಮಹಿಳೆ ಉತ್ತಮ ಶಿಕ್ಷಕಿಯಾಗಬಲ್ಲಳೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ, ಅವಳ ಸೇವೆಗೆ ದೊರೆಯುವ ಪ್ರತಿಫಲ ಕಡಿಮೆ ಎಂಬುದು ಎಲ್ಲರಿಗೂ ಗೊತ್ತಿರುವ ಮುಕ್ತ ರಹಸ್ಯ. ಕುಟುಂಬದ ಹೊರಗೆ ದುಡಿಯುವ ಮಹಿಳೆ ಅತೀ ಹೆಚ್ಚು ಶೋಷಣೆಗೆ ಒಳಗಾಗಿದ್ದಾಳೆ.

ಅವಳು ಗೃಹಕೃತ್ಯದ ಕಾರ್ಯ ಪೂರೈಸಿ ಸಂಬಳ ತರುವ ವೃತ್ತಿಯನ್ನೂ ಪೂರೈಸ ಬೇಕು. ಪತ್ನಿ ಪೂರೈಸುವ ಗೃಹಕೃತ್ಯದ ಕಾರ್ಯಗಳನ್ನು ಹಣದ ರೂಪದಲ್ಲಿ ಅಳೆಯುವುದಿಲ್ಲ. ಕುಟುಂಬದ ಹೊರಗೆ ದುಡಿದು ಬಂದ ಗಂಡು ಮನೆಯಲ್ಲಿ ವಿರಾಮ ಪಡೆಯುತ್ತಾನೆ. ಆದರೆ. ಉದ್ಯೋಗಸ್ಥ ಮಹಿಳೆಗೆ ವಿರಾಮವೆಂಬುದೇ ಇಲ್ಲ. ಈ ವರ್ಗದ ಮಹಿಳೆಯಲ್ಲಿ ಪ್ರಜ್ಞೆ ಇರಬಹುದು ಆದರೆ, ಸಾಮಾಜಿಕ ಅಸಹಾಯಕತೆ ಅವಳನ್ನು ಆವರಿಸಿದೆ. ಮಹಿಳಾ ಶೋಷಣೆಯ ಕರಾಳ ಮುಖವನ್ನು ದೇಹಮಾರಾಟದ ಕ್ಷೇತ್ರ ದಲ್ಲಿ ವಿಕೃತ ರೂಪದಲ್ಲಿ ಕಾಣಬಹುದು. ಚಲನಚಿತ್ರ, ಜಾಹೀರಾತು ಕ್ಷೇತ್ರದಲ್ಲಿ ಮಹಿಳಾ ಶೋಷಣೆ ಇನ್ನೂ ಹೆಚ್ಚು ಗಂಭೀರವಾಗಿದೆ.

ಒಂದು ಕಾಲಕ್ಕೆ ಕನ್ಯಾಶುಲ್ಕ ಕೊಟ್ಟು ಹೆಣ್ಣನ್ನು ತರುವ ಸಂಪ್ರದಾಯ ರೂಢಿತವಾಗಿತ್ತು. ಈಗ ವರದಕ್ಷಿಣೆ ಪ್ರಚಲಿತವಾಗಿದೆ. ಈ ಬದಲಾದ ಸಂಪ್ರದಾಯಕ್ಕೆ ತಾಂತ್ರಿಕ ಬೆಳವಣಿಗೆ ಹಾಗೂ ತರತಮ ಮೌಲ್ಯಗಳು ಕಾರಣ ಎಂದು ಹೇಳಬಹುದು. ಮಹಿಳೆ ಪಿತೃ ಕುಟುಂಬದಿಂದ ಪತಿಕುಟುಂಬಕ್ಕೆ ವರ್ಗಾಯಿಸಲ್ಪಡುವಾಗ ಪಿತೃ ಕುಟುಂಬಕ್ಕೆ ಆಗುವ ನಷ್ಟವನ್ನು ತುಂಬಿಕೊಡುವ ಸಂಕೇತವಾಗಿ ತೆರವು ಕೊಡುವ ಪದ್ಧತಿ ರೂಪಗೊಂಡಿರಬಹುದು. ಧರ್ಮಶಾಸ್ತ್ರಗಳಲ್ಲಿ ಇದನ್ನು “ಅಸುರ ಪದ್ಧತಿ” ಎಂದು ವರ್ಣಿಸಲಾಗಿದೆ. ಆಧುನೀಕರಣ ಪ್ರಾರಂಭವಾದಂತೆ ಗಂಡಿನ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ಬಂದಿತು. ಆಧುನಿಕ ಪಾಶ್ಚಾತ್ಯ ಶಿಕ್ಷಣ ಪಡೆದ ಗಂಡು ಹೊಸ ವೃತ್ತಿಗಳನ್ನು ಅವಲಂಬಿಸಿ ಹೆಚ್ಚು ಆದಾಯ ತರತೊಡಗಿದ. ಮಹಿಳೆ ಅನಾಯಾಸ ವಾಗಿ ಅವನ ಆದಾಯದಲ್ಲಿ ಪಾಲ್ಗೊಳ್ಳುವ ಪರಾವಲಂಬಿ ಜೀವಿಯಾದಳು. ಇಂದಿಗೂ ಮಹಿಳೆಯರ ಶಿಕ್ಷಣ ಆಕಸ್ಮಿಕವಾಗಿದೆಯೇ ಹೊರತು ಉದ್ದೇಶಪೂರ್ವಕವಾಗಿಲ್ಲ, ಯೋಗ್ಯ ವರ ಸಿಗುವವರೆಗೆ ಮಾತ್ರ ಹುಡುಗಿಗೆ ಶಿಕ್ಷಣ ಎಂಬ ಅನೌಪಚಾರಿಕ ಗ್ರಹಿಕೆ ಇದೆ. ವೆಚ್ಚದಾಯಕ ಶಿಕ್ಷಣ ಪಡೆದು ಹೆಚ್ಚು ಆದಾಯ ತರುವ ಗಂಡಿಗೆ ಹೆಚ್ಚು ವರದಕ್ಷಿಣೆ ಕೊಡುವ ಸ್ಪರ್ಧೆಯೇ ಉಂಟಾಗಿದೆ. ಮಹಿಳೆಯರ ದುಡಿಮೆ ಹಾಗೂ ಕ್ರಿಯಾಶೀಲತೆಯನ್ನು ಅಪಮೌಲ್ಯಗೊಳಿಸಿದ್ದರ ಪರಿಣಾಮ ಇದು ಎಂದು ಹೇಳ ಬಹುದು. ಆಧುನಿಕ ತಂತ್ರಜ್ಞಾನದ ಬೆಳವಣಿಗೆ ಮಹಿಳೆಯರನ್ನು ಗುಲಾಮರನ್ನಾಗಿಸು ವಲ್ಲಿ ನೆರವಾಗಿವೆ ಎಂದು ಹೇಳಬಹುದು. ಇಂದು ವರದಕ್ಷಿಣೆಯ ಬದಲು ಉದ್ಯೋಗಸ್ಥ ವಧು ಬೇಕೆಂಬ ವಿಚಾರ ಮಹಿಳೆಯರ ದುಡಿಮೆಗೆ ದೊರೆತ ಪ್ರಾಧಾನ್ಯತೆಯಾಗಿದೆ.

ಮಹಿಳೆಯರನ್ನು ಆರ್ಥಿಕ ಶೋಷಣೆಯಿಂದ ಮುಕ್ತಗೊಳಿಸಿ ಸಾಮಾಜಿಕ ಸಮಾನತೆ ತರಲು ಹಲವಾರು ಶಾಸನಗಳು ಕಾರ್ಯಗತಗೊಂಡಿವೆ. ಆದರೆ, ಅವೆಲ್ಲವೂ ಕಾಗದದ ಹುಲಿಯಾಗಿ ಉಳಿದಿವೆ. ಮಹಿಳೆಯರಿಗೆ ಶೇಕಡಾ ಮೂವತ್ತರಷ್ಟು ಮೀಸಲಾತಿ ಕೊಡಬೇಕೆಂಬ ಆಲೋಚನೆಯು ಇದೆ.

ಭಾರತೀಯ ನಾರಿ ಇಂದು ಪರ್ವಕಾಲದಲ್ಲಿದ್ದಾಳೆ. ಸಮರ್ಪಣ ಭಾವದ ಸಾಂಪ್ರದಾಯಿಕ ಮಹಿಳೆ ಶೋಷಣೆಯ ಪ್ರಜ್ಞೆಯಿಂದ ದೂರ ಇರಬಹುದು. ಆಧುನೀಕರಣಗೊಂಡ ಮಹಿಳೆ ವಿಮೋಚನೆಗಾಗಿ ಆಲೋಚಿಸುತ್ತಿರಬಹುದು. ಆದರೆ ಒಟ್ಟು ಬದುಕಿಗೆ ಹೆಣ್ಣು-ಗಂಡಿನ ಹೊಂದಾಣಿಕೆಯ ಅನಿವಾರ್ಯ ಅವಶ್ಯಕತೆ ಇದೆ ಎಂಬುದನ್ನು ಮರೆಯುವಂತಿಲ್ಲ. "ವಿಮೋಚನಾ ಚಳುವಳಿ" ತೀವ್ರ ಸ್ವರೂಪ ಪಡೆದು ಮಾತೃತ್ವವನ್ನೇ ಮಹಿಳೆ ನಿರಾಕರಿಸಿದರೆ ಮನುಕುಲಕ್ಕೆ ಅಪಾಯವಿದೆ. ಸಮಾಜದ ಅಡಿಗಲ್ಲಾದ ಕುಟುಂಬ ವಿಛಿದ್ರಗೊಳ್ಳಬಹುದು. "ಸಮರಸವೇ ಜೀವನ" ಎಂಬ ಬದುಕಿನ ರಹಸ್ಯವನ್ನು ಗಂಡು-ಹೆಣ್ಣು ಪರಸ್ಪರ ಅರಿತುಕೊಂಡರೆ ಜೀವನ ಸರ್ವಾಂಗ ಸುಂದರ ಆಗಬಹುದು.

ಶೀತಲ ರಾತ್ರಿ

— ಮೂಲ : ಹೋಚಿಮಿನ್

ಹೇಮಂತದ ಈ ಕೊರೆಯುವ
ಚಳಿರಾತ್ರಿಯಲ್ಲಿ
ನನಗಾದರೂ
ಹಾಸಲಿಲ್ಲ, ಹೊದೆಯಲಿಲ್ಲ,
ನನಗೆ ನಾನೆ
ಮುದುರಿಕೊಳ್ಳೆ
ಚಳಿಯುನೀಗಲು.
ಒಮ್ಮೆ ಕೂಡ
ರೆಪ್ಪೆ ಮುಚ್ಚಲಾಗ-
ಲಿಲ್ಲವು!
ಹಿಮಕಿರಣನ
ಹಾಲ್‌ಬೆಳಕದು
ಬಾಳೆ ಎಲೆಯ ಮೇಲೆ ಬಿದ್ದು
ಹೆಚ್ಚುತಲಿದೆ
ಚಳಿ ಇನ್ನೂ!
ಕಿಟಕಿ ಕಂಬಿಯಾಚೆ
ಕಾಣುತ್ತಿದೆ ಕೃತ್ತಿಕೆಯ ಪುಂಜ!

— ಅನುವಾದ: ರಾ. ಲಕ್ಷ್ಮೀನಾರಾಯಣ

ಆರ್. ಲಕ್ಷ್ಮೀನಾರಾಯಣ, ರೀಡರ್, ಕನ್ನಡ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ಕೋಲಾರ

ಸರಜೂ ಕಾಟ್ಕರ್‌ರವರ ಎರಡು ಕವನಗಳು

ಹೀಗೇ ಒಬ್ಬ ಶಕುಂತಲೆ

ತನ್ನ ಬಿಂಬವ ನೋಡಿ ಹೊಳೆಯಲ್ಲಿ ತಾನೇ ಮೋಹಗೊಂಡಳು
ಬೆಳದಿಂಗಳನ್ನು ಮುಖಕ್ಕೆ ಪೌಡರಾಗಿ ಲೇಪಿಸಿಕೊಂಡಳು

ಮಿನುಗುವ ನಕ್ಷತ್ರಗಳ ಮಾಲೆ ಪೋಣಿಸಿ
ಸೂರ್ಯನನ್ನು ಬೆಂಡೋಲೆ ಮಾಡಿ
ಮಿಣುಕುಹುಳುವಿನ ಮೂಗುತಿ ಹಾಕಿ
ಹುಣ್ಣಿಮೆ ಚಂದ್ರನನ್ನು ಕುಂಕುಮವಾಗಿ ಏರಿಸಿದಳು

ಕರಿ ಕರಿ ಮೋಡಗಳ ಕೂದಲು ರಾಶಿ
ಅಂಬರವನ್ನೆಲ್ಲ ಮೈಗೆ ಸುತ್ತಿ

ನಗುವಿಗೆ ಜೀವಂತ ಮೋನಾಲಿಸಾ ಬೆರೆಸಿ
ನಡಿಗೆಗೆ ನವಿಲಿನ ಲಾಸ್ಯವ ಸೇರಿಸಿ

ಹೀಗೇ ಒಬ್ಬ ಶಕುಂತಲೆ
ಹೊರಟಳು
ದುಷ್ಯಂತನ
ಬೇಟೆಯನ್ನರಸಿ.

ಈತ ಮತ್ತು ಆತ

ಈತನಿಗೂ ತಿಳಿಯುತ್ತದೆ
ಆತನಿಗೂ ತಿಳಿಯುತ್ತದೆ
.... ಹಾಗಿದ್ದರೆ ತಿಳಿಯದವನು ಯಾರವನು ?

ಈತನಿಗೂ ಅರ್ಥವಾಗುತ್ತದೆ
ಆತನಿಗೂ ಅರ್ಥವಾಗುತ್ತದೆ
.... ಹಾಗಿದ್ದರೆ ಅರ್ಥವಾಗದವನು ಯಾರವನು ?

ಸರಜೂ ಕಾಟ್ಕರ್, ಜಿಲ್ಲಾ ವರದಿಗಾರ, ಇಂಡಿಯನ್ ಎಕ್ಸ್‌ಪ್ರೆಸ್/ಕನ್ನಡಪ್ರಭ, ಬೆಳಗಾವಿ

ಈತನೂ ನಗುತ್ತಾನೆ
ಆತನೂ ನಗುತ್ತಾನೆ
.... ಹಾಗಿದ್ದರೆ ನಗಲಾರದವನು ಯಾರವನು ?

ಈತನಿಗೂ ಬಡಿಯುತ್ತದೆ
ಆತನಿಗೂ ಬಡಿಯುತ್ತದೆ
.... ಹಾಗಿದ್ದರೆ ಬಡಿದವನು ಯಾರವನು ?

ಈತನೂ ಸಾಯುತ್ತಾನ
ಆತನೂ ಸಾಯುತ್ತಾನೆ
.... ಹಾಗಿದ್ದರೆ ಸಾಯಿಸಿದವನು ಯಾರವನು ?

ಈತನೂ ಇಲ್ಲ
ಆತನೂ ಇಲ್ಲ
.... ಹಾಗಿದ್ದರೆ ಇದ್ದವನಾದರೂ ಯಾರವನು ?

— ಸರಜೂ ಕಾಟ್ಕರ್

ಆರ್ಫಿಸಂ

— ಜಾರ್ಜ್ ಥಾಮ್ಸನ್

ಪೆಸಿಸ್ಟ್ರೇಟಸ್ ಜಾರಿಗೊಳಿಸಿದ ಧಾರ್ಮಿಕ ಸುಧಾರಣೆಗಳು ಅವನ ಆಡಳಿತ ನೀತಿಯ ಅವಿಭಾಜ್ಯ ಅಂಗಗಳಾಗಿದ್ದವು. ಶ್ರೀಮಂತ ವರ್ಗ ಅನುಭವಿಸುತ್ತಿದ್ದ ರಾಜಕೀಯ ಸವಲತ್ತುಗಳನ್ನು ಮುರಿಯುವುದೆ ಅವನ ಉದ್ದೇಶವಾಗಿತ್ತು. ಶ್ರೀಮಂತರು ಧರ್ಮದ ಮೇಲಿನ ತಮ್ಮ ಹಿಡಿತವನ್ನು ವರ್ಗ ಪ್ರಾಡ್ಧಾಳಿಕೆಗೆ ಬಳಸುತ್ತಿದ್ದರು. ಪೆಸಿಸ್ಟ್ರೇಟಸ್ ತನ್ನ ವರ್ಗದ ಧಾರ್ಮಿಕ ನಂಬಿಕೆಗೆ ಅಧಿಕೃತ ಪ್ರೋತ್ಸಾಹ ನೀಡಿ ಶ್ರೀಮಂತರ ಪ್ರಾಡ್ಧಾಳಿಕೆಯನ್ನು ಮೊಟಕುಗೊಳಿಸಿದ. ಡಯೊನೇಸಸ್ ಪಂಥ ಹೀಗೆ ಪ್ರೋತ್ಸಾಹ ಪಡೆದ ಮುಖ್ಯ ಪಂಥ.

ಬಿದರಹಳ್ಳಿ ನರಸಿಂಹಮೂರ್ತಿ, ಅನಿಮಿಷ, ದುರ್ಗಿಗುಡಿ, ಹೊನ್ನಾಳಿ-577 217

ಉಳ್ಳವರದ್ದಾಗಿರದ ಡಯನೇಸಸ್ ಪಂಥ ಜನಪ್ರಿಯವಾಗಿತ್ತು. ಈ ಪಂಥದ ನಂಬಿಕೆಗಳು ಡಯನೇಸಸ್‌ಗಿಂತ ಹಳೆಯವು ಎನ್ನಬಹುದು. ಅವು ಪ್ರಾಚೀನರ ಕೃಷಿ-ಇಂದ್ರಜಾಲಕ್ಕೆ ಸಂಬಂಧಿಸಿದ್ದವು. ಈ ನಂಬಿಕೆಗಳು ಮತ್ತು ಪದ್ಧತಿಗಳು ಭೂಮಿ ಉಳುತ್ತಿದ್ದ ಕೃಷಿ ಕಾರ್ಮಿಕರ ನಡುವೆ ಮಾತ್ರ ಉಳಿದುಕೊಂಡು ಬಂದಿದ್ದುದು ತುಂಬ ಸ್ವಾಭಾವಿಕವೆ ಆಗಿತ್ತು. ಉತ್ಪಾದನೆಯ ಶ್ರಮದಿಂದ ತಪ್ಪಿಸಿಕೊಂಡಿದ್ದ ಶ್ರೀಮಂತವರ್ಗದಲ್ಲಿ ಅಂಥವೆಲ್ಲ ಉಳಿದುಕೊಳ್ಳುವುದು ಅಸಾಧ್ಯವಷ್ಟೆ.

ಇಂಥ ಆಡಳಿತ ನೀತಿ ಬಳಸಿದ ನಿರಂಕುಶ ಪ್ರಭುಗಳಲ್ಲಿ ಪೆಸಿಸ್ಟ್ರೇಟಸ್ ಮೊದಲಿಗನೇನಲ್ಲ. ಎಪ್ಪತ್ತು ಎಂಭತ್ತು ವರ್ಷಗಳ ಹಿಂದೆಯೇ ಕೊರಿಂಥ್‌ನ ಪೆರಿಯಾಂಡ್ರಸ್ ಮೇಥಿಮ್ನಾದ ಹಾಡುಕವಿ ಅರೇಯನ್‌ಗೆ ಆಶ್ರಯ ನೀಡಿ ಡಯನೇಸಸ್‌ನನ್ನು ಆರಾಧಿಸುವ ಸಮೂಹ ಗೀತೆಯಾದ ಡಿಥಿರ್ಯಾಂಬ್‌ನ ಸೃಷ್ಟಿಗೆ ಕಾರಣನಾಗಿದ್ದ. ಒಂದು ತಲೆಮಾರಿನ ನಂತರ ಸಿಕ್ಯೋನ್‌ನ ಸರ್ವಾಧಿಕಾರಿ ಕ್ಲೀಸ್ಥೆನಸ್ ಎಂಬುವನು ಆರ್ಗೈವ್ ನಾಯಕ ಎಡ್ರೇಸ್ಟಸ್‌ಗೆ ಸಂಬಂಧಿಸಿದ ವಿಧಿಗಳನ್ನು ಈ ಪಂಥಕ್ಕೆ ವರ್ಗಾಯಿಸಿ ಇನ್ನೊಂದು ಆಯಾಮ ತಂದುಕೊಟ್ಟ. ಡೋರಿಯನ್ ಶ್ರೀಮಂತ ವರ್ಗದ ಪ್ರತಿನಿಧಿಯಾಗಿದ್ದ ಎಡ್ರೇಸ್ಟಸ್‌ನನ್ನು ಉಚ್ಚಾಟಿಸಿ ಡಯನೇಸಸ್‌ನನ್ನು ಪ್ರತಿಷ್ಠಾಪಿಸುವಲ್ಲಿ ಕ್ಲೀಸ್ಥೆನಸ್‌ಗಿದ್ದ ಉದ್ದೇಶ ಪೆಸಿಸ್ಟ್ರೇಟಸ್‌ಗೆ ಇದ್ದಂಥದೆ ಆಗಿತ್ತು.

ನಿರಂಕುಶ ಪ್ರಭುತ್ವದ ದಿನಗಳಲ್ಲಿ ನಗರಗಳಿಗೆ ಕಾಲಿಟ್ಟ ಡಯನೇಸಸ್ ಪಂಥ ಮೆಲ್ಲಗೆ ತನ್ನ ಕೃಷಿಕ ಲಕ್ಷಣಗಳನ್ನು ಕಳೆದುಕೊಳ್ಳತೊಡಗಿತು. ಡಯನೀಸಿಯಾ ನಗರದ ಅಥೀನಿಯನ್ ಹಬ್ಬ ನಗರಕ್ರಾಂತಿಯ ಫಲವಾಗಿತ್ತು. ಆದ್ದರಿಂದ ಅದು ತನ್ನ ಗ್ರಾಮೀಣ ಆ್ಯಟಿಕ್ ಗುಣಗಳಿಂದ ದೂರ ಸರಿಯಿತು. ಈ ನಗರಕ್ರಾಂತಿಯ ಧಾರ್ಮಿಕ ಮುಖ ಯಾವ ರೀತಿಯದ್ದಾಗಿತ್ತು ಎಂಬುದು ಕುತೂಹಲದ ಸಂಗತಿ.

ಆರ್ಫಿಸಂ ಎಂನು ಕರೆಯಬಹುದಾದ ಒಂದು ಹೊಸ ಡಯನೇಸಸ್ ಪಂಥ ಕ್ರಿಸ್ತಪೂರ್ವ ಆರನೆ ಶತಮಾನದಲ್ಲಿ ಹುಟ್ಟಿಕೊಂಡಿತು. ಅದು ಏಡ್ರಿಯಾಟಿಕ್ ತೀರದ ಮುಖ್ಯ ಭೂಭಾಗ ಹಾಗೂ ದ್ವೀಪಗಳಲ್ಲಿ ಹರಡಿ ಅವುಗಳ ಆಚೆಗಿದ್ದ ವಸಾಹತುಗಳಿಗೂ ತಲುಪಿತು. ತೀವ್ರ ನಿಷ್ಠೆಯ ಧರ್ಮಪ್ರಚಾರದ ಹಾಗೆ ಹರಡಿದ ಈ ಪಂಥ ಎಲ್ಲಿಂದ ಬಂತು, ಯಾವ ಮುಖೇನ ಬಂತು ಎಂಬುದು ಮುಖ್ಯ.

ಹಾಡುಕವಿ ಅರೇಯನ್‌ನ ವೃತ್ತಾಂತವನ್ನು ಹೆರೊಡಟಸ್ ಹೇಳಿದ್ದಾನೆ: ಕೊರಿಂಥ್‌ನ ಪೆರಿಯಾಂಡ್ರಸ್‌ನ ಆಸ್ಥಾನದಲ್ಲಿ ಸಾಕಷ್ಟು ವರ್ಷ ತಂಗಿದ್ದ ಹಾಡುಕವಿ ಅರೇಯನ್ ಪಶ್ಚಿಮದ ಕಡೆ ಹೊರಟು ಬೇಕಾದಷ್ಟು ಹಣಗಳಿಸಿದ. ಅಲ್ಲಿಂದ ಪುನಃ ಕೊರಿಂಥ್‌ಗೆ ವಾಪಸ್ ಬರಲೆಂದು ಒಂದು ಪುಟ್ಟ ನಾವೆಯನ್ನು ಬಾಡಿಗೆಗೆ ಪಡೆದು, ದಕ್ಷಿಣ ಇಟಲಿಯ ಟರಾಸ್ ಎಂಬಲ್ಲಿಂದ ಪ್ರಯಾಣ ಹೊರಟ. ಆದರೆ ಸಮುದ್ರ

ಯಾನದ ಸಮಯದಲ್ಲಿ ನಾವಿಕರು ಇವನನ್ನು ಕೊಂದು ಹಣ ಲಪಟಾಯಿಸುವ ಸಂಚು ಹೂಡಿದರು. ಇದನ್ನು ತಿಳಿದ ಅರೇಯನ್ ಜೀವದಾನ ಮಾಡಿರೆಂದು ಅವರನ್ನು ಬೇಡಿದ. ಅದಕ್ಕೆ ಒಪ್ಪದ ನಾವಿಕರು ಅವನು ಸಾಯಲು ಎರಡು ದಾರಿ ಸೂಚಿಸಿದರು: ಸಮುದ್ರಕ್ಕೆ ಹಾರಿಕೊಳ್ಳುವುದು ಇಲ್ಲವೆ ನಾವೆಯಲ್ಲೆ ಆತ್ಮಹತ್ಯೆ ಮಾಡಿಕೊಳ್ಳುವುದು. ಆತ್ಮಹತ್ಯೆ ಮಾಡಿಕೊಂಡಲ್ಲಿ ಅವನ ದೇಹವನ್ನು ಸಮುದ್ರ ತೀರದಲ್ಲಿ ಸಮಾಧಿ ಮಾಡುವುದಾಗಿ ಭರವಸೆ ನೀಡಿದರು. ಸುಪ್ರಸಿದ್ಧ ಗಾಯಕನಾದ್ದರಿಂದ ಸಾಯುವುದಕ್ಕೆ ಮೊದಲು ಅವನು ಕಟ್ಟಕಡೆಯ ಹಾಡು ಹಾಡಿಕೊಳ್ಳಲು ತಮ್ಮದೇನು ಅಡ್ಡಿಯಿಲ್ಲ ಎಂದರು. ಹಾಡುಕವಿ ಅರೇಯನ್ ತನ್ನ ಸಾಂಪ್ರದಾಯಿಕ ವೇಷಭೂಷಣ ತೊಟ್ಟು ಲೈರ್ ಬಾರಿಸುತ್ತ ಹಾಡಿದ. ನಂತರ ಸಮುದ್ರಕ್ಕೆ ಹಾರಿಕೊಂಡ. ಒಂದು ಡಾಲ್ಫಿನ್ ಅವನನ್ನು ತನ್ನ ಬೆನ್ನಮೇಲೆ ಕೂರಿಸಿಕೊಂಡು ಸುರಕ್ಷಿತವಾಗಿ ಟೈನರಾಸ್ ಭೂಶಿರಕ್ಕೆ ಕರೆದೊಯ್ದಿತು.

ಇದು ಚರಿತ್ರೆಯಲ್ಲ, ಪುರಾಣ. ಆಗಿನ ಕಾಲದ ಹೂವಿನ ಕುಂಡಗಳ ಮೇಲಿರುವ ಚಿತ್ರಗಳಲ್ಲಿ ಡಯೊನೀಸಸ್ ನಾವೆಯೊಂದರಲ್ಲಿ ಹೋಗುತ್ತಿರುವುದನ್ನೂ ಜೊತೆಯಲ್ಲೇ ಡಾಲ್ಫಿನ್‌ಗಳ ಒಂದು ಪಡೆ ಹೋಗುತ್ತಿರುವುದನ್ನೂ ಕಾಣಬಹುದು. ಆರ್ಫಿಯಸ್ ಕೂಡ ಸುಪ್ರಸಿದ್ಧ ಗಾಯಕನಾಗಿದ್ದ. ಅವನ ಹಾಡು ಕಾಡು ಪ್ರಾಣಿಗಳನ್ನೂ ಮೋಡಿ ಮಾಡುತ್ತಿತ್ತು. ಡಯನೀಸಸ್ ಕೂಡ ಸಮುದ್ರಕ್ಕೆ ಹಾರಿಕೊಂಡಿದ್ದ ತಾನೆ? ಬ್ಯಾಕಸ್ ಭಕ್ತೆಯರು ಆರ್ಫಿಯಸ್‌ನನ್ನು ಕೊಂದು ಅವನ ತಲೆಯನ್ನು ಕಡಿದು ಸಮುದ್ರಕ್ಕೆ ಎಸೆದರು. ಹಾಡು ಕವಿ ಅರೇಯನ್ ಮತ್ತೆ ಕಾಣಿಸಿಕೊಂಡದ್ದು ಹೇಡ್ಸ್‌ನ ನರಕದ್ವಾರವೆನ್ನಿಸಿಕೊಂಡಿದ್ದ ಟೈನರಾಸ್ ಭೂಶಿರದಲ್ಲಿ. ಆರ್ಫಿಯಸ್ ಅಧೋಲೋಕಕ್ಕೆ ಇಳಿದು ಹೋದದ್ದೂ ಇದೆ ದ್ವಾರದ ಮೂಲಕ.

ಪೌರಾಣಿಕ ಅಂಶದ ಜೊತೆಗೆ, ಈ ಕಥೆ ಚಾರಿತ್ರಿಕ ಮಹತ್ವವನ್ನೂ ಪಡೆದಿದೆ. ಕೊರಿಂಥ್ ನಗರವು ಈಜಿಯನ್ ಮತ್ತು ಪಶ್ಚಿಮದ ನಡುವಿನ ಸರಕುಗಳ ಗೋದಾಮು ಆಗಿತ್ತು. ದಬ್ಬಾಳಿಕೆಯನ್ನು ವ್ಯವಸ್ಥಿತಗೊಳಿಸಿದ ಮೊದಲ ನಗರ ಇದೇ. ಲೆಸ್‌ಬಾಸ್‌ನಿಂದ ಬಂದಿದ್ದ ಒಬ್ಬ ಕವಿಯಿಂದ ಡಿಥಿರ್ಯಾಂಬ್ ಎಂಬ ಕಾವ್ಯವು ಈ ನಗರದಲ್ಲಿ ಜನಪ್ರಿಯವಾಯಿತು. ಲೆಸ್‌ಬಾಸ್‌ನ ಸರ್ವಾಧಿಕಾರಿ ಪಿಟ್ಯಾಕೋಸ್ ಬಹುಶಃ ಪೆರಿಯಾಂಡ್ರಸ್‌ನ ಸಮಕಾಲೀನನಾಗಿದ್ದ. ಅಲ್ಲದೆ ಆರ್ಫಿಯಸ್‌ನ ತಲೆಯನ್ನು ಬ್ಯಾಕಸ್ ಭಕ್ತೆಯರು ಎಸೆದದ್ದೂ ಲೆಸ್‌ಬಾಸ್‌ನ ದಡದಲ್ಲಿ. ಅಲ್ಲಿನ ಜನ ಆ ತಲೆಯನ್ನು ಪವಿತ್ರ ಅವಶೇಷದಂತೆ ಕಾಪಾಡಿಕೊಂಡು ಬಂದಿದ್ದಾರೆಂದು ಹೇಳಲಾಗಿದೆ. ಅರೇಯನ್‌ನ ಸ್ವಂತ ಊರಾದ ಲೆಸ್‌ಬಾಸ್‌ನ ಮೆಥಿಮ್ನಾದಲ್ಲಿ ಬೆಸ್ತರು ಬಲೆಬೀಸಿ ಆಲಿವ್ ಮರದಿಂದ ಮಾಡಿದ್ದ ಡಯನೀಸಸ್ ಮುಖವಾಡ ಹಿಡಿದದ್ದು. ಈ ಎಲ್ಲ ನಿದರ್ಶನಗಳು

ಡಯೊನೀಸಸ್ ಪಂಥದ ಪುನರುಜ್ಜೀವನ ಥ್ರೇಸ್‌ನಲ್ಲಿ ಪ್ರಾರಂಭವಾಯಿತು ಎಂಬುದನ್ನು ಸಾಬೀತು ಮಾಡುತ್ತವೆ. ವ್ಯಾಪಾರಸ್ಥರು ಈ ಪಂಥವನ್ನು ಥ್ರೇಸ್‌ನಿಂದ ಈಜಿಯನ್ ಸಮುದ್ರ ಮಾರ್ಗವಾಗಿ ಕೊರಿಂಥ್, ಇಟಲಿ ಮತ್ತು ಸಿಸಿಲಿ ದೇಶಗಳಿಗೆ ಸಾಗಿಸಿದರು.

ಥ್ರೇಸ್ ಮೊದಲಿಂದಲು ಡಯೊನೀಸಸ್ ಪೂಜೆಯ ಕೇಂದ್ರವಾಗಿತ್ತು. ಕ್ರೆಚ್ಮರ್‌ನ ಪ್ರಕಾರ ಡಯೊನೀಸಸ್‌ನ ಹೆಸರು DIOS - KOUROS ಎಂಬುದರ ಥ್ರೇಕೊ-ಫ್ರಿಜಿಯನ್ ರೂಪ. ಥ್ರೇಸ್‌ನ ಪ್ಯಾಂಗೇಯನ್ ಪರ್ವತದ ಸುತ್ತಮುತ್ತಲ ಹಳ್ಳಿಗಾಡಿನಲ್ಲಿ ಆರ್ಫಿಯಸ್ ಪುರಾಣ ಗಟ್ಟಿಯಾಗಿ ಕಾಲೂರಿರುವುದನ್ನು ಕಾಣಬಹುದು. ಈಡನೋಯಿಯ್‌ನ ರಾಜ ಲೈಕೋರ್ಗಸ್ ಮತ್ತು ಆರ್ಫಿಯಸ್ ಇಬ್ಬರೂ ಇದೇ ಪ್ಯಾಂಗೇಯನ್ ಪರ್ವತದ ಮೇಲೆ ಸಾವನ್ನಪ್ಪಿದರು. ಆಗಿನ ಕಾಲದಲ್ಲಿ ಗ್ರೀಕರ ಅಮೂಲ್ಯ ಸಂಪನ್ಮೂಲವಾಗಿದ್ದ ಬೆಳ್ಳಿ ಬಂಗಾರದ ಗಣಿಗಳೂ ಈ ಪ್ಯಾಂಗೇಯನ್ ಪರ್ವತದಲ್ಲೇ ಇದ್ದವು.

ಆರ್ಫಿಕರು ಪೆಸಿಸ್ಟ್ರೇಟಸ್‌ನ ಕಾಲದಲ್ಲೇ ಅಥೆನ್ಸ್‌ನಲ್ಲಿ ಭದ್ರವಾಗಿ ನೆಲೆಯೂರಿದ್ದರು. 'ಇನಿಶಿಯೇಷನ್ಸ್' ಗ್ರಂಥದ ಕರ್ತೃವೂ ಆರ್ಫಿಕರ ನೇತಾರನೂ ಆಗಿದ್ದ ಆನಮೋಕ್ರಿಟಸ್ ಪೆಸಿಸ್ಟ್ರೇಟಸ್‌ನ ಕೃಪೆಗೆ ಪಾತ್ರನಾಗಿದ್ದನು. ಇದೆ ಕಾಲದಲ್ಲಿ ಲ್ಯಾಸೋಸ್ ಎಂಬುವನು ಕಳ್ವಾಡು ಡಿಥಿರ್ಯಾಂಬ್ ಅನ್ನು ಅಥೆನ್ಸಿಗೆ ಪರಿಚಯ ಮಾಡಿಕೊಟ್ಟನು. ಈ ಲ್ಯಾಸೋಸ್, ಪ್ರಿ-ಡೋರಿಯನ್ ಮೂಲದವರು ನೆಲಸಿದ್ದ, ಆರ್ಗೋಸ್ ಪ್ರಾಂತ್ಯದ ಹರ್ಮಿಯೋನಿ ಪಟ್ಟಣದವನು. ಕೊರಿಂಥ್‌ನಲ್ಲಂತೂ ಡಿಥಿರ್ಯಾಂಬ್ ಬಹಳ ಕಾಲದಿಂದಲೂ ಪ್ರಚಾರದಲ್ಲಿತ್ತು. ಪ್ರಾಚೀನ ಆ್ಯಟಿಕ್ ನಾಟಕ ಪರಂಪರೆಯ ಮೇಲೆ ಪೆಲಪನೀಷಿಯನ್ ಪ್ರಭಾವ ಕಂಡು ಬರುತ್ತದೆ. ಆದ್ದರಿಂದ ಆರ್ಫಿಸಂ ಅಥೆನ್ಸ್ ನಗರವನ್ನು ತಲುಪಿದ್ದು ಅದೆ ಕಾಲದಲ್ಲಿ ಎಂದು ತರ್ಕಿಸಬಹುದು. ಆದರೆ ಆರ್ಫಿಸಂಗೆ ಇನ್ನೊಂದು ನೇರ ಮಾರ್ಗವೂ ತೆರೆದಿತ್ತು.

ಮ್ಯುರ್ ಎಂಬುವನು ನಿರಂಕುಶ ಪ್ರಭುತ್ವ ಕುರಿತ ತನ್ನ ಅಧ್ಯಯನದಲ್ಲಿ ಪೆಸಿಸ್ಟ್ರೇಟಡ್ಸೈ ಮತ್ತು ಗಣಿ ಉದ್ಯಮಗಳ ಸಂಬಂಧವನ್ನು ವಿವರಿಸಿದ್ದಾನೆ. ಮೆಗಾಕ್ಲೀಸ್ ಮತ್ತು ಲೈಕೊರ್ಗಸ್‌ರೊಡನೆ ಹೋರಾಡುತ್ತಿದ್ದಾಗಲೆ ಪೆಸಿಸ್ಟ್ರೇಟಸ್ ಗಿರಿಜನರನ್ನು ಸಂಘಟಿಸಿದ್ದ. ಆಗಿನ ಕಾಲದಲ್ಲಿ ಗಣಿಗಳು ಮುಖ್ಯವಾಗಿ ಬಿಟ್ಟಿಚಾಕರಿಯಿಂದ ನಡೆಯುತ್ತಿದ್ದವು. ಲಾರಿಯನ್ ಗಣಿ ಕಾರ್ಮಿಕರಾಗಿದ್ದ ಗಿರಿಜನರ ಬೆಂಬಲದಿಂದ ಪೆಸಿಸ್ಟ್ರೇಟಸ್ ನಿರಂಕುಶ ಪ್ರಭುವಾಗಿಬಿಟ್ಟ. ಆದರೆ ಅದಕ್ಕೂ ಮುಂಚೆ ಎರಡು ಬಾರಿ ವೈರಿಗಳಿಂದ ಓಡಿಸಲ್ಪಟ್ಟಿದ್ದ. ಎರಡನೆ ಬಾರಿ ಓಡಿಸಲ್ಪಟ್ಟಾಗ ಥ್ರೇಸ್‌ನ ಪ್ಯಾಂಗೇಯನ್ ಪರ್ವತ ಪ್ರಾಂತ್ಯದಲ್ಲಿ ನಿಧಿ ಸಂಗ್ರಹಣೆ ಮಾಡಿದ. ಹೆರೊಡಟಸ್ ಹೇಳುವ ಹಾಗೆ ಎರಡನೆ ಬಾರಿ ಪಟ್ಟಕ್ಕೆ ಬಂದ ಪೆಸಿಸ್ಟ್ರೇಟಸ್ "ತನ್ನ ರಾಜ್ಯದಿಂದ ಮತ್ತು ಪ್ಯಾಂಗೇಯನ್

ಪರ್ವತದ ತಪ್ಪಲಿನ ಗಣಿ ಪ್ರದೇಶದಲ್ಲಿ ಹರಿಯುವ ಸ್ಟ್ರೈಮೋನ್ ನದಿ ಪ್ರಾಂತ್ಯದಿಂದ ವಸೂಲಾದ ಭಾರಿ ಕಂದಾಯದ ಬಲದ ಮೇಲೆ ಬಾಡಿಗೆ ಬಂಟರ ಭಾರಿ ಸೈನ್ಯ ಕಟ್ಟಿ ತನ್ನ ಆಳ್ವಿಕೆಯನ್ನು ಭದ್ರಪಡಿಸಿಕೊಂಡ."

ಜಗತ್ತಿನ ಎಲ್ಲ ಗಣಿ ಪ್ರದೇಶಗಳಲ್ಲೂ ಮಿಶ್ರ ಜನಾಂಗಗಳ ಕಂಡುಬರುತ್ತವೆ. ಭಾರಿ ಸಂಖ್ಯೆಯಲ್ಲಿ ಶ್ರಮಜೀವಿಗಳ ಅವಶ್ಯಕತೆಯಿರುವ ಈ ಉದ್ಯಮಕ್ಕೆ ಸ್ಥಳೀಯ ಶ್ರಮಿಕ ವರ್ಗ ಸಾಲದಾಗುತ್ತದೆ. ಐದನೆ ಶತಮಾನದಲ್ಲಿ ಲಾರಿಯಮ್‌ನ ಜನಸಂಖ್ಯೆ ಮಿಶ್ರವಾದದ್ದು ಆಗಿತ್ತೆಂದು ತಿಳಿದು ಬಂದಿದೆ. ಆರನೆ ಶತಮಾನದಲ್ಲೂ ಇದು ಮುಂದುವರೆದಿರಲೇಬೇಕು. ಹಿಪಾರ್ಕಸ್‌ನ ಕಾಲದಲ್ಲಿ ಸ್ಟ್ರೈಮೋನ್ ಪ್ರಾಂತ್ಯದ ಗಣಿ ಕಾರ್ಮಿಕರಲ್ಲಿ ಗ್ರೀಕರ ಸಂಖ್ಯೆ ಗಣನೀಯವಾಗಿತ್ತು. ಇವರಲ್ಲಿ ಲಾರಿಯಮ್ ಪ್ರದೇಶದ ಆ್ಯಟಿಕ್ ಗಣಿಕಾರ್ಮಿಕರೂ ಇದ್ದರು ಎನ್ನುವುದು ನಿರ್ವಿವಾದ. ಪೆಸಿಸ್ಟ್ರೇಟಡ್ಸ್‌ಗೆ ಎರಡೂ ಕೇಂದ್ರಗಳೊಡನೆ ಸಂಬಂಧವಿದ್ದುದರಿಂದ ಕಾರ್ಮಿಕರು ಎರಡೂ ದಿಕ್ಕಿಗೆ ವಲಸೆ ಹೋಗಿರುವ ಸಾಧ್ಯತೆಯಿದೆ.

ಇವೆಲ್ಲದರ ಪರಿಣಾಮವೆಂದರೆ ಪ್ಯಾಂಗೇಯಮ್ ಪರ್ವತ ಹಾಗು ಆಸುಪಾಸಿನ ಪ್ರಾಂತ್ಯಗಳು ಆರ್ಫಿಸಮ್‌ನ ತೊಟ್ಟಿಲಾಗಿದ್ದವು. ಅಷ್ಟೇ ಅಲ್ಲದೆ, ಲಾರಿಯಮ್‌ನಿಂದ ಅಷ್ಟೇನೂ ದೂರವಲ್ಲದ ಆ್ಯಟಿಕ್ ಗಣಿಪ್ರದೇಶದಲ್ಲಿ ಸೆಮ್ಯಾಚಿಡ್ಸೆ ಎಂಬ ಹಳ್ಳಿಯೂ ಆರ್ಫಿಸಂಗೆ ಹೆಸರುವಾಸಿಯಾಗಿತ್ತು. ಅಲ್ಲಿದ್ದ ಡಯನೇಸಸ್ ದೇವಾಲಯದಿಂದಾಗಿ ಆ ಹಳ್ಳಿಗೆ ಮಹತ್ವ ಬಂದಿತ್ತು. 'ದೇವರ ಆಗಮನ'ದ ಹಬ್ಬವನ್ನು ಆಚರಿಸುವ ಒಂದು ವಿಶಿಷ್ಟ ಸ್ಥಳೀಯ ಸಂಪ್ರದಾಯವೂ ಆ ಹಳ್ಳಿಯಲ್ಲಿತ್ತು. ಹೀಗಾಗಿ ಥ್ರೇಸ್‌ನಿಂದ ಅಥೆನ್ಸ್‌ಗೆ ನೇರ ಮಾರ್ಗ ಉಂಟಾಗಿ ಆರ್ಫಿಕ್ ಪಂಥ ಆ್ಯಟಿಕ್ ಪ್ರದೇಶವನ್ನು ಪ್ರವೇಶಿಸಲು ಸಾಧ್ಯವಾಯಿತು.

ಕೈಗಾರಿಕೆ ಮತ್ತು ವ್ಯಾಪಾರಗಳ ಫಲವಾಗಿ ಆರ್ಫಿಸಮ್ ಕೊರಿಂಥ್ ಹಾಗು ಪಶ್ಚಿಮದ ನಾಡುಗಳಿಗೆ ಒಯ್ಯಲ್ಪಟ್ಟಂತೆ ಆ್ಯಟಿಕ್ ಪ್ರದೇಶಕ್ಕೂ ಒಯ್ಯಲ್ಪಟ್ಟಿತು. ನಗರಕ್ರಾಂತಿಯ ಪರಿಣಾಮವಾಗಿ ಇದು ಸಾಧ್ಯವಾಯಿತು. ಇಂಥ ಸಾಮಾಜಿಕ ಪರಿಸ್ಥಿತಿ ಹುಟ್ಟುಹಾಕಬಲ್ಲ ಧರ್ಮ ಎಂಥದ್ದಾಗಿರುತ್ತದೆ ಎಂದು ಗುರ್ತಿಸುವುದು ಕಷ್ಟವೇನಲ್ಲ. ಆರನೆ ಶತಮಾನದ ಆ್ಯಟಿಕ್ ಪ್ರದೇಶದ ಶ್ರಮಿಕವರ್ಗ ರೂಪುಗೊಂಡ ಬಗ್ಗೆ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕು.

ಈ ಕಾಲಘಟ್ಟದವರೆಗೂ ಗುಲಾಮರು ಕಮ್ಮಿ ಸಂಖ್ಯೆಯಲ್ಲಿದ್ದರು. ಆಗಿನ ಬೇಸಾಯ-ಆಧಾರಿತ ಹಣಕಾಸು ವ್ಯವಸ್ಥೆಯಲ್ಲಿ ದುಡಿಮೆಗೆ ಇದ್ದ ಬೇಡಿಕೆ ಬಹಳ ಕಡಿಮೆ. ಸುಗ್ಗಿ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಬೇಡಿಕೆಯನ್ನು ಹುಂಗಾಮಿ ಕೂಲಿಗಳ ಬಿಟ್ಟಿ ಚಾಕರಿಯು ಪೂರೈಸುತ್ತಿತ್ತು. ವ್ಯಾಪಾರ ಬೆಳೆದಂತೆ ದುಡಿಮೆಯು

ಬೇಡಿಕೆ ನಿರಂತರವೂ ಏರುತ್ತಿರುವುದೂ ಆಯಿತು. ಗಣಿ ಕೆಲಸ, ಕಲ್ಲು ಕೊರೆಯುವುದು, ಸಾಗಾಣಿಕೆ ಇವುಗಳಿಂದ ಭಾರಿ ಬೇಡಿಕೆ ಬರಹತ್ತಿತು. ಐದನೆ ಶತಮಾನದಲ್ಲಿ ಗುಲಾಮರು ಸಾಕಷ್ಟು ಸಂಖ್ಯೆಯಲ್ಲಿದ್ದರು ಮತ್ತು ಅಗ್ಗವಾಗಿ ಸಿಗುತ್ತಿದ್ದರು. ಆದರೆ ಆರನೆ ಶತಮಾನದಲ್ಲಿ ಪೂರ್ವದಿಕ್ಕಿನಲ್ಲಿ ಪರ್ಶಿಯನ್ ಯುದ್ಧಗಳು ಪ್ರಾರಂಭವಾಗುವ ಮುಂಚೆ ಆ್ಯಟಿಕ್ ಪ್ರದೇಶದಲ್ಲಿ ಕೃಷಿಕಾರ್ಮಿಕರೆ ದುಡಿಮೆಯ ಮೂಲಾಧಾರವಾಗಿದ್ದರು. ತಾವು ಉಳುತ್ತಿದ್ದ ಭೂಮಿಯಿಂದ ಓಡಿಸಲ್ಪಟ್ಟ ಬಡರೈತರು, ಅವರ ಹೆಂಡಿರು ಮಕ್ಕಳೆ ಲಾರಿಯಂನ್‌ನ ಗಣಿ ಕಾರ್ಮಿಕರಾಗಿದ್ದರು. ಈ ಕಾರಣಗಳಿಂದಾಗಿ ಆರ್ಫಿಕ್ ಪಂಥ ಭೂಮಿಯು ನಂಟು ಕಳೆದುಕೊಂಡ ರೈತ ಸಮುದಾಯದ ಆಶಯಗಳನ್ನು ಎತ್ತಿ ಹಿಡಿಯಿತು. ಹೀಸಿಯೊಡ್‌ನ ಕಾವ್ಯದಲ್ಲಿ ರೈತ ಸಮುದಾಯದ ಜೀವನದೃಷ್ಟಿ ವ್ಯಕ್ತವಾಗಿದೆ. ಅವನ 'ಥಿಯೋಗನಿ' ಗ್ರಂಥದಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆರ್ಫಿಸನ 'ಜಗತ್ತಿನ ಉದಯ'ದ ಕಲ್ಪನೆಗೆ ಹೋಲಿಸಿದಾಗ ಆರ್ಫಿಕ್ ತತ್ವಗಳು ಸರಿಯಾಗಿ ಅರ್ಥವಾಗುತ್ತವೆ.

ಹೀಸಿಯೊಡ್‌ನ ಪ್ರಕಾರ ಪ್ರಾರಂಭದಲ್ಲಿ ಇದ್ದುದು 'ಶೂನ್ಯ', ನಂತರ ಅಸ್ತಿತ್ವಕ್ಕೆ ಬಂದವು 'ಭೂಮಿ' ಮತ್ತು 'ಪ್ರೀತಿ', 'ಶೂನ್ಯ'ದಿಂದ 'ಎರೆಬೋಸ್' ಮತ್ತು 'ರಾತ್ರಿ' ಹುಟ್ಟಿದವು. ರಾತ್ರಿಯಿಂದ 'ಏಥರ್' ಮತ್ತು 'ಹಗಲು' ಹುಟ್ಟಿದವು. 'ಭೂಮಿ' 'ಸ್ವರ್ಗ'ಕ್ಕೆ ಜನ್ಮಕೊಟ್ಟು ಮತ್ತೆ 'ಸ್ವರ್ಗ'ದೊಡನೆಯೆ ಸಮ್ಮಿಲನಗೊಂಡು 'ಸಾಗರ', 'ರ್ಹೀ', 'ಕ್ರೋನಸ್' ಮತ್ತು 'ಟೈಟನ್'ರಿಗೆ ಜನ್ಮಕೊಟ್ಟಿತು. ತಂದೆಯಾದ 'ಸ್ವರ್ಗ'ವನ್ನು ಪದಚ್ಯುತಗೊಳಿಸಿದ ಕ್ರೋನಸ್ ಮಗ 'ಸ್ಯೂಸ್'ನಿಂದ ತಾನೆ ಪದಚ್ಯುತಗೊಂಡಿತು.

ಆರ್ಫಿಕರ ಪ್ರಕಾರ ಪ್ರಾರಂಭದಲ್ಲಿ ಇದ್ದದ್ದು 'ಕಾಲ'. ನಂತರ 'ಏಥರ್' ಮತ್ತು 'ಶೂನ್ಯ' ಅಸ್ತಿತ್ವಕ್ಕೆ ಬಂದವು. 'ಕಾಲ' ಅವುಗಳೊಡನೆ ಕೂಡಿ ಒಂದು ಬೆಳ್ಳಿ ಮೊಟ್ಟೆ ತಯಾರಿಸಿತು. ಈ ಬೆಳ್ಳಿ ಮೊಟ್ಟೆಯಿಂದ 'ಫ್ಯಾನಸ್' ಅಥವ 'ಪ್ರೀತಿ' ಹೊರ ಹೊಮ್ಮಿತು. 'ಸ್ಯೂಸ್'ನ ಜನ್ಮಜಾತಕವು ಹೀಸಿಯೊಡ್ ಹೇಳಿರುವಂತೆಯೆ ಇದೆ. ಆದರೆ 'ಸ್ಯೂಸ್' ಪಟ್ಟಕ್ಕೆ ಬಂದ ನಂತರ 'ಫ್ಯಾನಸ್'ನನ್ನು ನುಂಗಿ ತಾನೆ ಅವನೆಂದು ಸಾರುತ್ತಾನೆ. 'ಪರ್ಸಿಫನಿ'ಯನ್ನು ಕೂಡಿ ಡಯನೇಸಸ್‌ನ ಹುಟ್ಟಿಗೆ ಕಾರಣವಾಗುತ್ತಾನೆ. ಮುಂದೆ ಡಯನೇಸಸ್ 'ಟೈಟನ್ನರ' ಕೈಯಲ್ಲಿ ಸಾಯುತ್ತಾನೆ. ಕಡೆಗೆ ಸಿಡಿಲೆರಗಿ ಸಿಡಿದು ಹೋಗುವಾಗ 'ಟೈಟನ್ನರ' ಕೈಗಳು ಇನ್ನೂ ಡಯನೇಸಸ್‌ನ ರಕ್ತದ ವಾಸನೆಯಿಂದ ನಾರುತ್ತಿರುತ್ತವೆ. ಈ ರಕ್ತ ಹಾಗೂ ಬೂದಿ ಮಿಳಿತಗೊಂಡು ಮಾನವ ಜನಾಂಗ ಹುಟ್ಟಿಕೊಳ್ಳುತ್ತದೆ. ಅದರಿಂದಾಗಿ ಮನುಷ್ಯನ ಸ್ವಭಾವ ಅರ್ಧ ಒಳ್ಳೆಯದು ಅರ್ಧ ಕೆಟ್ಟದ್ದು ಆಗಿದೆ. ತನ್ನ ವಿರುದ್ಧ ತಾನೆ ಅದು ಹೆಣಗಬೇಕಾಗಿದೆ.

'ಕಾಲ', ಬೆಳ್ಳಿಮೊಟ್ಟೆ 'ಫ್ಯಾನಸ್'ನನ್ನು ನುಂಗಿದ ಪ್ರಸಂಗ, ಡಯನೀಸಸ್‌ನ ಭಾವಾವೇಶ, ಮಾನವರ ಹುಟ್ಟು – ಇವೆಲ್ಲ ಆರ್ಫಿಕ್ ಕಲ್ಪನೆಗಳು. ಮಾನವರ ಹುಟ್ಟನ್ನು ಕಲ್ಪಿಸಿಕೊಂಡ ಆನಮ್ಯಾಕ್ರಿಟಸ್ ಎಂಬುವನು ಅಥೆನ್ಸಿನ ಪೆಸಿಸ್ಟ್ರೇಟಸ್‌ನ ಕೃಪೆಗೆ ಒಳಗಾದವನು. ಹೀಗೆ ತಮ್ಮದೆ ಆದ ಪೌರಾಣಿಕ ಕಲ್ಪನೆ ಹೊಂದಿದ್ದರೂ ಆರ್ಫಿಕರ ಪಂಥ ಬೆಳೆದದ್ದು ಹೀಸಿಯೊಡ್ ಸಂಪ್ರದಾಯದಲ್ಲೆ. ಅವರ ಮೇಲೆ ಹೋಮರ್‌ನ ಪ್ರಭಾವ ಆಗಿಲ್ಲವೆಂದೆ ಹೇಳಬೇಕು. ಆದರೆ ಹೀಸಿಯೊಡ್‌ನ ಪ್ರಭಾವ ಭಾರಿ ಪ್ರಮಾಣದಲ್ಲಿ ಆಗಿದೆ. ಆರ್ಫಿಕ್ ಸಂಪ್ರದಾಯ ಯಾವ ಮೂಲದಿಂದ ಹೊಮ್ಮಿತು ಮತ್ತು ಅದರ ಇಂಗಿತಗಳು ಏನು ಎಂಬುದನ್ನು ಇದರಿಂದ ಅರಿಯ ಬಹುದು.

ಹೋಮರ್‌ನ ಕಾವ್ಯದಲ್ಲಿ 'ಡೈಕ್' ಎಂಬ ಶಬ್ದಕ್ಕೆ ಹಾದಿ, ಪದ್ಧತಿ, ಸೂಕ್ತ ವಾದದ್ದು, ನಿರ್ಣಯ ಎಂದೆಲ್ಲ ಅರ್ಥಗಳು ಇವೆ. ಹೀಸಿಯೊಡ್‌ನ ಕಾವ್ಯದಲ್ಲಿ ಈ ಶಬ್ದ ನ್ಯಾಯದ ಅಮೂರ್ತ ಕಲ್ಪನೆಗೆ ಸಂವಾದಿಯಾಗಿದೆ. ನ್ಯಾಯದ ಕಲ್ಪನೆಗೆ ವ್ಯಕ್ತಿತ್ವದ ರೂಪ ಕೊಟ್ಟು 'ಸ್ಯೂಸ್'ನ ಬಲಭಾಗದಲ್ಲಿ ಕೂರಿಸಲಾಗಿದೆ. ಈ ನ್ಯಾಯ ದೇವತೆಯು ಕ್ರೂರ ತೀರ್ಮಾನಗಳನ್ನು ಕೊಡುವ ಶ್ರೀಮಂತರ ಬಗ್ಗೆ 'ಸ್ಯೂಸ್'ಗೆ ಎಚ್ಚರಿಕೆ ನೀಡುತ್ತಾಳೆ. ಹೀಗೆ 'ಡೈಕ್' ಶಬ್ದಕ್ಕೆ ಹೋಮರ್ ಕೊಟ್ಟ ಅರ್ಥವನ್ನು ಹೀಸಿಯೊಡ್ ವಿಸ್ತರಿಸಿದ್ದಾನೆ. ಆದರೆ ಈ ಅರ್ಥವಿಸ್ತರಣೆ ತುಳಿತಕ್ಕೊಳಗಾದ ರೈತರ ಆಶಯ ಮತ್ತು ಅವಶ್ಯಕತೆಯಿಂದಾಗಿ ಕಲ್ಪಿತಗೊಂಡು ಚಲಾವಣೆಗೆ ಬಂದಿದೆ. ಆರ್ಫಿಕ್ ಬರವಣಿಗೆಗಳಲ್ಲಿ 'ಸ್ಯೂಸ್'ನ ಸಿಂಹಾಸನದ ಪಕ್ಕದಲ್ಲಿ 'ಡೈಕ್' ಪುನಃ ಕಾಣಿಸಿಕೊಳ್ಳುತ್ತಾಳೆ. ಸೊಲೋನ್‌ನ ಕಾವ್ಯದಲ್ಲೂ ಈಕೆ ಕಾಣಿಸಿಕೊಳ್ಳುತ್ತಾಳೆ. ರೈತರ ಕುರಿತು ಸೋಲೋನ್‌ಗಿದ್ದ ಸಾಧಾರಣಾ ಮನೋಭಾವ ಅದನ್ನು ಸಾಮಾಜಿಕ ಚಿಂತನೆಗೆ ಎಳೆದು ಕಟ್ಟಿತ್ತು.

ಒಟ್ಟಾರೆ ಪ್ರೀತಿ ಕುರಿತ ಆರ್ಫಿಕ್ ಕಲ್ಪನೆ ಹೀಸಿಯೊಡ್‌ನಿಂದ ಬಂದಿದ್ದು, ಶ್ರೀಮಂತರ ಆಲೋಚನೆಗೆ ನೇರ ಸವಾಲೊಡ್ಡುವ ತತ್ವಕ್ಕೆ ಬದ್ಧವಾಗಿತ್ತು. ಶ್ರೀಮಂತರಿಗೆ ಪ್ರೀತಿ ಅಪಾಯಕಾರಿಯಾದ ಭಾವನೆ. ಯಾಕೆಂದರೆ ಆಸೆ, ಅತೃಪ್ತಿ, ಮಹಾತ್ವಾಕಾಂಕ್ಷೆಗಳೆ ಪ್ರೀತಿಯ ಇಂಗಿತಗಳು. ಆನಾಕ್ಸಿಮ್ಯಾಂಡರ್‌ನ ಪ್ರಕರಣದಿಂದ ಸ್ಪಷ್ಟವಾಗುವಂತೆ ಶ್ರೀಮಂತರ ಆಲೋಚನೆಯು ಒಳಗುಟ್ಟು ಒಡೆದು ಆಳುವುದು, ಎಲ್ಲವನ್ನೂ ಪ್ರತ್ಯೇಕಿಸಿ ಲಾಭ ಹೊಡೆಯುವುದೆ ಆಗಿತ್ತು. ಆದರೆ ಆರ್ಫಿಕರಿಗೆ ಪ್ರೀತಿ ಎಂಬುದು ಗೌರವಾನ್ವಿತ ಭಾವನೆಯಾಗಿತ್ತು. ಯಾಕೆಂದರೆ ಒಡೆಯಲ್ಪಟ್ಟವರನ್ನು ಒಂದುಗೂಡಿಸುವುದೆ ಅದರ ಇಂಗಿತವಾಗಿತ್ತು. ಪಶ್ಚಿಮದ ಆರ್ಫಿಕನಾದ ಎಂಪೆಡೊಕ್ಲಿಸ್‌ನ ದರ್ಶನಶಾಸ್ತ್ರದಲ್ಲಿ ಪ್ರೀತಿ ಎಂಬುದು ಪ್ರಪಂಚವನ್ನೆ ಒಂದುಗೂಡಿಸುವ ಶಕ್ತಿ. ಘರ್ಷಣೆ

ಅದನ್ನು ಒಡೆಯುವ ಶಕ್ತಿ, ಪ್ರಪಂಚ ಉತ್ತಮಗೊಳ್ಳುವುದು ಪ್ರೀತಿಯು ಘರ್ಷಣೆಯನ್ನು ಸೋಲಿಸಿದಾಗ. ಸಾರ್ವಜನಿಕ ಚಿಂತನೆಯು ಒತ್ತಾಸೆಯೂ ಒಂದು ಗೂಡಿಸುವುದೆ ಆಗಿತ್ತು.

ಆರ್ಫಿಸಂನ ಜೀವಾಳವಿದ್ದದ್ದು ಅದರ ಅನುಭಾವ ಚಿಂತನೆಯಲ್ಲಿ. ಈ ಅನುಭಾವ, ಡಯನೀಸಸ್‌ನ ಕೃಷಿ-ಇಂದ್ರಜಾಲದಿಂದ ಪ್ರಾರಂಭಗೊಂಡ ಆರ್ಫಿಕ್ ಸಂಪ್ರದಾಯದ ಒಂದು ಪ್ರಮುಖ ಲಕ್ಷಣವಾಗಿತ್ತು. ಎಲ್ಯೂಸಿಸ್ ಮಿಸ್ಟರಿಗಳು, ಅನುಭಾವಿ ಪಂಥಗಳ ಮೂಲ ಕೃಷಿರಂಗವೆ ಎಂಬುದನ್ನು ಸಾಬೀತು ಮಾಡುತ್ತವೆ. ಆರ್ಫಿಕ್ ಅನುಭಾವದ ಗುಣಲಕ್ಷಣಗಳನ್ನು ಅರಿಯುವುದು ಕಷ್ಟದ ಸಂಗತಿಯು ಸರಿ. ಅಥೆನ್ಸ್‌ನಲ್ಲಿ ನೆಲೆಯೂರಿದ ಆರ್ಫಿಕ್ ಚಳವಳಿ ಎಲ್ಯೂಸಿಸ್ ಪಂಥದೊಡನೆ ಆಪ್ತವಾಗಿ ಬೆಸೆದುಕೊಂಡಿತು. ಮೂಲಭೂತ ಹೋಲಿಕೆಗಳಿಂದಾಗಿ ಎರಡೂ ಪಂಥಗಳು ಪರಸ್ಪರ ಪ್ರಭಾವಬೀರಿವೆ.

ಎಲ್ಯೂಸಿಸ್ ಪಂಥ ಅಧಿಕೃತವಾಗಿಯೆ ಆಡಳಿತವರ್ಗದ ಕೃಪೆಗೆ ಒಳಗಾಗಿತ್ತು. ಪಟ್ಟಭದ್ರ ವ್ಯವಸ್ಥೆಯೊಳಕ್ಕೆ ಸುರಕ್ಷಿತವಾಗಿ ನುಸುಳಿಕೊಂಡ ಈ ಪಂಥವು, ತನ್ನ ಅಡ್ಡಗಟ್ಟಲಾದ ಆಕಾಂಕ್ಷೆಗಳ ನಿಜವಾದ ಕಾರಣಗಳನ್ನು ಅರಿಯದಂತೆ ವರ್ಗಸಮಾಜವನ್ನು ತಡೆಹಿಡಿಯಿತು. ಆದರೆ ಡಯನೀಸಿಯಾಕ್ ಥಿಯಸೋಸ್‌ಗಳಿಂದ ಪ್ರಭಾವಿತರಾದ ಆರ್ಫಿಕರು ದೂರದೂರವಿದ್ದ ಸಣ್ಣ ಸಣ್ಣ ಘಟಕಗಳ ಮೂಲಕ ಸಂಘಟಿತರಾದರು. ಥಿಯಸೋಸ್‌ಗಳು ವೈಯಕ್ತಿಕ ನೆಂಟಸ್ತಿಕೆಯಲ್ಲಿ ಒಂದುಗೂಡಿದ್ದವು. ಅವರ ಅನುಭಾವಕ್ಕೆ ಪ್ರತ್ಯೇಕ ಅಸ್ತಿತ್ವವಿತ್ತು. ಆಡಳಿತ ಯಂತ್ರದ ನಿಯಂತ್ರಣಕ್ಕೆ ಒಳಗಾಗದ ಆರ್ಫಿಸಂ ಅನುಭಾವದ ಮೂಲ ತತ್ವಗಳನ್ನು ಇನ್ನೂ ಆಳವಾಗಿ ಮೈಗೂಡಿಸಿಕೊಂಡಿತು. ಸಾವಿಗೆ ಸಿದ್ಧಗೊಳಿಸುವುದು ಮತ್ತು ಮಿಕ್ಕಂತೆ ಬದುಕನ್ನು ತ್ಯಜಿಸುವುದೆ ಅನುಭಾವದ ಲಕ್ಷಣ.

ಬದುಕು ಒಂದು ತಪಸ್ಸು. ಟೈಟನ್ನರ ಕೃತ್ಯದಿಂದಾಗಿ ತನಗಂಟಿದ ಪಾಪಕ್ಕೆ ಮನುಷ್ಯ ಈ ತಪಸ್ಸಿನ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ಅವನ ಸಾವಿಲ್ಲದ ಭಾಗವು, ಅವನ ಸಾವಿಗೆ ಒಳಗಾಗದ ಭಾಗದಲ್ಲಿ ಅಡಗಿದೆ. ಆತ್ಮ ದೇಹದಲ್ಲಿ ಬಂಧಿತವಾಗಿದೆ. ದೇಹ ಆತ್ಮದ ಸಮಾಧಿ. ನಾವೆಲ್ಲ ದೇವರ ಚರಾಸ್ತಿಗಳು. ಅವರಿಗೆ ಇಷ್ಟಬಂದಾಗ ಈ ಜೇಲಿನಿಂದ ನಮ್ಮನ್ನು ಬಿಡುಗಡೆ ಮಾಡುತ್ತಾರೆ. ಇಡಿ ಬದುಕೆ ಸಾವಿಗಾಗಿ ನಡೆಸುವ ತಾಲೀಮು. ಸಾವಿನ ಮೂಲಕ ಮಾತ್ರ ಆತ್ಮ ಈ ಜೇಲುವಾಸದಿಂದ ಪಾರಾಗಬಲ್ಲದು. ಬದುಕೆ ಸಾವು, ಸಾವೆ ಬದುಕು. ಸಾವಿನ ನಂತರ ಆತ್ಮವು ವಿಚಾರಣೆಗೆ ಗುರಿಯಾಗುತ್ತದೆ. ದೇಹದ ಸಂಪರ್ಕದಲ್ಲಿ ಆತ್ಮ ಭ್ರಷ್ಟಗೊಂಡು ಮಿತಿ ಮೀರಿದ ಪಾಪ ಮಾಡಿದ್ದಲ್ಲಿ ಅದನ್ನು ಟಾರ್ಟರಸ್ ಕಾರಾಗೃಹದಲ್ಲಿ ಕೊನೆಯಿಲ್ಲದ ಹಿಂಸೆಗೆ ಗುರಿಪಡಿಸಲಾಗುತ್ತದೆ. ಪಾಪದ ಹೊರೆ ಕಡಿಮೆ ಇರುವ ಆತ್ಮವನ್ನು ತೊಳೆದು ಶುದ್ಧ

ಗೊಳಿಸಲಾಗುತ್ತದೆ. ನಂತರ ತಪಸ್ಸನ್ನು ಮುಂದುವರೆಸಲು ಭೂಮಿಗೆ ವಾಪಸ್ ಕಳಿಸಲಾಗುತ್ತದೆ. ದೇಹ ಸಂಪರ್ಕದಿಂದ ಕಲುಷಿತಗೊಳ್ಳದ ಹಾಗೆ ಬಿಟ್ಟುಬಿಡದೆ ಮೂರು ಜನ್ಮ ಬದುಕಿದ ಆತ್ಮಕ್ಕೆ ನಿರಂತರವಾದ ಬಿಡುಗಡೆ ಸಿಗುತ್ತದೆ. ತನ್ನ ಹಾಗೆಯೆ ಅನುಗ್ರಹಕ್ಕೆ ಒಳಗಾದ ಸ್ವರ್ಗೀಯ ಬಂಧುಗಳನ್ನು ಸೇರಿಕೊಳ್ಳುವ ಅವಕಾಶ ಸಿಗುತ್ತದೆ.

ಪ್ಲೇಟೋನ ಬರಹಗಳಲ್ಲಿ ಕಾಣಿಸಿಕೊಳ್ಳುವ ಆರ್ಫಿಕರ ಆತ್ಮಜಿಜ್ಞಾಸೆ ಮೇಲೆ ಹೇಳಿರುವಂತಿದೆ. ಈ ಆತ್ಮಜಿಜ್ಞಾಸೆ ತನ್ನ ಅಂತಿಮ ರೂಪಕ್ಕೆ ಬರಲು ಸಾಕಷ್ಟು ಕಾಲ ಹಿಡಿದಿರಬೇಕು. ಅದು ಆರನೆ ಶತಮಾನದಲ್ಲಿ ಇನ್ನೂ ಪ್ರಾಥಮಿಕ ಹಂತದಲ್ಲಿ ಇದ್ದಿತ್ತೆಂದು ಕಾಣುತ್ತದೆ. ಈ ಜಿಜ್ಞಾಸೆಯ ಉದ್ದಕ್ಕೂ ಕಾಣಿಸುವ ಚಿಂತನೆಯ ಎಳೆ ಇದು: ಯಜಮಾನನಿಗಾಗಿ ಗುಲಾಮನಿರುವಂತೆ, ದೇವರಿಗಾಗಿ ಮನುಷ್ಯ, ಆತ್ಮಕ್ಕಾಗಿ ದೇಹ ಇರುವುದು. ಪ್ಲೇಟೋನ ಪ್ರಕಾರ ಆತ್ಮಕ್ಕೆ ಆಳುವ ಹಕ್ಕು, ಯಜಮಾನಿಕೆ ನಡೆಸುವ ಹಕ್ಕು ಇದೆ; ದೇಹವು ಆತ್ಮದ ಪ್ರಜೆ, ಅದರ ಗುಲಾಮ. ಪ್ಲೇಟೋ ಮತ್ತು ಪರ್ಮೆನೈಡಿಸ್ ಮುಖೇನ ಆದರ್ಶವಾದಿ ತತ್ವಚಿಂತನೆಗೆ ಅಡಿಗಲ್ಲಾಗಿ ನಿಂತ, ಮನುಷ್ಯ ಪ್ರವೃತ್ತಿಯಲ್ಲಿರುವ ಈ ದ್ವಂದ್ವವು ಗ್ರೀಕ್ ಚಿಂತನೆಗೆ ಹೊಸದಾಗಿತ್ತು. ಅನಾಗರಿಕ ಆದಿಮಾನವನಿಗೆ ಮತ್ತು ಅಖೇಯನ್ ಮುಖಂಡರಿಗೆ ಹೇಗೊ ಹಾಗೆ ಮಿಲೆಟೋಸ್‌ನ ವಿಜ್ಞಾನಿಗಳಿಗೂ ಸಹ ಆತ್ಮವೆಂದರೆ ನಾವು ಯಾವುದರಿಂದ ಉಸಿರಾಡುತ್ತೇವೊ, ಓಡಾಡುತ್ತೇವೊ, ಬದುಕುತ್ತೇವೊ ಅದೆ ಆಗಿತ್ತು. ಆಗಿನ ಕಾಲದಲ್ಲಿ ಚಲನೆಯ ನಿಯಮಗಳ ಅರಿವು ಇನ್ನೂ ಅರೆಬರೆಯಾಗಿತ್ತು. ಸಾವಯವ ಮತ್ತು ನಿರವಯವ ವಸ್ತುಗಳ ನಡುವಿನ ನಿಖರವಾದ ವರ್ಗೀಕರಣ ಇನ್ನೂ ಸಾಧ್ಯವಾಗಿರಲಿಲ್ಲ. ಆದರೂ ಈ ಚಿಂತನೆಯ ಆಧಾರ ಮಾತ್ರ ಮೂಲಭೂತವಾಗಿ ಭೌತಿಕವಾದದ್ದೆ ಆಗಿತ್ತು. ಮೈಲೀಸಿಯನ್ ವಿಶ್ವಶಾಸ್ತ್ರದ ಜಗತ್ತುಗಳು ಚಲಿಸುತ್ತವೆ ಎಂಬ ಕಾರಣಕ್ಕಾಗಿ ಅವುಗಳನ್ನು ದೇವತೆಗಳು ಎನ್ನಲಾಗಿದೆ. ಆದರೆ ಅವು ಕೂಡ ಭೌತವಸ್ತುಗಳೆ. ಆತ್ಮ ಮತ್ತು ದೇಹಗಳು ಸ್ವರೂಪದಲ್ಲೆ ಭಿನ್ನವಾಗಿರುವಂಥವು. ಆತ್ಮವು ಪವಿತ್ರವೂ ದೈವಿಕವೂ ಆದದ್ದು, ದೇಹವು ಪೂರ್ತಿ ಪ್ರಾಪಂಚಿಕವಾದದ್ದು ಎಂಬ ಆರ್ಫಿಕ್ ಜಿಜ್ಞಾಸೆಗೆ ಮೈಲೀಸಿಯನ್ ತತ್ವಶಾಸ್ತ್ರವನ್ನಾಗಲಿ, ಹೋಮರ್‌ನ ಕಾವ್ಯವನ್ನಾಗಲಿ ಹೋಲಿಸಲು ಸಾಧ್ಯವಿಲ್ಲ. ಮಾನವ ಪ್ರಜ್ಞೆಯಲ್ಲಿ ಉಂಟಾದ ಈ ಮೂಲಭೂತ ಕ್ರಾಂತಿ ಅರ್ಥವಾಗಬೇಕಾದರೆ, ಮಾನವ ಸಮಾಜದ ರಚನಾಕ್ರಮದಲ್ಲಿ ಉಂಟಾದ ಇನ್ನೊಂದು ಮಹತ್ವದ ಬದಲಾವಣೆಯೊಡನೆ ಅದಕ್ಕಿರುವ ಸಂಬಂಧವನ್ನು ಮನಗಾಣಬೇಕು. ಆರ್ಫಿಕ್ ಚಿಂತನೆಯಲ್ಲಿರುವ ಸಾಂಕೇತಿಕ ಮೌಲ್ಯವನ್ನು ಗಮನಿಸಿದರೆ ಈ ಬದಲಾವಣೆ ಯಾವುದು, ಅದರ ಮಹತ್ವ ಎಂಥದ್ದು ಎಂಬುದು ಸ್ಪಷ್ಟವಾಗುತ್ತದೆ.

ಸಾಮೂಹಿಕ ಶ್ರಮದ ಉತ್ಪಾದನೆಯಲ್ಲಿ ಸಮಪಾಲು ಪಡೆಯುವ ಹಕ್ಕು

ಸಮಾಜದ ಎಲ್ಲ ಸದಸ್ಯರಿಗೂ ಉಂಟು ಎಂಬ ತತ್ವ ಮೋಯಿರಾ ಕಲ್ಪನೆಗೆ ಕಾರಣವಾಯಿತಷ್ಟೆ. ತನ್ನ ಕಾಡು ಕುಲ ಸಮಾಜ ಲಕ್ಷಣಗಳು ಅಳಿಯುತ್ತಿದ್ದ ಕಾಲದಲ್ಲಿ ಆರ್ಫಿಕ್ ದೇವತೆಯಾದ ಅನ್ಯಾಂಕೆ ಅಥವ 'ಅವಶ್ಯಕತೆ'ಯು ಮೋಯಿರಾ ಜೊತೆ ಅಸ್ತಿತ್ವಕ್ಕೆ ಬಂದಳು. ಸಾಹಿತ್ಯದಲ್ಲಿ ಅನ್ಯಾಂಕೆ ಮೊದಲ ಬಾರಿಗೆ ಕಾಣಿಸಿಕೊಳ್ಳುವುದು ಪರ್ಮೆನೈಡಿಸ್ ಮತ್ತು ಹೆರಕ್ಲೀಟಸ್‌ರ ಬರಹಗಳಲ್ಲಿ. ಅವರಿಬ್ಬರೂ ಆರ್ಫಿಸಂನಿಂದ ಪ್ರಭಾವಿತರಾದವರು. ಹೆರಕ್ಲೀಟಸ್ ಪ್ರಕಾರ ಮೋಯಿರಾ ಮತ್ತು ಅನ್ಯಾಂಕೆ ಪರಸ್ಪರ ಹೋಲುತ್ತಾರೆ. ಪರ್ಮೆನೈಡಿಸ್ ಪ್ರಕಾರ ಮೋಯಿರಾ, ಡೈಕ್ ಮತ್ತು ಅನ್ಯಾಂಕೆ ಮೂವರೂ ಸಮಾನ ಗುಣಲಕ್ಷಣದವರು. ಒಂದು ಶತಮಾನದ ನಂತರ ಪ್ಲೇಟೋನ 'ರಿಪಬ್ಲಿಕ್' ಗ್ರಂಥದಲ್ಲಿ ಅನ್ಯಾಂಕೆಯು ಮೋಯಿರಾಳ ಸ್ಥಾನವನ್ನು ಕಸಿದುಕೊಳ್ಳುತ್ತಾಳೆ. ಮೋಯಿರಾಳ ಲಾಂಛನವಾದ ಕದಿರು ಅನ್ಯಾಂಕೆಯ ಕೈಗೆ ಬರುತ್ತದೆ. ಇದರ ಔಚಿತ್ಯವೇನು ?

ಹೋಮರ್ ನಂತರದ ಗ್ರೀಕ್ ಸಾಹಿತ್ಯದುದ್ದಕ್ಕು ಅನ್ಯಾಂಕೆ (ಅವಶ್ಯಕತೆ) ಮತ್ತು ಡೌಲಿಯ (ಗುಲಾಮಗಿರಿ) ಕಲ್ಪನೆಗಳು ಒಂದಕ್ಕೊಂದು ಅಂಟಿಕೊಂಡೆ ಬಂದಿವೆ. ಅನ್ಯಾಂಕೆಯ ಕಲ್ಪನೆಯನ್ನು ಪದೆ ಪದೆ ಗುಲಾಮರ ಕಠಿಣ ದುಡಿಮೆ ಮತ್ತು ಅವರ ಮೇಲಿನ ಹಿಂಸೆ, ದೌರ್ಜನ್ಯಗಳನ್ನು ಸೂಚಿಸಲು ಬಳಸಲಾಗಿದೆ. ಚಾಟಿಯೇಟಿನ ಉಸ್ತುವಾರಿಯಲ್ಲಿ ಅವಿಶ್ರಾಂತ ದುಡಿಮೆಗೆ ಒಪ್ಪಿಸಿಕೊಂಡವರ, ಸರಕು ಸಾಗಣೆಯಲ್ಲಿ ಮೂಗುದಾಣ ಹಾಕಿಸಿಕೊಂಡವರಂತೆ ಓಡಾಡುವವರ ದೃಶ್ಯಗಳು ಹೇರು ಎಳೆಯುವ ಎತ್ತುಗಳ ಪ್ರತಿಮೆಗೆ ಪ್ರಚೋದನೆ ನೀಡಿರಬೇಕು. ಅನ್ಯಾಂಕೆ ಮತ್ತು ಡೌಲಿಯರಿಗೆ ಅನ್ವಯಿಸುವ ಸಾಂಪ್ರದಾಯಿಕ ರೂಪಕವೆಂದರೆ ಜ್ಯೈಗೋನ್ ಅಥವಾ 'ನೊಗ'. ಅಲ್ಲದೆ ಆರ್ಫಿಕ್ ಅಧೋಜಗತ್ತಿನ ಚಿತ್ರವೊಂದರಲ್ಲಿ ಗುಡ್ಡದ ಮೇಲಕ್ಕೆ ಕಲ್ಲುಬಂಡೆಯನ್ನು ಉರುಳಿಸಿಕೊಂಡು ಒಯ್ಯುತ್ತಿರುವ ಸಿಸಿಫಸ್‌ನನ್ನೂ ಚಾಟಿ ಹಿಡಿದ ಗುಲಾಮ ನಿಯಂತ್ರಕಿ ಅನ್ಯಾಂಕೆಯನ್ನೂ ಕಾಣಬಹುದಾಗಿದೆ. ಅನ್ಯಾಂಕೆ ಪ್ರತಿನಿಧಿಸುವ ತತ್ವ ಇದು: ದುಡಿಯಲು ಶಕ್ತವಾಗುವಷ್ಟು ಮಾತ್ರ ಜೀವಂತವಿಡುವಂತೆ ಕನಿಷ್ಠ ಅವಶ್ಯಕತೆಗಳ ಪೂರೈಕೆ ಮಾಡುವುದರ ಹೊರತಾಗಿ, ಸಮಾಜದ ದುಡಿಯುವ ಸದಸ್ಯರಿಗೆ ತಮ್ಮ ಉತ್ಪಾದನೆಯಲ್ಲಿ ಯಾವ ಹೆಚ್ಚಿನ ಪಾಲೂ ದಕ್ಕದಂತೆ ಮಾಡುವುದು. ಮೋಯಿರಾಳೆ ಅನ್ಯಾಂಕೆಯಾದಾಗ ಅವಳು ಪ್ರತಿನಿಧಿಸುತ್ತಿದ್ದ ತತ್ವದ ತದ್ವಿರುದ್ಧವಾಗಿ ಇವಳು ರೂಪಾಂತರಗೊಂಡಳು.

"ದುಃಖ ಸಂಕಟಗಳ ಚಕ್ರದಿಂದ ಹಾರಿ ಬಂದಿದ್ದೇನೆ" ಎಂಬುದು ಆತ್ಮವು ದೇಹವನ್ನು ಬಿಟ್ಟು ಹೋದಾಗ ಆರ್ಫಿಕರು ಪಠಿಸುತ್ತಿದ್ದ ಮಂತ್ರ. ಹುಟ್ಟಿನ ಚಕ್ರ, ಅದೃಷ್ಟಚಕ್ರ, ಅವಶ್ಯಕತೆಯ ಚಕ್ರ ಎಂದೆಲ್ಲ ವರ್ಣಿಸಲ್ಪಟ್ಟ ಈ ಚಕ್ರ ಉರುಳಿ

ಬಂದದ್ದು ಕುಲದೇವತಾ ಪದ್ಧತಿಯಲ್ಲಿ ಹೇಳಲಾಗಿರುವ ಹುಟ್ಟು-ಸಾವಿನ ಕಾಲಚಕ್ರದಿಂದಲೆ. ಆದರೆ ಆದಿಮಾನವನ ಈ ಕಲ್ಪನೆಗೆ ಹೊಸ ಅರ್ಥ ಕೊಟ್ಟು ಸಮಕಾಲೀನ ಸಂಕೇತವನ್ನಾಗಿ ಮಾಡಲಾಗಿದೆ. ಚಕ್ರವು ಗುಲಾಮರನ್ನು ಶಿಕ್ಷಿಸುವ ಹಿಂಸಾಯಂತ್ರವಾಗಿತ್ತು. ಶಿಕ್ಷೆಗೆ ಗುರಿಯಾದವನ ಕೈಕಾಲುಗಳನ್ನು ಚಕ್ರಕ್ಕೆ ಬಿಗಿದು ಅದನ್ನು ಜೋರಾಗಿ ತಿರುಗಿಸುತ್ತಿದ್ದರು. ಹೀಗಾಗಿ ಚಕ್ರದಿಂದ ಹಾರಿಹೋಗುವುದೆಂದರೆ ಮನುಷ್ಯ ಬದುಕಿನ ಸಂಕಟಗಳಿಂದ ಬಿಡುಗಡೆ ಪಡೆಯುವುದು, ಮುಕ್ತಿ ಹೊಂದುವುದು, ಪಾರಾಗುವ ದಾರಿ ಕಂಡುಕೊಳ್ಳುವುದು, ಉಸಿರಾಡಲು ತಾವು ಹುಡುಕಿಕೊಳ್ಳುವುದು ಎಂದೆಲ್ಲ ಅರ್ಥವಿತ್ತು. ದುಡಿಮೆ ಮತ್ತು ದುಷ್ಕೃತ್ಯಗಳಿಂದ ಬಿಡುಗಡೆ ಪಡೆಯುವ ಅರ್ಥದ ಈ ಮುಕ್ತಿ-ತತ್ವವು ಇತ್ತೀಚೆಗೆ ಗಂಭೀರ ವಾಸ್ತವವನ್ನು ಕಟ್ಟಿಕೊಡುವ ಪಾರಿಭಾಷಿಕವಾಗಿ ಉಳಿದುಕೊಂಡಿದೆ.

ಆರ್ಫಿಕ್ ಸಾಂಕೇತಿಕತೆಯ ಮೂಲವು ಯಾವುದೆಂದು ನಿರ್ಧರಿಸಿದಾಕ್ಷಣ ಆ ಪಂಥದ ಸಾಮಾಜಿಕ ರಚನೆ ಬಗ್ಗೆ ನಿರ್ಣಯ ಕೊಟ್ಟುಬಿಡಲು ಸಾಧ್ಯವಿಲ್ಲ. ಆರ್ಫಿಸಂ ತನ್ನ ಸುದೀರ್ಘ ಇತಿಹಾಸದುದ್ದಕ್ಕೂ ಸಮಾಜದ ಎಲ್ಲ ವರ್ಗಗಳನ್ನೂ ಭೇದಿಸಿಕೊಳ್ಳುತ್ತ ಬಂದಿದೆ. ಯುರಿಪೀಡಿಸ್‌ನಂಥ ಪ್ರಜಾಪ್ರಭುತ್ವವಾದಿಗಳು, ಪ್ಲೇಟೋನಂಥ ಶ್ರೀಮಂತ ವರ್ಗದವರು, ಪ್ಲೂಟಾರ್ಕ್‌ನಂಥ ಗೌರವಾನ್ವಿತ ಮಧ್ಯಮ ವರ್ಗದವರು ಎಲ್ಲರೂ ಇದರ ಪ್ರಭಾವಕ್ಕೆ ಒಳಗಾಗಿದ್ದಾರೆ. ಗ್ರೀಕರ ನಗರ-ರಾಜ್ಯವು ತನ್ನ ಉಚ್ಛ್ರಾಯ ಸ್ಥಿತಿಯನ್ನು ದಾಟುತ್ತಿದ್ದ ಕಾಲದಲ್ಲಿ ಸಾಮಾಜಿಕ ಹತಾಶೆ, ನಿರಾಶಾವಾದ ಹಾಗು ಆದರ್ಶವಾದಗಳು ಹರಡುತ್ತಿದ್ದವು. ಇವರಿಂದಾಗಿ ಅನುಭಾವಿ ಪಂಥವು ಹೊಸ ಕಸುಬನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಯಿತು. ಸಾಮಾಜಿಕ ಒಡಕುಗಳು ಆಳವಾಗುತ್ತ ಹೋಗುತ್ತಿದ್ದ ಆ ಕಾಲದಲ್ಲಿ ಎಲ್ಲ ವರ್ಗದ ವ್ಯಕ್ತಿಗಳೂ ಸಂಘಟನೆಗೆ ಒಗ್ಗದ ತಮ್ಮ ವೈಯುಕ್ತಿಕ ನಿಲುವುಗಳನ್ನು ವ್ಯಕ್ತಪಡಿಸುತ್ತಿದ್ದರು. ಆರ್ಫಿಕ್ ಚಳವಳಿ ಗುಲಾಮರ ಚಳವಳಿಯಾಗಿತ್ತು ಎನ್ನಲು ಸ್ಪಷ್ಟವಾದ ಆಧಾರಗಳಿಲ್ಲ, ನಿಜ. ಆದರೆ ಆರ್ಫಿಕ್ ಸಾಂಕೇತಿಕತೆಯಿಂದ ಸ್ಪಷ್ಟವಾಗುವ ಅಂಶ ಇದು: ಭೂಮಿಯಿಂದ ಓಡಿಸಲ್ಪಟ್ಟ ರೈತಮಕ್ಕಳ ಸಂಕಟದಿಂದಲೆ ಈ ಚಳವಳಿ ತನ್ನ ಮೂಲ ಪ್ರೇರಣೆಯನ್ನು ಪಡೆಯಿತು; ಗುಲಾಮಗಿರಿಗೆ ಇಳಿಸಲ್ಪಟ್ಟವರ ಯಾತನೆಯಿಂದಲೆ ತನ್ನ ತಾತ್ವಿಕತೆಯನ್ನು ರೂಪಿಸಿಕೊಂಡಿತು; ಮತ್ತು ನಗರಕ್ರಾಂತಿಯ ದೆಸೆಯಿಂದ ಕಾರ್ಖಾನೆಗಳಿಗೆ ತಳ್ಳಲ್ಪಟ್ಟವರ ದಾರಿದ್ರ್ಯದಿಂದಲೆ ತನ್ನ ಸಂಘಟನಾ ಶಕ್ತಿಯನ್ನು ಬೆಳೆಸಿಕೊಂಡಿತು. ಕ್ರಿಶ್ಚಿಯಾನಿಟಿಯ ಪೂರ್ವೇತಿಹಾಸವನ್ನು ಆರ್ಫಿಸಂನ ಪೂರ್ವೇತಿಹಾಸಕ್ಕೆ ಹೋಲಿಸಿದರೆ ಈ ಅಂಶ ಮತ್ತಷ್ಟು ಸ್ಪಷ್ಟವಾಗುತ್ತದೆ.

ಕ್ರಾಂತಿಕಾರಿ ಪಾಖಂಡವಾದಕ್ಕೆ ತದ್ವಿರುದ್ಧವಾದ ಕ್ರಿಶ್ಚಿಯಾನಿಟಿಯು, ಚಕ್ರವರ್ತಿ

ಕಾನ್‌ಸ್ಟಂಟೈನ್ ಮತಾಂತರಗೊಂಡ ದಿನದಿಂದಲೂ, ಆಳುವ ವರ್ಗದ ಅಧಿಕೃತ ಧರ್ಮ ವಾಗಿದೆ. ಆದರೂ ಆರ್ಫಿಸಂನ ಹಾಗೆಯೇ ಆ ಧರ್ಮವು ಕೂಡ ದುಡಿಮೆಗಾರರ ನಡುವೆಯೇ ಹುಟ್ಟಿಕೊಂಡಿತು. ದೀನ–ದಲಿತರ ನಡುವೆ ತಾನು ಹುಟ್ಟಿರುವ ಗುರುತು ಗಳನ್ನು ಕ್ರಿಶ್ಚಿಯಾನಿಟಿ ಇವತ್ತಿಗೂ ಉಳಿಸಿಕೊಂಡು ಬಂದಿದೆ. "ಹಸಿದವರಲ್ಲಿ ಒಳ್ಳೆಯ ಗುಣಗಳನ್ನು ತುಂಬಿ ಕಳಿಸಿದ ದೇವರು ಶ್ರೀಮಂತರನ್ನು ಖಾಲಿ ಖಾಲಿ ಕಳಿಸಿಬಿಟ್ಟ" ಎಂದು ಮೇರೀ ಸ್ತೋತ್ರದಲ್ಲಿ (ಮ್ಯಾಗ್ನಿಫಿಕ್ಯಾಟ್) ಇವತ್ತಿಗೂ ಹಾಡುತ್ತೇವೆ. ಆದರೆ ಅದರ ಸಾಮಾಜಿಕ ಇಂಗಿತವನ್ನು ಮಾತ್ರ ಮರೆತುಬಿಟ್ಟಿದ್ದೇವೆ. ಪಾಪವಿಮೋಚನೆಯ ತತ್ವಕ್ಕೆ ಈಗಲೂ ಅಂಟಿಕೊಂಡಿದ್ದೇವೆ. ಆದರೆ ಅದು ಮೂಲತಃ ಗುಲಾಮ ತನ್ನ ಸ್ವಾತಂತ್ರ್ಯವನ್ನು ಖರೀದಿಸುವ ಸಂಗತಿಗೆ ಸಂಬಂಧಪಟ್ಟಿದೆ ಎಂಬುದನ್ನು ಮರೆತು ಬಿಟ್ಟಿದ್ದೇವೆ. ಇವತ್ತಿಗೂ ಶಿಲುಬೆಯೆದುರು ಮಂಡಿಯೂರುತ್ತೇವೆ. ಆದರೆ ಶಿಲುಬೆ ಸಹ ಆರ್ಫಿಕ್ ಚಕ್ರದಂತೆ ಸಮಕಾಲೀನ ವಾಸ್ತವದ ಸಂಕೇತವಾಗಿತ್ತು ಎಂಬುದನ್ನು ಗಮನಿಸದೆ ಹೋಗುತ್ತೇವೆ.

ಥ್ರೇಸ್ ಮತ್ತು ಗಣಿಗಳಲ್ಲಿನ ಬದುಕು ಹೇಗಿದ್ದಿತು ಎಂಬುದರ ಕುರಿತು ಸಿಗುವ ಪ್ರತ್ಯಕ್ಷ ಪ್ರಮಾಣಗಳು ಕಡಿಮೆ. ಕ್ರಿಸ್ತಪೂರ್ವ ಎರಡನೆ ಶತಮಾನದ ಕೊನೆಯಲ್ಲಿ ಆ್ಯಟಿಕ್ ಗಣಿಗಳಲ್ಲಿ ದುಡಿಯುತ್ತಿದ್ದ ಗುಲಾಮರ ಸಂಖ್ಯೆ ದಶಸಾವಿರಗಳಷ್ಟಿತ್ತು ಎಂದು ತಿಳಿದುಬಂದಿದೆ. ಒಮ್ಮೆ ಗುಲಾಮರು ದಂಗೆ ಎದ್ದಿದ್ದರೆಂದೂ, ಆ ದಂಗೆಯನ್ನು ಅಡಗಿಸ ಲಾಯಿತೆಂದೂ ಹೇಳಲಾಗಿದೆ. ಕ್ರಿಸ್ತಪೂರ್ವ 413 ರಲ್ಲಿ ಪೆಲಪನೀಷಿಯನ್ ಯುದ್ಧ ದಲ್ಲಿ 20,000 ಆ್ಯಟಿಕ್ ಗುಲಾಮರನ್ನು ಸ್ಪಾರ್ಟನ್ನರ ವಶಕ್ಕೆ ಒಪ್ಪಿಸಲಾಯಿತು, ಇವರಲ್ಲಿ ಬಹಳ ಮಂದಿ ಗಣಿ ಕಾರ್ಮಿಕರೆ ಆಗಿದ್ದಿರಬೇಕು. ಗಣಿ ಕಾರ್ಮಿಕರು ದುಡಿಯುತ್ತಿದ್ದ ಪರಿಸರದ ಬಗ್ಗೆ ಒಂದನೆ ಶತಮಾನದಲ್ಲಿದ್ದ ಡಯಡಾರಸ್ ಬರೆದಿದ್ದಾನೆ. ಈಜಿಪ್ಟ್ ಮತ್ತು ಸ್ಪೇನ್‌ನ ಬೆಳ್ಳಿ ಬಂಗಾರದ ಗಣಿಗಳಲ್ಲಿ ದುಡಿಯು ತ್ತಿದ್ದವರ ಪರಿಸ್ಥಿತಿ–ಪರಿಸರ ಹೇಗಿದ್ದವು ಎಂಬುದರ ಬಗ್ಗೆ ಇವನ ವಿವರಣೆ ಗಮನಾರ್ಹ ವಾಗಿದೆ. ಬಂಡೆ ಕಡಿದು ಅದಿರು ತೆಗೆಯುವವರು ಯಾವುದೆ ತರಬೇತಿಯಿಲ್ಲದ ಶ್ರಮ ಜೀವಿಗಳಾಗಿದ್ದರು :

> "ಈಜಿಪ್ಟಿನ ಗಡಿಪ್ರದೇಶ ಹಾಗು ಅರೇಬಿಯಾ, ಇಥಿಯೋಪಿಯಾಗಳಿಗೆ ಸೇರಿದ ಕೆಲವು ಪ್ರಾಂತ್ಯಗಳಲ್ಲಿ ಹಲವಾರು ದೊಡ್ಡದೊಡ್ಡ ಬಂಗಾರದ ಗಣಿಗಳಿವೆ. ಇಲ್ಲಿ ನಿರಂತರವಾಗಿ ನಡೆಯುತ್ತಿರುವ ದುಡಿಮೆಯು ಬೃಹತ್ ಪ್ರಮಾಣದಲ್ಲಿ ಬಂಡವಾಳವನ್ನೂ ಮತ್ತು ಬಡತನವನ್ನೂ ನಿರ್ಮಾಣ ಮಾಡಿದೆ. ಇಲ್ಲಿನ ಬಂಡೆಗಳು ಕಪ್ಪಾಗಿದ್ದು ಕೋರೈಸುವ ಅಮೃತಶಿಲೆಯ ಸೀಳು ಎಳೆಗಳಿಂದ ಕೂಡಿವೆ. ಗುಂಪು ಗುಂಪಾಗಿ ಕೆಲಸದಾಳುಗಳು ದುಡಿಯುತ್ತ ಮೇಸ್ತ್ರಿಗಳ

ಮೇಲ್ವಿಚಾರಣೆಯಲ್ಲಿ ಬಂಗಾರ ಶೋಧಿಸುತ್ತಾರೆ. ಈಜಿಪ್ಷಿಯನ್ ರಾಜರು ಇಲ್ಲಿಗೆ ಯುದ್ಧ ಖೈದಿಗಳನ್ನು, ಶಿಕ್ಷೆಗೆ ಗುರಿಯಾದ ಆರೋಪಿಗಳನ್ನು, ಸುಳ್ಳು ಆರೋಪಗಳಿಗೆ ಬಲಿಯಾದವರನ್ನು, ಅರಮನೆಯ ಅವಕೃಪೆಗೆ ಪಾತ್ರರಾದವರನ್ನು ಅಟ್ಟುತ್ತಾರೆ. ತಪ್ಪಿತಸ್ಥರಿಗೆ ಶಿಕ್ಷೆಯೂ ಸಿಕ್ಕಿತು, ಅವರ ದುಡಿಮೆಯಿಂದ ತಮಗೆ ಲಾಭವೂ ಆಯಿತು—ಹೀಗೆ ಒಂದೇ ಏಟಿಗೆ ಎರಡು ಕೆಲಸವಾಗುತ್ತವೆ. ಸರಪಳಿ ಬಿಗಿದ ಕೆಲಸದಾಳುಗಳನ್ನು ಹಗಲು ರಾತ್ರಿ ಎನ್ನದೆ ದುಡಿಸಲಾಗುತ್ತದೆ. ಅವರಿಗೆ ಯಾವ ವಿಶ್ರಾಂತಿಯೂ ಇಲ್ಲ. ಪಾರಾಗುವ ಅವಕಾಶವೂ ಇಲ್ಲ. ಅವರೆಲ್ಲ ಬೇರೆ ಬೇರೆ ಭಾಷೆ ಆಡುವವರಾದ್ದರಿಂದ ಕಾವಲು ಕಾಯುವವರೊಡನೆ ಸ್ನೇಹ ಕುದುರಿಸಿ ಕೆಲಸಕ್ಕೆ ಕಳ್ಳತಪ್ಪಿಸುವ ಸಾಧ್ಯತೆಯೂ ಇಲ್ಲ. ಬಂಗಾರವುಳ್ಳ ಬಂಡೆ ಗಟ್ಟಿಯಾಗಿದ್ದರೆ ಅದನ್ನು ಬೆಂಕಿಯಿಂದ ಸುಡಲಾಗುತ್ತದೆ. ಅದು ಮೆತ್ತಗಾದ ನಂತರ ಸಾವಿರಾರು ಮಂದಿ ಬಡ ಅಡ್ಡಕಸುಬಿಗಳನ್ನು ಆದರಿಂದ ಬಂಗಾರ ಬಗೆಯಲು ಬಿಡಲಾಗುತ್ತದೆ. ಕಬ್ಬಿಣದ ಹತ್ಯಾರಗಳಿಂದ ಅವರು ಕಲ್ಲು ಒಡೆಯಬೇಕಾಗುತ್ತದೆ. ಕುಶಲಕರ್ಮಿಗಳು ಬಂಡೆಯನ್ನು ಪರೀಕ್ಷಿಸಿ ಎಲ್ಲಿಂದ ಒಡೆಯಲು ಪ್ರಾರಂಭಿಸಬೇಕೆಂದು ತಿಳಿಸುತ್ತಾರೆ. ಬಲಿಷ್ಠ ಆಳುಗಳನ್ನು ಪಿಕಾಸಿಯಿಂದ ಅಮೃತಶಿಲೆಯನ್ನು ಕಡಿದು ತೆಗೆಯಲು ಹಚ್ಚಲಾಗುತ್ತದೆ. ಅವರ ಕೆಲಸದಲ್ಲಿ ಯಾವುದೆ ಜಾಣ್ಮೆ, ಕೌಶಲ ಇರುವುದಿಲ್ಲ. ಇರುವುದು ಅವರ ತೋಳ್ಬಲ ಒಂದೆ. ನೇರ ತುಂಡುಗಳಾಗಿ ಕಡಿಸದೆ ಅಮೃತಶಿಲೆಯ ಅಂಕುಡೊಂಕು ಎಳೆಯಗುಂಟ ಕಡಿಸಲಾಗುತ್ತದೆ. ಕ್ವಾರಿಯ ತಿರುವು ತಿಟ್ಟುಗಳಿಂದಾಗಿ ಕೆಲವು ಜಾಗಗಳಲ್ಲಿ ಬೆಳಕೆ ಬೀಳುವುದಿಲ್ಲ. ಇಂಥಲ್ಲಿ ಕೆಲಸದಾಳುಗಳು ತಲೆಗೆ ದೀಪ ಕಟ್ಟಿಕೊಂಡು ಬಂಡೆಯ ಆಕಾರಕ್ಕೆ ತಕ್ಕಂತೆ ಮೈ ತಿರುಚಿಕೊಂಡು ನಿಂತು ಕಲ್ಲು ಕಡಿದು ಕೆಳಕ್ಕೆ ಎಸೆಯುತ್ತಾರೆ. ವಿರಾಮವಿಲ್ಲದೆ ದುಡಿಯುವ ಇವರ ಬೆನ್ನುಗಳ ಮೇಲೆ ಮೇಸ್ತ್ರಿಯ ಕ್ರೂರ ಚಾವಟಿ ತೂಗುತ್ತಲೆ ಇರುತ್ತದೆ. ಇವರು ಕೆಳಗಿನ ಹೊಂಡಕ್ಕೆ ಎಸೆದ ಕಲ್ಲು ತುಂಡುಗಳನ್ನು ಎಳೆ ಮಕ್ಕಳು ಆಯ್ದುಕೊಂಡು ಹೊತ್ತು ಹೊರಗೆ ಸಾಗಿಸುತ್ತಾರೆ. ಮೂವತ್ತು ದಾಟಿದ ಗಂಡಸರು ಅವನ್ನ ಈಸಿಕೊಂಡು ಕೊಟ್ಟಣ—ಹಾರೆಗಳಿಂದ ಕುಟ್ಟಿ ಸಣ್ಣಗೆ ಜಲ್ಲಿ ಮಾಡುತ್ತಾರೆ. ಹೆಂಗಸರು ಮತ್ತು ಮುದುಕರು ಈ ಜಲ್ಲಿಯನ್ನು ಸಾಲಾಗಿ ನಿಂತ ಅರೆಕಲ್ಲುಗಳಿಗೆ ಸುರಿದು ಅರೆದು ಹಿಟ್ಟಿನಷ್ಟು ನುಣುಪಾದ ಕಲ್ಪುಡಿ ತಯಾರಿಸುತ್ತಾರೆ. ಮಾನ ಮುಚ್ಚಿಕೊಳ್ಳುವಷ್ಟೂ ಬಟ್ಟೆಗೆ ಗತಿಯಿಲ್ಲದ ಇವರನ್ನ ನೋಡಿದವರಿಗೆ ಮಾನವಾನುಕಂಪ ಉಕ್ಕುತ್ತದೆ. ಹೆಂಗಸರು ಬಾಯಿಲೆಯವರಾದರೂ, ಅಂಗವಿಕಲೆಯರಾದರೂ, ಬಲಹೀನ ವೃದ್ಧೆಯರಾದರೂ

ಅವರಾರಿಗೂ ಈ ಶ್ರಮ-ಶಿಕ್ಷೆಯಿಂದ ಬಿಡುಗಡೆಯಿಲ್ಲ. ಈ ಕಷ್ಟಕೋಟಲೆಯು ಹಿಂಸೆ ತಾಳಲಾರದೆ ಪ್ರಾಣ ಬಿಡುವವರೆಗೂ ಈ ನತದೃಷ್ಟ ಗುಲಾಮರನ್ನು ಒಂದೇಸಮ ದಂಡಿಸಲಾಗುತ್ತದೆ (EN TAIS ANANKAIS). ಅವರ ದುಃಖ ಎಷ್ಟು ಅಪಾರವಾದದ್ದೆಂದರೆ ಮುಂದೇನು ಬರುತ್ತದೋ ಎಂಬ ಭೀತಿಯಲ್ಲಿ ಸದ್ಯದ ಹಿಂಸೆ ಅವರ ಅರಿವಿಗೇ ಬರುವುದಿಲ್ಲ. ಅಂಥ ಕಠಿಣ ಶಿಕ್ಷೆಯಡಿ ಅವರಿಗೆ ಬದುಕಿಗಿಂತ ಸಾವೆ ಹೆಚ್ಚು ಸುಖದಾಯಕ ಎನಿಸಿದರೆ ಆಶ್ಚರ್ಯವಿಲ್ಲ."

ಚಿಕ್ಕಪುಟ್ಟ ಮಕ್ಕಳನ್ನು ಗಣಿಗಳಲ್ಲಿ, ಕಾರ್ಖಾನೆಗಳಲ್ಲಿ ದಂಡಿಸುತ್ತಿರುವ ಸಾಮ್ರಾಜ್ಯದ ನಾಗರಿಕರಿಗೆ ಪ್ರಾಚೀನ ರೋಮನ್ನರತ್ತ ಗ್ರೀಕರತ್ತ ದೂರು ಬೆರಳು ತೋರಿಸುವ ಹಕ್ಕಿಲ್ಲ ಎಂಬುದು ನಿಜ. ಆದರೆ ಗ್ರೀಕ್ ಕಲೆಯ ಕಚ್ಚಾವಸ್ತುಗಳಿಗೆ ಸುರಿದಿರುವ ರಕ್ತ ಮತ್ತು ಕಣ್ಣೀರುಗಳ ಪ್ರಮಾಣವನ್ನು ಕಲ್ಪಿಸಿಕೊಳ್ಳಲು ಇದರ ಪ್ರಸ್ತಾಪ ಅವಶ್ಯಕವಾಗಿದೆ. ಸ್ಪೇನ್ ದೇಶದ ಗಣಿಗಳ ವಿವರಗಳೂ ಇಂಥವೆ ಬೆಳಕನ್ನು ಚೆಲ್ಲುತ್ತವೆ :

"ಇಲ್ಲಿನ ಗಣಿ ಕೆಲಸಗಾರರು ತಮ್ಮ ದಣಿಗಳಿಗೆ ಊಹಿಸಲಾರದಷ್ಟು ಲಾಭಮಾಡಿ ಕೊಡುತ್ತಿದ್ದಾರೆ. ಆದರೆ ಅವರ ಸ್ವಂತ ಬದುಕು ಮಾತ್ರ ದಾರಿದ್ರ್ಯದಿಂದ ತುಂಬಿದೆ. ಹಗಲೂ ರಾತ್ರಿ ಕ್ವಾರಿಗಳಲ್ಲಿ ಭೂಗತವಾಗಿ ದೇಹ ಸವೆಸುವುದೆ ಅವರ ಪಾಲಿನ ಬದುಕಾಗಿದೆ. ಈ ಸಂಕಟ ಸಹಿಸಲಾರದೆ ಎಷ್ಟೋ ಮಂದಿ ಪ್ರಾಣಬಿಡುತ್ತಾರೆ. ಅವರಿಗೆ ದುಡಿಮೆಯಿಂದ ವಿಶ್ರಾಂತಿಯಾಗಲಿ, ಬಿಡುಗಡೆಯಾಗಲಿ ಇಲ್ಲವೆ ಇಲ್ಲ. ಮೇಸ್ತ್ರಿಯ ಚಾಟಿಯೇಟಿಗೆ ಪಕ್ಕಾಗಿ ದುಡಿಯುವ ಅವರ ದುರವಸ್ಥೆಗಿಂತ ಸಾವೆ ಸಹ್ಯವೆನಿಸಿ ಜೀವನೀಗುತ್ತಾರೆ. ಸಾಕಷ್ಟು ದೈಹಿಕ ಕಸುವು, ಆತ್ಮಶಕ್ತಿ ಉಳ್ಳವರು ಮಾತ್ರ ಈ ಕಲ್ಲುಗಾಣ-ಮುಳ್ಳುಗಾಣಕ್ಕೆ ಸಿಕ್ಕಿಯೂ ಬದುಕಿ ಉಳಿಯುತ್ತಾರೆ."

ಈ ವಿವರ ಕೊಡುವಲ್ಲಿ ಡಯೊಡೋರಸ್ ತನಗೇ ಗೊತ್ತಿಲ್ಲದಂತೆ ಸಾಂಪ್ರದಾಯಿಕ ಆರ್ಫಿಕ್ ಭಾಷೆ ಬಳಸಿದ್ದಾನೆ.

ಈ ವಾಸ್ತವ ಸಂಗತಿಗಳೆ ಇಹ-ಪರ ಕುರಿತ ಆರ್ಫಿಕ್ ನೀತಿಕತೆ ಮತ್ತು ದಂತ ಕತೆಗಳ ಪ್ರತಿಮಾ ವಿಧಾನಕ್ಕೆ ಮೂಲ ಪ್ರೇರಣೆ ನೀಡಿದ್ದು. ಬಾಲ್ಯದಿಂದಲೂ ಕೈಕಾಲಿಗೆ ಸರಪಳಿ, ಸೂರ್ಯನ ಬೆಳಕೆ ಬೀಳದಂತೆ ಬಂಧಿಸಿಡುವ ಪ್ಲೇಟೋನ ಗುಹೆ; ನೀರು ಕೆಸರು ಬೆಂಕಿ ಗಂಧಕಗಳ ಪಾತಾಳ ಪ್ರವಾಹವುಳ್ಳ ಟಾರ್ಟರಸ್ ನರಕ; ಪುಣ್ಯಾತ್ಮರು ವಾಸಿಸುವ ಸ್ವಚ್ಛ ನೀಲಾಕಾಶದಡಿಯ ಮೋಕ್ಷದೇಶಗಳು — ಇವೆಲ್ಲ ಸಮಕಾಲೀನ ವಾಸ್ತವ ಮತ್ತು ಮನೋಭಾವವನ್ನು ಬಿಂಬಿಸುತ್ತವೆ.

"ಅತ್ಯಂತ ಪವಿತ್ರವಾಗಿ ಬದುಕಿದವರು ಮಾತ್ರ, ಜೈಲಿನಿಂದ ಬಿಡುಗಡೆಯಾಗಿ ಬರುವಂತೆ, ಈ ಪಾತಾಳ ಪ್ರದೇಶದಿಂದ ವಿಮುಕ್ತಿ ಪಡೆದು ಭೂಮಿಯ

ಮೇಲ್ಭಾಗಕ್ಕೆ ಬರುತ್ತಾರೆ ತಕ್ಕಮಟ್ಟಿಗಷ್ಟೆ ಪವಿತ್ರರಾದವರು ತಮ್ಮ ದೇಹಗಳಿಂದ ಮುಕ್ತರಾಗಿ ವರ್ಣನಾತೀತವಾದ ಸುಂದರ ಸ್ವರ್ಗದಲ್ಲಿ ಅನಂತ ಜೀವನ ಸಾಗಿಸುತ್ತಾರೆ. ಎಲೈ ಸಿಮಿಯಾಸ್, ಕೇಳುವಂಥವನಾಗು: ಸದ್ಗುಣ ಮತ್ತು ವಿವೇಕವನ್ನು ರೂಢಿಸಿಕೊಳ್ಳಲು ನಾವು ನಮ್ಮ ಶಕ್ತಿಮೀರಿ ಶ್ರಮಿಸಬೇಕು. ಇದಕ್ಕೆ ಸಿಗುವ ಬಹುಮಾನ ಬಹಳ ಸುಂದರವಾದದ್ದು. ನಮಗಿರುವ ಭರವಸೆ ಅಪಾರವಾದದ್ದು."

ಪ್ಲೇಟೋ ಗಣಿಕಾರ್ಮಿಕನಾಗಿರಲಿಲ್ಲ. ಅವನಿಗೂ ಅವರಿಗೂ ಸಂಬಂಧವೆ ಇರಲಿಲ್ಲ. ಆದರೆ ಹಳೆಯ ಸಂಪ್ರದಾಯ ಒಂದನ್ನು ತನ್ನ ಚಿಂತನೆಗೆ ಬಳಸಿಕೊಂಡಿದ್ದಾನೆ ಅವನು. ಬದುಕೆ ಒಂದು ಕಾರಾಗೃಹ, ದೇಹವು ಆತ್ಮದ ಸಮಾಧಿ ಎಂಬ ಕಲ್ಪನೆ ಹುಟ್ಟಿದ್ದು ಗಣಿಗಳಲ್ಲೇ ಎಂಬುದು ಸತ್ಯ.

ಡಯನೀಸಿಯಾಕ್ ಥೆಯಸೋಸ್ ಸಂಪ್ರದಾಯವನ್ನೆ ಆರ್ಫಿಕರು ತಮ್ಮ ಆಚರಣೆಗಳಲ್ಲಿ ಉಳಿಸಿಕೊಂಡು ಬಂದರೆಂದು ಕಾಣುತ್ತದೆ. ಬಹಿಷ್ಕೃತ ಆತ್ಮವು ಪುನಃ ದಿವ್ಯಚೇತನದಲ್ಲಿ ಲೀನವಾಗುವ ರೂಪಕವಾದ ಪ್ರಾಣಿ ಸಂಸ್ಕಾರವು ವಿಭಿನ್ನ ರೂಪದಲ್ಲಿ ಮುಂದುವರೆದಿರಬೇಕು. ದೀಕ್ಷೆಯ ಮೂಲಕವೆ ಪ್ರವೇಶ ಎಂಬ ನಿಯಮವೂ ಇದ್ದಿರಬೇಕು. ಆದರೆ ಆರ್ಫಿಕ್ ತಾರತಮ್ಯದ ಮೆಟ್ಟಿಲುಗಳು ಎಲ್ಯೂಸೀನಿಯನ್ ತಾರತಮ್ಯದ ಶ್ರೇಣಿಗಳಷ್ಟು ಅಸಂಖ್ಯವಾಗಿರಲಿಲ್ಲ. ಅಲ್ಲದೆ ಆರ್ಫಿಕ್ ಥೆಯಸೋಸ್‌ಗಳು ಹೆಂಗಸರಿಗಷ್ಟೆ ಮೀಸಲಾಗಿರಲಿಲ್ಲ. ಗಂಡಸರೂ ಅವುಗಳಲ್ಲಿ ಧಾರಾಳವಾಗಿ ಸೇರಿಕೊಳ್ಳಬಹುದಾಗಿತ್ತು. ಯೂರಿಪಿಡೀಸ್‌ನ 'ಹಿಪ್ಪಾಲಿಟಸ್' ನಾಟಕದ ಆಧಾರದ ಮೇಲೆ ಹೇಳುವುದಾದರೆ, ಕಡೆ ಪಕ್ಷ ಆ್ಯಟಿಕದಲ್ಲಾದರೂ ಬ್ರಹ್ಮಚರ್ಯವನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಈ ವಿಷಯದಲ್ಲಿ ಆರ್ಫಿಕರು ಸ್ಥಳೀಯ ಪರಿಸ್ಥಿತಿಗಳಿಂದ ಪ್ರಭಾವಿತರಾಗಿದ್ದಿರಬೇಕು. ಈ ಪರಿಸ್ಥಿತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದ್ದುವು. ಆದರೆ ಆರ್ಫಿಕ್ ಪುರಾಣವು ತಿಳಿಸುವಂತೆ ಗಂಡಸರಿಗೂ ಥೆಯಸೋಸ್‌ನಲ್ಲಿ ಪ್ರವೇಶ ಲಭಿಸಿದ್ದು ಅತ್ಯಂತ ಪ್ರಾಚೀನವೂ ನೆನಪಿನಲ್ಲಿಡಬೇಕಾದಂಥದೂ ಆದ ಒಂದು ಆಚರಣೆಯಿಂದಾಗಿ. ಸಶಸ್ತ್ರ ಗಂಡಸರ ತಂಡ ಒಂದಕ್ಕೆ ದೀಕ್ಷೆ ಕೊಟ್ಟು ಆರ್ಫಿಯಸ್‌ನು ಬ್ಯಾಖಸ್ ಪೂಜಾರಿಣಿಯರ ದ್ವೇಷ ಕಟ್ಟಿಕೊಂಡ ಎಂದು ಹೇಳಲಾಗುತ್ತದೆ.

ಆರ್ಫಿಕ್ ಚಳವಳಿ ಕನಿಷ್ಠ ತನ್ನ ಪ್ರಾರಂಭಿಕ ದಿನಗಳಲ್ಲಾದರೂ ಕ್ರಾಂತಿಕಾರಿಯಾಗಿತ್ತು ಎನ್ನಲು ಬರುವುದಿಲ್ಲ. ಅದು ಪ್ರಪಂಚವನ್ನು ಬದಲಾಯಿಸಲು ಪ್ರಯತ್ನಿಸಲಿಲ್ಲ. ಪ್ರಪಂಚದಿಂದ ಪಲಾಯನ ಮಾಡಲು ನೋಡಿತು. ಈ ದೃಷ್ಟಿಯಲ್ಲಿ ಅದು, ಹದಿನಾರನೆ ಶತಮಾನದಲ್ಲಿ ಜರ್ಮನಿಯಲ್ಲಿ ಮಾರ್ಟಿನ್ ಲೂಥರ್ ನಡೆಸಿದ ಚಳವಳಿ

ಯಂತೆ, ಉಳುವ ನೆಲದಿಂದ ಹೊರದೂಡಲ್ಪಟ್ಟ ರೈತರು ಸರಿಯಾಗಿ ಸಂಘಟಿತರಾಗದೆ ಸೋತು ಹೋದದ್ದನ್ನು ಪ್ರತಿಬಿಂಬಿಸುತ್ತದೆ. ತೀವ್ರ ಪ್ರತಿಭಟನೆಗೆ ಮುಖವಾಣಿ ಯಾದದ್ದು ನಿಜವಿದ್ದರೂ ಈ ಚಳವಳಿ ಯಾವ ಬೇಡಿಕೆಯನ್ನೂ ಮುಂದಿಡಲಿಲ್ಲ. ಹೀಗಾಗಿ ಭೌತಿಕ ಅವಶ್ಯಕತೆಗಳ ಒತ್ತಡವನ್ನು ಅದು ಪರಲೋಕದ ಭರವಸೆಯ ಕಡೆಗೆ ತಿರುಗಿಸಿಬಿಟ್ಟಿತು.

ಆರ್ಫಿಕ್ ದೇವಗಣದ ವಂಶಾವಳಿಯಲ್ಲಿರುವ ಅಚ್ಚುಕಟ್ಟುತನದ ಅಭಾವವು ಅರ್ಥವಾಗಬೇಕೆಂದರೆ, ಅದೆ ಕಾಲದಲ್ಲಿ ಮಿಲೀಟಸ್‌ನ ದಾರ್ಶನಿಕರು ಹುಟ್ಟುಹಾಕಿದ ವೈಜ್ಞಾನಿಕ ತತ್ತ್ವದೊಡನೆ ಅದನ್ನು ಹೋಲಿಸಬೇಕು. ಆದಾಗ್ಯೂ ಗ್ರೀಕ್ ಚಿಂತನೆಯ ವಿಕಾಸದಲ್ಲಿ ಆರ್ಫಿಕ್ ಚಳವಳಿ ಒಂದು ಪ್ರತಿಗಾಮಿ ಹೆಜ್ಜೆ ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ.

ಮೊದಲನೆಯದಾಗಿ, ಆರ್ಫಿಸಂನ ಅನಾಗರಿಕ ಲಕ್ಷಣಗಳು ಆ ಪಂಥವು ಹುಟ್ಟಿ ಬಂದ ವರ್ಗಕ್ಕೆ ಸಂಬಂಧಪಟ್ಟಿವೆ. ಎಯೋನಿಯದ ಆಳುವ ವರ್ಗವು ಇನ್ನೂ ಮೇಲ್ಮಟ್ಟಕ್ಕೆ ಏರಿತು ನಿಜ; ಆದರೆ ಅದು ಆಳುವ ವರ್ಗವಾಗಿತ್ತು ಎಂಬುದೆ ಅದಕ್ಕೆ ಕಾರಣ. ಅವರೆಲ್ಲ ಹುಟ್ಟುವಳಿ ಲಾಭದ ಮೇಲೆ ಬದುಕುತ್ತಿದ್ದರು; ಬೇರೆಯವರು ಅದರ ಬೆಲೆ ತೆರುತ್ತಿದ್ದರು. ನೆನಪಿನಲ್ಲಿಡಬೇಕಾದ ಮತ್ತೂ ಒಂದು ಅಂಶವೆಂದರೆ ದಾರ್ಶನಿಕರು ಮತ್ತು ವಿಜ್ಞಾನಿಗಳು ಆ ವರ್ಗದ ಒಂದು ಸಣ್ಣ ಭಾಗ ಮಾತ್ರವಾಗಿ ದ್ದರು. ಎಯೋನಿಯನ್ ಜ್ಞಾನೋದಯದ ಕೇಂದ್ರವಾಗಿದ್ದ ಮಿಲೀಟಸ್‌ನಲ್ಲಿ ನೆಲೆ ಯೂರಿದ್ದಂಥ ಅಪೊಲೊ ಪಂಥದ ಬ್ರ್ಯಾಂಕಿಡೈ ಅರ್ಚಕರು ರಾಜಕೀಯ ವರ್ಚಸ್ಸುಳ್ಳವ ರಾಗಿದ್ದರು. ಡೆಲ್ಫೈಯ ಅಪೊಲೊ ಮನೆತನ ಬಿಟ್ಟರೆ ತಾವೆ ಸೈ ಎಂದು ಬೀಗುತ್ತಿದ್ದ ಈ ಅರ್ಚಕರು ದೇವವಾಣಿಯನ್ನು ಜಾಣತನದಿಂದ ಬಳಸಿಕೊಂಡು ತಮ್ಮ ರಾಜಕೀಯ ವರ್ಚಸ್ಸನ್ನು ಕಾಪಾಡಿಕೊಳ್ಳುತ್ತಿದ್ದರು. ತಮ್ಮ ಖಾಸಗಿ ಬದುಕಿನಲ್ಲಿ ಮೂಢನಂಬಿಕೆ ಗಳನ್ನು ಮೆಟ್ಟಿನಿಂತಿದ್ದ ಈ ಮೈಲೀಸಿಯನ್ ಶ್ರೀಮಂತರು ಅವೆ ಮೂಢನಂಬಿಕೆಗಳನ್ನು ನೀತಿಯ ಅಸ್ತ್ರವನ್ನಾಗಿ ಸಾರ್ವಜನಿಕರ ಮೇಲೆ ಪ್ರಯೋಗಿಸುತ್ತಿದ್ದರು. ಈ ಹಿಡಿತ ವನ್ನು ಬಿಟ್ಟುಕೊಡಲು ಅವರು ಸುತರಾಂ ತಯಾರಿರಲಿಲ್ಲ. ಬ್ರ್ಯಾಂಕಿಡೈ ಪೂಜಾರಿಣಿ ಒಬ್ಬಳು ಜಲಾನಿಲವನ್ನು ಸೇವಿಸಿ, ಕವಿದ ಮತ್ತಿನಲ್ಲಿ ದೇವವಾಣಿಯನ್ನು ಭಕ್ತರಿಗೆ ಬಿತ್ತರಿಸುತ್ತಿದ್ದಳು.

ಎರಡನೆಯದಾಗಿ, ಬಹುಕಾಲ ಗೌರವಾನ್ವಿತರಾಗಿದ್ದ ಶ್ರೀಮಂತ ವರ್ಗದವರ ನೀತಿ ಸಂಹಿತೆಗೆ ಆರ್ಫಿಕರು ಬಲವಾದ ಸವಾಲೆಸೆದರು. ನಿರೀಕ್ಷೆ ಅಪಾಯಕಾರಿ, ಪ್ರೀತಿ ಅಪಾಯ ಕಾರಿ, ಹೋರಾಟ ಅಪಾಯಕಾರಿ, ದೇವತೆಗಳನ್ನು ಮೀರಲೆತ್ನಿಸುವುದು ಅಪಾಯಕಾರಿ; ನಿನ್ನ ಹತ್ತಿರ ಎಷ್ಟಿದೆಯೋ ಅಷ್ಟಕ್ಕೆ ತೃಪ್ತಿಪಡು, ಎಲ್ಲ ವಿಷಯಗಳಲ್ಲು ಮಿತಿಯಲ್ಲಿರು —

ಇಂಥ ಹೆದರುಪುಕ್ಕಲು ಹುಟ್ಟಿಸುವ ಸುಳ್ಳುಗಳಿಂದ ಸಾಮಾನ್ಯ ಜನತೆಯನ್ನು ಬಿಡುಗಡೆ ಮಾಡಿದವರು ಆರ್ಫಿಕರು. ತಮ್ಮ ಹತ್ತಿರ ಎಷ್ಟಿತ್ತೋ ಅಷ್ಟಕ್ಕೆ ಅವರು ತೃಪ್ತಿಪಡುವಂತೆ ಇರಲಿಲ್ಲ; ಯಾಕೆಂದರೆ ಅವರ ಹತ್ತಿರ ಏನೂ ಇರಲೆ ಇಲ್ಲ. ಅವರ ನಿರೀಕ್ಷೆಗಳು ಅವರ ಆಸೆಗಳಷ್ಟೆ ಅನಂತವಾಗಿದ್ದವು. ಇಡಿ ಬದುಕೆ ರಗಳೆ, ಜಗಳ, ತೋಟಿ, ಕೋಟಲೆ ಹೋರಾಟಗಳಿಂದ ತುಂಬಿತ್ತು. ಧೈರ್ಯದಿಂದ ಓಡಿ ಗುರಿಮುಟ್ಟಿ ಸ್ಪರ್ಧೆಯಲ್ಲಿ ಗೆಲ್ಲಬೇಕಿತ್ತು. ವೈಭವದ ಬಹುಮಾನವನ್ನು ಗೆದ್ದುಕೊಂಡು ದೇವರಾಗಲು ಹೊರಟವರಷ್ಟು ಸ್ವಾಭಿಮಾನಹೀನರು, ಅತಿವಿನಮ್ರರು ಮತ್ತೆ ಯಾರೂ ಇರಲಿಲ್ಲ. ಹೀಗೆ ಆರ್ಫಿಕರು ತಮ್ಮದೆ ಆದ, ತಿರುಗುಮುರುಗಾದ ಅನುಭಾವದ ಮೂಲಕ ಪ್ರಜಾಪ್ರಭುತ್ವ ಚಳವಳಿಯ ವಾಸ್ತವಿಕ ಸತ್ವವನ್ನು ಎತ್ತಿಹಿಡಿದಿದ್ದಾರೆ. ಕಡೆಯತನಕವೂ ಜನಪರವಾಗಿದ್ದ ಅವರ ಚಳವಳಿ ಜನಸಮುದಾಯದ ಏಬ್ರಾಸಿತನವನ್ನು ಬಡಿದೋಡಿಸಿ ಅನುಭಾವವನ್ನ ಕ್ರಿಯಾಶೀಲತೆಯನ್ನಾಗಿ ಪರಿವರ್ತಿಸಲು ಮಹತ್ವದ ಪ್ರಚೋದನೆ ನೀಡಿತು.

('ಈಸ್ಕಿಲಸ್ ಮತ್ತು ಅಥೆನ್ಸ್' ಗ್ರಂಥದಲ್ಲಿನ 'ಆರ್ಫಿಸಂ' ಎಂಬ ಅಧ್ಯಾಯದ ಈ ಸಂಗ್ರಹಾನುವಾದದಲ್ಲಿ ಬಂದಿರುವ ಹೆಸರುಗಳ ಉಚ್ಚಾರಣೆಯಲ್ಲಿ 'ಎವ್ರಿಮನ್ಸ್ ಇಂಗ್ಲಿಷ್ ಪ್ರನೌನ್ಸಿಂಗ್ ಡಿಕ್ಷನರಿ'ಯನ್ನು ಅನುಸರಿಸಿದ್ದೇನೆ.)

ಸಂಗ್ರಹಾನುವಾದ: ಬಿದರಹಳ್ಳಿ ನರಸಿಂಹಮೂರ್ತಿ

●

ಮೂರು ತೆಲುಗು ಕವಿತೆಗಳು

— ಮೂಲ: ಸಿ.ವಿ. ಕೃಷ್ಣಾರಾವ್

ಒಂದು

ಮಣ್ಣೇ ಅಲ್ವಾ
ಎಷ್ಟೊಂದಿದೆ ಅಂತ
ಸ್ವಲ್ಪ ಹುಷಾರಿಂದ ಬಳಸರಯ್ಯಾ
ಅಂದರೂ ಕೇಳದೆ
ಧಿಮಾಕಿಂದ ಇಷ್ಟಿಷ್ಟು ಕಿತ್ತುಕೊಂಡ್ರಿ
ಈಗ ನೋಡಿ
ಮಣ್ಣಿಗೂ ಬರ ಬಂದಾಯ್ತಲ್ಲ.

—o—

ಸ. ರಘುನಾಥ, ಗೌನಿಪಲ್ಲಿ 563 135, ಶ್ರೀನಿವಾಸಪುರ ತಾ॥, ಕೋಲಾರ ಜಿಲ್ಲೆ

ಎರಡು

ಅತ್ಲಾಗಿಂದ ಸೂರ್ಯ
ಬೆಟ್ಟ ಹತ್ತಿ ಬರ್‍ತಾನಂತ
ಇತ್ಲಾಗಿಂದ ಜನ
ಎದ್ದೂ ಬಿದ್ದು ಬೆಟ್ಟ
ಹತ್ತುತ್ತಾ ಇದ್ದಾರಲ್ಲ!

—೦—

ಮೂರು

ಕಿಟಕೀಲೊಂದು ಗುಂಬ್ಬಿ
ಅಕ್ಷರವೇನೊ ಅನ್ನೊ ಹಾಗೆ
ನಿಶಬ್ದ ಮಾಡ್ತ ಕೂತಿದೆ.
ಮುಂದೆ ಕನ್ನಡಿ ಇರೋವರೆಗೂ
ಕಿಟಕೀಲಿರೊ ಅಕ್ಷರದಲ್ಲಿ
ಪಿಳಿಪಿಳಿ ಆಡೊ ಕಣ್ಣುಗಳು
ಎಷ್ಟೊಂದು ಕತೆ ಹೇಳ್ತು,
ಎಷ್ಟೊಂದು ತತ್ವ ನೇಯ್ತು?
ಬೆಳಗಾಯ್ತೇನೊ ಅನ್ನೊ
ಅವಸರದಲ್ಲಿ ಡ್ಯೂಯೆಟ್ಟಿಂದ
ಜಾಸ್‌ವರೆಗೆ ಸಾಗಿ ಈಗ
ಪ್ರತಿಯೊಬ್ಬ ಕವಿಯು ಪೇನಾ
ಮುಳ್ಳಿನ ತುಂಡೀಲಿ ಕೂತು
ವಿನ್ಯಾಸಗಳ ಬಿಡಿಸ್ತಾ ಇದೆ.

—೦—

— ಅನುವಾದ: ಸ. ರಘುನಾಥ

ದಾರಿಗಳು

ಅಡ್ಡಾದಿಡ್ಡಿಯು ಈ ದಾರಿಗಳು
ಒಳದಾರಿ ಹೆದ್ದಾರಿ ಬಳಸುದಾರಿ
ಗಿಡ್ಡದಾರಿ ಉದ್ದದಾರಿ ಅಗಲದಾರಿ
ಬೇಕಾಬಿಟ್ಟಿಯು ಕಾಲುದಾರಿಗಳು

ಒಳ್ಳೇದಾರಿ ಸಿಕ್ಕಲ್ಲಿ ಹಿಮಗಿರಿ
ತಪ್ಪಿದಲ್ಲಿ ಚರಂಡಿಯು ಪ್ರಪಾತ
ಕೆಲ ದಾರಿಗಳಂತೂ ಒಂದನ್ನೊಂದು
ಸೇರುವುದೇಯಿಲ್ಲ
ಅವುಗಳದ್ದೇ ಅಲ್ಲಿ ದರ್ಬಾರು
ಎಲ್ಲಿಂದಲೋ ಒಂದು ಠೀವಿ ಮಾಡುವವು
ಕೆಲವಂತೂ ಕೂಡು ದಾರಿಗೆಂದೇ ಮಾಡಿದ್ದವು

ಮತ್ತೆ ಕೆಲವು ಕೇಳುವರೇ ಇಲ್ಲದ
ಗತಿ ಹೀನಗಳು
ನೆಲದ ತುಂಬೆಲ್ಲಾ ರಕ್ತವಾಹಿನಿಗಳು
ಭೂತ ಸಂಚರಿಸುವ ಕತ್ತಲ ದಾರಿಗಳು

ಎಂದಿನಿಂದಲೋ ಇದ್ದ ಬಿದ್ದ ಎದ್ದ
ಈ ದಾರಿಗಳಿಗೆ
ಕಾಯಕಲ್ಪ ಬೇಕಾಗಿದೆ.

ದಾರಿ ದೀಪ
ಮೈಲುಗಲ್ಲು ತಿರುವು
ಏರಿಳಿವುಗಳ ಸಂಕೇತ
ಅಗತ್ಯದ ರಿಪೇರಿ ಬೇಕಿದೆ
ಮುಂಗಿಯಂದ ಈ ದಾರಿಗಳಿಗೆ

— ಹಣಮಂತ

ಹಣಮಂತ, ತಾಸಗಾಂವಕರ 58/, ಕಿಲ್ಲಾ, ಶಿವಾಜಿ ರಸ್ತೆ,
ಬಾಗಲಕೋಟ-587 101, (ವಿಜಾಪೂರ ಜಿಲ್ಲೆ)

ಕಲಾಶಿಕ್ಷಣ ಒಂದು ವಿವೇಚನೆ

— ಶಂಕರ ಪಾಟೀಲ

ಕಲಾಶಿಕ್ಷಣ ಹಾಗೂ ಅದರ ಉದ್ದೇಶಗಳು ಆಯಾ ದೇಶದ ಸಾಮಾಜಿಕ ಬೇಕು-ಬೇಡಗಳ ಹಾಗೂ ಅವಶ್ಯಕತೆಗಳ ಮೇಲೆ ನಿರ್ಧಾರವಾಗುತ್ತವೆ. ಜೊತೆಗೆ ಕಲೆಯು ಬಗೆಗಿನ ಆ ದೇಶದ ಜನರ ಪರಿಕಲ್ಪನೆ, ವ್ಯಾಖ್ಯೆ, ಸಿಗಬಹುದಾದ ಅರ್ಥ ಹಾಗೂ ವಿವರಣೆಗಳನ್ನು ಅವಲಂಬಿಸಿರುತ್ತದೆ. ಈ ವಿವರಣೆಗಳು ಕಾಲಕಾಲಕ್ಕೆ ಬದಲಾಗು ವುದನ್ನು ನಾವು ನೋಡುತ್ತೇವೆ.

ನಮಗೆ ಪರಿಚಿತ ವಸ್ತುಗಳನ್ನು ಅವುಗಳ ಬಾಹ್ಯ ಆಕಾರಗಳಿಂದ ನಾವು ಗುರುತಿಸಿ ದಾಗ ನಮಗೆ ಒಂದು ಬಗೆಯ ಆನಂದವಾಗುತ್ತದೆ. ಈ ರೀತಿಯ ಪರಿಚಿತ ವಸ್ತುಗಳ ಬಾಹ್ಯ ಆಕಾರಗಳ ಅನುಕರಣೆಯ ಮನೋಭಾವದಿಂದ ಹುಟ್ಟುವ ಕಲೆಯನ್ನು ಫಿಜಿಯೋ ಪ್ಲಾಸ್ಟಿಕ್ ಎಂತಲೂ, ಪ್ರತಿ ರೂಪಗಳ ಕಡೆಗೆ ಕನಿಷ್ಟ ಪಕ್ಷವಹಿಸಿ ಆಕೃತಿ ಗಳನ್ನು ಗೌಣವಾಗಿಸಿ ವಿಷಯ, ವಿಚಾರವಂತಿಕೆ ಹಾಗೂ ಅರ್ಥವಂತಿಕೆ ಕಡೆಗೆ ಹೆಚ್ಚು ಪ್ರಯತ್ನ ಪಡುವಂಥ ಕಲೆಗೆ ಐಡಿಯೋ ಪ್ಲಾಸ್ಟಿಕ್ ಎಂತಲೂ ಸ್ವಿಸ್ ಮನಶಾಸ್ತ್ರಜ್ಞ ವೇರ್‌ವೊರ್ನ ಹೇಳುತ್ತಾನೆ. ಐಡಿಯೋ ಪ್ಲಾಸ್ಟಿಕ್ ಕಲೆ ಅದರಲ್ಲಿ ಮೂಡಿಬಂದ ನಕ್ಷೆಯ ಮಾದರಿಗಳು ಎಷ್ಟರಮಟ್ಟಿಗೆ ನಮ್ಮ ಮನೋಭಾವನೆಗಳನ್ನು ಕೆರಳಿಸಬಲ್ಲವು. ವಿಷಯ ಪ್ರಚೋದನೆ ಮಾಡಬಲ್ಲವು ಎನ್ನುವುದರಲ್ಲಿ ಅರ್ಥಪೂರ್ಣತೆಯನ್ನು ಕಂಡು ಕೊಳ್ಳುತ್ತದೆ.

ವಿಶ್ವದ ಕಲಾ ಇತಿಹಾಸ ಈ ಎರಡು ಮನೋಭಾವನೆಗಳ (ಫಿಜಿಯೋಪ್ಲಾಸ್ಟಿಕ್ ಹಾಗೂ ಐಡಿಯೋ ಪ್ಲಾಸ್ಟಿಕ್) ಬಿಗುವಿನ ಸಂಘರ್ಷದ ಇತಿಹಾಸವೇ ಆಗಿರುವುದು ಕಂಡುಬರುತ್ತದೆ. ಬೈಜಂತೈನ್ ಹಾಗೂ ಗೋಥಿಕ್ ಕಲೆಯನ್ನು ಈ ಅರ್ಥದಲ್ಲಿ ಐಡಿಯೋ ಪ್ಲಾಸ್ಟಿಕ್ ಎಂತಲೂ, ರಿನೇಜಾನ್ಸ ಕಲೆಯನ್ನು ಫಿಜಿಯೋ ಪ್ಲಾಸ್ಟಿಕ್ ಎಂತಲೂ ಗುರುತಿಸಲಾಗುತ್ತದೆ. ಪಾಶ್ಚಾತ್ಯ ವಿಚಾರ ಹಾಗೂ ವಿಜ್ಞಾನಗಳ ಪ್ರಭಾವಕ್ಕೆ ಒಳಗಾಗುವ ಮೊದಲು ಪೌರ್ವಾತ್ಯಕಲೆ ಪ್ರಮುಖವಾಗಿ ಐಡಿಯೋ ಪ್ಲಾಸ್ಟಿಕ್ ಆಗಿತ್ತು ಎಂದೇ ಹೇಳಬಹುದು. ಅಂತೇ ಕೇವಲ ಅನುಕರಣೆ ಭಾರತೀಯ ಕಲೆಯ ಗುಣ ವರ್ಮವಾಗಿರಲಿಲ್ಲ.

ಯುರೋಪ್‌ನಲ್ಲಿ ನವ್ಯ ಮಾನವೀಯ ನವೋದಯ ಕಾಲದ ಉಗಮ ವಿಜ್ಞಾನ ಹಾಗೂ ವಿವೇಚನೆಯಲ್ಲಿ ಮೂಡಿದ ವಿಶ್ವಾಸದ ಕಾರಣಗಳಿಂದಾಗಿ ಅಲ್ಲಿಯ ಕಲಾಭ್ಯಾಸ ದಲ್ಲಿ ಕೇವಲ ಚಿತ್ರಕಲೆಯೊಂದನ್ನೇ ಅಳವಡಿಸದೆ ಅದರ ಜೊತೆಗೆ ಪ್ಲೇಟೋನ ತತ್ವಜ್ಞಾನ ವನ್ನು, ಅರಿಸ್ಟಾಟಲನ ತರ್ಕಶಾಸ್ತ್ರವನ್ನು ವಿಜ್ಞಾನದ ಪ್ರಜ್ಞೆಯನ್ನು ನೀಡಲಾಯಿತು. ಈ ರೀತಿಯ ವಿವೇಚನಾತ್ಮಕ ಕಲಾದೃಷ್ಟಿ ಕಲಾಶಿಕ್ಷಣಕ್ಕೆ ಹೊಸ ಚಿಂತನೆಯನ್ನು ಒದಗಿಸಿ

ಶಂಕರ ಪಾಟೀಲ, ದಾವಣಗೆರೆ

ಯುರೋಪಿನ ತುಂಬೆಲ್ಲಾ ಹೊಸ ಕಲಾ ಅಕಾಡೆಮಿಗಳು ಪ್ರಾರಂಭವಾದವು. ಈ ರೀತಿಯಲ್ಲಿ ಯುರೋಪ್‌ನಲ್ಲಿ ಅಕಾಡೆಮಿಕ್ ಕಲೆ ಎನ್ನುವ ಶೈಲಿಯಲ್ಲಿ ಕಲಾಶಿಕ್ಷಣ ಹೊಸ ಆಯಾಮ ಪಡೆದದ್ದು.

ಅಕಾಡೆಮಿಕ್ ಕಲೆ ಎನ್ನುವುದು ಕೇವಲ ತರ್ಕದ ಲೆಕ್ಕಾಚಾರಕ್ಕೆ ಮಾತ್ರ ಸೀಮಿತ ವಾಗಿ ಕಲಾವಿದನ ವ್ಯಕ್ತಿತ್ವ ವಿಕಾಸಕ್ಕೆ ಮಾರಕವಾಗಿ ಅವನ ಅಂತರ ಶಕ್ತಿಯನ್ನು ಹೊರಗೆಡವುವಲ್ಲಿ ಪೂರಕವಾಗದೆ ಕೇವಲ ಜೀವನ ಮತ್ತು ಪ್ರಕೃತಿಯ ನಕಲು ಮಾಡು ವಲ್ಲಿ ಹಾಗೂ ಅಲ್ಲಿನ ವಸ್ತುಗಳನ್ನು ಪ್ರತಿನಿಧಿಸುವ ಮಟ್ಟಕ್ಕೆ ಮಾತ್ರ ಕಲೆಯನ್ನು ಸೀಮಿತಗೊಳಿಸಿದವು ಎನ್ನಬಹುದು. ಈ ವಿಚಾರಧಾರೆಯ ಬೆಳವಣಿಗೆಯಿಂದಾಗಿ ಅಕಾಡೆಮಿಕ್ ಕಲೆಯ ಬಗ್ಗೆ ಪ್ರತಿಕಾರಕ ಆಲೋಚನೆಗಳು ಬೆಳೆದು ಬಂದವು. ಅದೇ ಕಾರಣಕ್ಕಾಗಿ ಇತ್ತೀಚೆಗೆ ಕಲೆ ನವೋದಯ ಕಾಲದ ಹಿಂದಿನ ಜೀವನ ಹಾಗೂ ಕಲೆಯ ಆದರ್ಶಗಳತ್ತ ಪುನರುಜ್ಜೀವನಗೊಂಡಿತು ಎನ್ನಬಹುದು. ಯಾಕೆಂದರೆ ಇತ್ತೀಚೆಗೆ ಉದಾತ್ತವಾದ ಹಾಗೂ ಭಾವನಾತ್ಮಕವಾದ ಐಡಿಯೋ ಪ್ಲಾಸ್ಟಿಕ್ ಕಲೆಯತ್ತಲೇ ಜನರ ಒಲುವು ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎನ್ನಬಹುದಾಗಿದೆ.

ಫ್ರಾಯಿಡನ ಮನೋವೈಜ್ಞಾನಿಕ ಸಿದ್ಧಾಂತಗಳು ಹಾಗೂ ವಂಶವಾಹಿನಿ ಸಿದ್ಧಾಂತ ಗಳ ಆಧಾರದ ಮೇಲೆ ಮನಸ್ಸನ್ನು ಅರ್ಥೈಸುವ ಕ್ರಮ ನಮಗೆ ಹೊಸ ದೃಷ್ಟಿಯನ್ನು ನೀಡಿತು ಎನ್ನಬಹುದು. ಈ ಹೊಸ ದೃಷ್ಟಿ ರಚನಾತ್ಮಕ ಹಾಗೂ ಸೃಜನಾತ್ಮಕವಾಗಿ ಕಲೆಯನ್ನು ಅನ್ವಯಿಸಲು ಕಲಿಸುವುದು. ಅಲ್ಲದೆ ಹಳೆಯದಾದ ಅಕಾಡೆಮಿಕ್ ಶೈಲಿ ಯಂತೆ ಈ ಹೊಸ ಶೈಲಿ ನಮ್ಮನ್ನು ಕೇವಲ ವಿಶ್ಲೇಷಕ ಪೃಥಕ್ಕರಣದತ್ತ ಮಾತ್ರ ನಮ್ಮನ್ನು ಒಯ್ಯದೆ ಅದರಿಂದ ಆಚೆ ನೋಡಲು ಹಚ್ಚುವುದು.

ಈ ಹಾದಿಯಲ್ಲಿ ನಮ್ಮ ಕಲೆ ಹಾಗೂ ನಮ್ಮ ತರ್ಕಗಳತ್ತ ಹಾಗೂ ಅವುಗಳ ಹೋಲಿಕೆಗಳತ್ತ ಸಲ್ಪ ಯೋಚಿಸಿದರೆ ಈ ನಮ್ಮ ತರ್ಕ ಸಾಂಕೇತಿಕ ತರ್ಕ ಎಂಬುದು ಕಂಡು ಬರುತ್ತದೆ. ಇದು ಅರಿಸ್ಟಾಟಲನ ಸಂವಾದ ತರ್ಕದಿಂದ ಭಿನ್ನವಾಗಿರುವುದಾಗಿ ತೋರುತ್ತದೆ. ಈ ಬೆಳವಣಿಗೆಯೊಂದಿಗೆ ಒಂದು ಪ್ರಮುಖವಾದ ಹಾಗೂ ಖಚಿತವಾದ ಅರ್ಥಪೂರ್ಣವಾದ ರೂಪ, ಸೌಂದರ್ಯ ಪೂರ್ಣವಾದ ರೂಪ ನಮ್ಮನ್ನು ಸಾಂಕೇತಿಕ ರೂಪದತ್ತ ಹುಟ್ಟಿದೆ ಎನ್ನಬದುದು.

ಒಟ್ಟಿನಲ್ಲಿ ಸಮಕಾಲೀನ ಸಮಸ್ಯೆ ಹಾಗೂ ಪ್ರಜ್ಞೆಯ ಮಧ್ಯ ಕಲೆಯನ್ನು ಕಲಾ ಶಿಕ್ಷಣದ ಸಂಬಂಧದಲ್ಲಿ ಅರ್ಥೈಸುವ ಪ್ರಯತ್ನ ಮಾಡಬೇಕಾಗಿದೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆಗಳೆಂದರೆ– ೧. ಈ ಎರಡೂ ವಿಚಾರಧಾರೆಗಳು ಪರಸ್ಪರ ಸಂಪೂರ್ಣ ವಾಗಿ ಪರಿಪೂರ್ಣವಾದವುಗಳೇ ? ೨. ಇವತ್ತಿನ ನಮ್ಮ ಜಾಗತಿಕ ಹಾಗೂ ಭಾರತೀಯ ಕಲಾಪರಿಸರ ಈ ಎರಡರಲ್ಲಿ ಯಾವುದದಾರೂ ಒಂದನ್ನೇ ಆಧರಿಸಬಹುದಾಗಿದೆಯೆ ?

೩. ಭಾರತವು ತನ್ನ ವೈಭವಪೂರ್ಣ ಪರಂಪರೆಯಿಂದ ಈ ಎರಡು ತದ್ವಿರುದ್ಧ ವಿಚಾರಧಾರೆಗಳ ಅಂದರೆ ಫಿಜಿಯೋ ಪ್ಲಾಸ್ಟಿಕ್ ಮತ್ತು ಐಡಿಯೋ ಪ್ಲಾಸ್ಟಿಕ್ ಚಿಂತನೆಗಳ ಏಕೀಕರಣ ಮಾಡಲು ಸಾಧ್ಯವೇ ? ಈ ಎಲ್ಲ ಆಲೋಚನೆಗಳ ಪರಿಶೀಲನೆಯ ಜೊತೆಗೆ ಕಾರ್ಯನಿರತ ಕಲಾವಿದರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಇವತ್ತಿನ ನಮ್ಮ ಕಲಾಶಿಕ್ಷಣದ ಉದ್ದೇಶಗಳನ್ನು ಗುರಿಗಳನ್ನು ಸ್ಥಾಪಿಸಬೇಕಾಗಿದೆ.

●

ನಲವತ್ತರ ನಂತರದ ಕನಸು

ನಲವತ್ತರ ನಂತರ ಕನಸಿಲ್ಲ ಎಂದವರಾರು ?
ರಂಗುರಂಗನು ಚೆಲ್ಲಿ ಕಾಡುತ್ತಿದೆ ಚಂದ್ರನಖಿಯಂತೆ !
ಕಣ್ಣ ಪಟಲದ ತುಂಬಾ ಅದೇ
ಆಕಾಶ ಭೂಮಿಗಳ ಆವರಿಸಿನಿಂದಂತೆ ವಿಶ್ವರೂಪ
ಮುಚ್ಚಲು ಬಿಚ್ಚಲು ತೆರಹಿಲ್ಲದಾಗಲು
ಸೋತು ವಶವಾಗುವುದಷ್ಟೆ ನನ್ನ ಪಾಲು
ದೈತ್ಯ ಶಕ್ತಿಯು ಎದುರು ಸೆಡ್ಡು ಹೊಡೆದು ನಿಲ್ಲುವ
ಸದ್ದಾಂ ಶಕ್ತಿ ನನಗಿಲ್ಲದ ಮೇಲೆ
"ತೇನವಿನ ತೃಣಮಪಿ ನಚಲತಿ"
"ದಾಸೋಹಂ! ದಾಸೋಽಹಂ!"
ಎನ್ನುವುದಷ್ಟೆ ತಾನೇ
ನವಿಲುಗಣ್ಣಿನಲ್ಲಿ ಸೆರೆಸಿಕ್ಕಿರುವ ಮನದ ಸಂತ್ರ
ತೆರಣಿಯುಹು ಗೂಡು ಕಟ್ಟಿದಂತಾಯಿತ್ತು
ನವಲತ್ತರ ನಂತರ ಕನಸಿಲ್ಲ-ವೆಂದಲ್ಲ
ಕನಸಿಂದ ಬಿಡುಗಡೆಯೆ ಇಲ್ಲ

— ಎಂ. ಎಚ್. ಲಕ್ಷ್ಮೀನರಸಮ್ಮ

●

ಎಂ.ಎಚ್. ಲಕ್ಷ್ಮೀನರಸಮ್ಮ, 6891, ಶಂಕರ ಕೃಪ, 10, ಎ. ಮುಖ್ಯರಸ್ತೆ, 4ನೇ ಬ್ಲಾಕು
ಜಯನಗರ, ಬೆಂಗಳೂರು-560 011

ಬರೆಯು ಬೇಕಿತೊ ಹೀಗೆ

-೧-

ಬರೆಯು ಬೇಕಿತೊ ಹೀಗೆ
ಜಗಕ್ಕೆ ಕನ್ನಡಿ ಹಾಗೆ

ಎಂಥೆಂಥ ಜನ ಇಲ್ಲಿ

ತನ್ನ ಕುಂಡೆಯು ಬೆಳಕು
ಮಿನುಗಿದರೆ ಮುಂಬೆಳಗು
ಎಂದು ತಿಳಿದವ ಒಬ್ಬ

— ಅವನೇ ಸೂರ್ಯ

ಜಗದ ಎಲ್ಲಾ ಭಾರ
ಹೊತ್ತು ಹೆಗಲಿನ ಮೇಲೆ
ಕೂತು ಬಿಟ್ಟಿದ್ದಾನೆ

— ಅಟ್ಲಾಸು

ತನ್ನ ಜೀವದ ಭಾರ ಜಗಭಾರ
ಹೊರಿಸಿ ಹೆಂಡತಿ ಮೇಲೆ
ಮಲಗಿಯೇ ಇರುವ ಇವ

— ಸಾಕ್ಷಾತ್ ವಿಷ್ಣು

ಇವನ ಹೆಂಡತಿ ಬಸುರಿ
ತಪ್ಪಿದರೆ ಬಾಣಂತಿ
ಸದಾಸೃಷ್ಟಿಲಿ ನಿರತ

— ಪರಬ್ರಹ್ಮ

ತನ್ನದೆಲ್ಲಾ ಕಳೆದು
ಮಾವನದ್ದೂ ಕಳೆದು
ಊರೂರು ತಿರುಗುವವ

— ಲಯಕರ್ತ

ಡಾ॥ ರಾಮಚಂದ್ರ ದೇವ, 166/ಎ, 22ನೇ ಮೇನ್ ರಸ್ತೆ, ಶ್ರೀನಗರ, ಬೆಂಗಳೂರು-560 050

ಎಂಥೇಥ ಜನ ಇಲ್ಲಿ

ಒಬ್ಬಾತ ಗೋಡೆ ತಳ್ಳುತ್ತಿರುವ;
ಇನ್ನೊಬ್ಬ ಚಂದ್ರನ ಮೇಲೆ ಉಚ್ಚೆ ಹೊಯ್ಯುತ್ತಾನೆ;
ರೆಕ್ಕೆ ಕಟ್ಟಿಸಿಕೊಂಡು ಹಾರ ಹೊರಟವ ಒಬ್ಬ;
ಕಾಡು ಕೋತಿಗೆ ಇಲ್ಲಿ ಕೋಳ ಹಾಕಿದ್ದಾರೆ;
ಇವಗೆ ಕೊಲೇ ಕಾಲು; ಬಾಯಿ ತೆಗೆದರೆ ಹೇಲು;
ಅವಗೆ ತಲೆ ಒಳಗೆ ತಂಟೆಯ ಗಂಟೆ; ಇವಗೊ
ಹೆಂಡತಿಯ ಕೊರಳಿನ ಕಂಟೆ.

ಇವ ಪ್ರೇತ, ಅದು ಭೂತ
ಆಚೆ ಗುಂಡಿಯ ನಾತ.

ಇವ ಚೂಪು ತಂದಿ ಮೇಲೆ ಗೋಪುರವ ಕಟ್ಟಿದ್ದಾನೆ;
ಬೊಬ್ಬೆ ಗೋಪುರದಿಂದ ವಿವಿಧ ಭಾಷೆಯ ಬೊಬ್ಬೆ.
ಯಾಕೆ ಇವ ಹೀಗೆ ಮರ ಹತ್ತಿ ನಗುತ್ತಿರುವ?
ಅದು ಯಾರು ಕುರುಡರು ಹಾಗೆ
ಒಬ್ಬರ ಹಿಂದೆ ಒಬ್ಬ ಪರಡುತ್ತ ಹೊರಟವರು?
ಇವ ಯಾಕೆ ಹೀಗಿಲ್ಲಿ ಕಾಲಗಲಿ ಮಲಗಿರುವ?
ಅವನೇಕೆ ಗಲ್ಲತ್ತ?

ಗೊತ್ತಿಲ್ಲ, ಕನ್ನಡಿ ಕೆಲಸ
ಇದ್ದದ್ದು ಇದ್ದಂತೆ ಪ್ರತಿಫಲಿಸಿ ತೋರುವುದು.

೩

ಚೆಲುವೆಯರು ಬಂದಿಲ್ಲಿ ಮುಖ ನೋಡಿಕೊಳಲಿ;
ಅವರಿಗೆ ತಾವು ಪರಮ ಚೆಲುವೆಯರಾಗಿ ಕಾಣಿಸಲಿ.
ಕುರೂಪಿಗಳು ಬಂದಿಲ್ಲಿ ಮುಖ ನೋಡಿಕೊಳಲಿ;
ಅವರಿಗೂ ತಾವು ಚೆಲುವೆಯರಾಗಿ ಕಾಣಿಸಲಿ.

ಕನ್ನಡಿ ಮಾತ್ರ ತನ್ನಷ್ಟಕ್ಕೆ
ಬೆಳಕಲ್ಲಿ ಹೊಳೆಯುತ್ತಿರಲಿ.

O

— ಡಾ|| ರಾಮಚಂದ್ರದೇವ

ಮನೆಯ ನಕ್ಷೆ

ನನ್ನದೆನ್ನುವ ಗೂಡು
ಅಪ್ಪಿಕೊಂಡ ಅಮ್ಮನ
ಬೆಚ್ಚಗಿನ ಮಡಿಲು.

ಇಷ್ಟಗಲ ಜಾಗದಲಿ
ಕಟ್ಟುವ ಮನೆ
ಗೂಡಾಗುತ್ತಲ್ಲದೆ ಮತ್ತೇನು ?

ನನ್ನದೆನ್ನುವ ಗೂಡ ಕಟ್ಟಲು
ಅಡಿಗಲ್ಲನ್ನಿಟ್ಟ ದಿನ
ಅದೆಂಥಾ ಸಂಭ್ರಮ !

ಇಷ್ಟರಲ್ಲಿ ಒಂದು ಪುಟ್ಟ ಹಜಾರ;
ಪ್ರೀತಿಯ ಮಂದಿಯೊಂದಿಗೆ
ಹರಟೆ ಹೊಡೆಯಲು
ನಕ್ಕು ನಲಿಯಲು
ಕೂತು ಉಣ್ಣಲು.
ಪಕ್ಕದಲ್ಲೇ
ದೊಡ್ಡ ಕಿಟಕಿಯ ಅಡುಗೆ ಕೋಣೆ,
ಅಷ್ಟೇ ಅಗತ್ಯದ
ಒಂದು ಸ್ನಾನದ ಮನೆ.

ನನಗೆ
ನನ್ನ ಈ ಪುಸ್ತಕಗಳಿಗೆ
ಒಂದು ಚಿಕ್ಕ ಚಂದದ ಕೊಠಡಿ....

ಹಣದ ಅಂದಾಜ ಬಿಟ್ಟು
ಮನೆಯ ನಕ್ಷೆ ರಚಿಸುತ್ತಾ, ಕುಂತೆ:
ಹಜಾರ 13 × 14 ಅಡಿ
ಅಡುಗೆ ಕೋಣೆ 10 × 8 ಅಡಿ
ನನ್ನ ಕೊಠಡಿ....

ಎಚ್. ಪ್ರೇಮಲೀಲಾ, ಕಲ್ಮಠ-572 221, ಮಾಯಸಂದ್ರ ಮಾರ್ಗ, ತುಮಕೂರು ಜಿಲ್ಲೆ

ಇದ್ದಕ್ಕಿದ್ದಂತೆ ಜೀವ ಝಲ್ಲೆಂದಿತು
ಒಳಗೆಲ್ಲೋ ಪಿಸುಗುಡುತ್ತಿತ್ತು
ಆರಡಿ + ಮೂರಡಿ....
ಆರಡಿ + ಮೂರಡಿ....

— ಪ್ರೇಮಲೀಲಾ

○

ನನ್ನ ಗೆಳತಿಯ ತಾಯಿ ಇನ್ನಿಲ್ಲ!

ಕಾಲೇಜಿನಂಗಳದ ಕನಸುಗಳು ಮಾಸಿ ಹೋಗುತ್ತವೆ
ಹೊತ್ತು ಕೊಂಡೋಡುತ್ತಿದ್ದ ಸೈಕಲ್ ತುಕ್ಕು ಹಿಡಿಯುತ್ತದೆ
ಹುರುಪು ಮೊಲ್ಲೆಯ ಮುಂಡಿ ಬಿರಿದು ಬಾಡುತ್ತದೆ
ಮುಂಗಿಲುದ್ದದ ಹೊರೆಬಿದ್ದು ಮನ ಭಾರವಾಗುತ್ತದೆ.

ತಿಳಿಬಾನಿನಲಿ
ಹಾಲೊಡೆದ ಚಿತ್ರ
ವಿಛಿದ್ರ ಮೋಡಗಳಲಿ
ದುಗುಡಗಳು ಬರೇ ದುಗುಡಗಳು

ತಿಳಿಗೊಳದ ಮಣ್ಣದಡ
ಕುಸಿದು ಬೀಳುವ ಸದ್ದು
ಆಳಕ್ಕಿಳಿದಷ್ಟು
ಅಡಿಯ ಕಲಕುವ ನೋವು

ಮಾಯಾಮೃಗಕೆ ನೆಟ್ಟ ರಾಮಬಾಣದ ಗೆರೆಗಳು
ಹರೆಯದ ಯಾನದ ನಡುವೆ ವಿಷಗಾಳಿಯ ಸುಳಿಗಳು
ಬಿಟ್ಟ ಕಂಗಳ ಮುಂದೆಲ್ಲ ದೈತ್ಯಾಕಾರದ ಸತ್ಯಗಳು
ಚಕ್ರವ್ಯೂಹ ಹೊಕ್ಕಿದ್ದ ಒಂಟಿ ಅಭಿಮನ್ಯುವಿನ ಹೆಜ್ಜೆಗಳು
ನಗುಮೊಗದಲಿ
ಬರಸಿಡಿಲಿನ ಗುರುತು
ಕನಸಿನ ಕಣ್ಣು ತುಂಬ
ಮಳೆ ಹನಿಗಳ ಭಾರ

ವಾಸುದೇವ ನಾಡಿಗ್, 5ನೇ ಕ್ರಾಸ್, ಎಸ್.ಬಿ.ಎಂ. ಹತ್ತಿರ
ರವೀಂದ್ರ ನಗರ, ಶಿವಮೊಗ್ಗ-577 201

ಬೆಳಗು ಮೂಡುವ ಮುನ್ನ
ಮಂಜು ಕವಿದ ದಾರಿ
ಮುಳ್ಳು ಬೇಲಿಯ ಮೇಲೆ
ಹನಿ ಹನಿನಗು

ನನ್ನ ಗೆಳತಿಯ ತಾಯಿ ಇನ್ನಿಲ್ಲದಾದಾಗ ಕಳೆದುದೆಷ್ಟೋ
ಅವಳಿಗಿವಳು ಇವಳಿಗವಳು ಹನಿಸಿದೊಲವೆಲ್ಲ ಅಮೃತವೋ
ಕಾಲನ ಅಕೌಂಟು ಪುಸ್ತಕದಲಿ ಬಾಕಿ ಉಳಿದುದೆಷ್ಟೋ
ಬದುಕಿನುದ್ದಕೂ ಕಲೆಗಳ ಉಳಿಸಿ ಧಾವಿಸುವುದೇ ಪ್ರೀತಿಯೋ.

— ವಾಸುದೇವ ನಾಡಿಗ್

ಶಿವರಾಮ ಕಾರಂತರ "ಮೂಕಜ್ಜಿಯ ಕನಸುಗಳು"

— ಟಿ.ಪಿ. ಅಶೋಕ

1968ರಲ್ಲಿ ಮೊದಲ ಮುದ್ರಣ ಕಂಡ 'ಮೂಕಜ್ಜಿಯ ಕನಸುಗಳು" ಶಿವರಾಮ ಕಾರಂತರ ಕಾದಂಬರಿಗಳಲ್ಲೇ ವಿಶಿಷ್ಟವಾದದ್ದು. ಕಾರಂತರು ಸ್ವತಃ ಇದಕ್ಕಿಂತ ತುಂಬಾ ತುಂಬಾ ಉತ್ತಮವೆನ್ನಿಸುವ (ಉದಾ : 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಅಳಿದ ಮೇಲೆ', 'ಮೈಮನಗಳ ಸುಳಿಯಲ್ಲಿ') ಹಲವು ಕಾದಂಬರಿಗಳನ್ನು ಬರೆದಿರುವರಾದರೂ ಈ ಕಾದಂಬರಿ ಅನೇಕ ರೀತಿಗಳಲ್ಲಿ ಭಿನ್ನ ಎನಿಸುತ್ತದೆ. "ಈ ಕಾದಂಬರಿಗೆ ಕಥಾನಾಯಕನಿಲ್ಲ; ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿ ನಾಯಕಿಯಲ್ಲ" ಎಂದು ಕಾರಂತರು ಮುನ್ನುಡಿಯಲ್ಲಿ ಹೇಳಿರುವುದು ಉಚಿತವಾಗಿದೆ. ಹಾಗೆ ನೋಡಿದರೆ ಕಾದಂಬರಿಯು ಒಂದು ಮುಖ್ಯ ವಸ್ತು ಕಥಾಮೀಮಾಂಸೆಯೇ ಆಗಿದೆ. ತನ್ನೊಡನೆ ಮೂಕಜ್ಜಿ ಹೇಳುವುದೇನೆಂದು, ಅದರ ಸ್ವರೂಪವೇನೆಂದು ಕಾದಂಬರಿಯ ಒಂದು ಮುಖ್ಯ ಪಾತ್ರವೂ, ನಿರೂಪಕನೂ ಆದ ಸುಬ್ರಾಯ ಮತ್ತೆ ಮತ್ತೆ ಆಲೋಚಿಸುತ್ತಾನೆ. ಅಷ್ಟೇ ಅಲ್ಲ, ಮೂಲಭೂತವಾಗಿ ಕತೆ ಎಂದರೇನು ? ಅದು ವಸ್ತುಸ್ಥಿತಿಯ ಯಥಾವತ್ ನಿರೂಪಣೆಯೊ ಅಥವಾ ಬರೇ ಕಲ್ಪನಾವಿಲಾಸವೋ ? ಕತೆ ಎಂದರೆ ನಡೆದದ್ದೋ, ನಡೆಯಬಹುದಾದದ್ದೋ ಅಥವಾ ಎಂದೂ ನಿಜ ಜೀವನದಲ್ಲಿ ನಡೆಯಲಾರದ್ದೋ ? ಅವಾಸ್ತವಿಕ ಎನ್ನಿಸುವಂಥ ಕತೆಗಳೂ ಕೆಲವೊಮ್ಮೆ ನಮಗೆ ಪ್ರಿಯವಾಗಲು ಕಾರಣ

ಟಿ.ಪಿ. ಅಶೋಕ, ರೀಡರ್, ಇಂಗ್ಲೀಷ್ ವಿಭಾಗ, ಎಲ್.ಬಿ. ಕಾಲೇಜ್, ಸಾಗರ,
ಶಿವಮೊಗ್ಗ ಜಿಲ್ಲೆ

ವೇನು? ಊಹಿಸಿ ಕಟ್ಟಿದ ಕತೆಗಿಂತ ಸುತ್ತಲ ಬದುಕಿನ ವಿದ್ಯಮಾನಗಳೇ ಹೆಚ್ಚು ಸ್ವಾರಸ್ಯಕರವಾಗಿರುತ್ತದೆಯೆ? ಕಥಾ ಸಾಹಿತ್ಯಕ್ಕಿಂತ ಚರಿತ್ರೆ ಮೇಲುವಟ್ಟದ್ದೆ? ಮುಂತಾದ ಅರ್ಥ, ಬರುವಂಥ ಪ್ರಶ್ನೆಗಳು ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಲ್ಪಡುತ್ತವೆ. ಸ್ವತಃ ಸುಬ್ರಾಯನೂ ಚಿಕ್ಕಂದಿನಲ್ಲಿ ಕತೆಗಳನ್ನು ಕೇಳಿ ಖುಷಿ ಪಟ್ಟವನೇ. ಆದರೆ ಇಂದು ಬೆಳೆದು ದೊಡ್ಡವನಾದ ಮೇಲೆ ಅವುಗಳ ಭ್ರಾಮಕ ನೆಲೆಗಳ ಪರಿಚಯವಾದ ಮೇಲೆ ಅವುಗಳ ಬಗ್ಗೆ ಅಂಥ ವ್ಯಾಮೋಹವಿಲ್ಲ. ನೀತಿಕತೆಗಳು, ದಂತಕತೆಗಳು, ಭ್ರಾಮಕಗಳು ಮಕ್ಕಳಿಗೆ ಪ್ರಿಯವಾಗುವಂತೆ ಈಗ ಅವನಿಗೆ ಪ್ರಿಯವಾಗುವುದಿಲ್ಲ. ಆದರೆ ತನ್ನ ಮಕ್ಕಳಿಗೆ ತಾನೇ ಇಂಥ ಕತೆಗಳನ್ನು ಹೇಳಿ ಸಂತೋಷ ಕೊಡಬಲ್ಲ. ಹಾಗೆಂದು ಆಧುನಿಕ ಕಥಾ ಸಾಹಿತ್ಯದ ಆಕರ್ಷಣೆಯೂ ಅವನಿಗಿಲ್ಲ. ತನ್ನ ಸ್ನೇಹಿತ ಜನಾರ್ಧನ ಓದುವ ಇಂಗ್ಲಿಷ್ ಕತೆ ಕಾದಂಬರಿಗಳು ಅವನಿಗೆ ಬೇಸರ ತರಿಸುತ್ತವೆ. ವರ್ತಮಾನ ಪತ್ರಿಕೆಗಳು ಸುಬ್ರಾಯನ ಜೀವನ ಶೈಲಿಗೆ ಅನಿವಾರ್ಯವಾಗಿಲ್ಲ. ಅಷ್ಟೇಕೆ, ಸುಬ್ರಾಯನಿಗೆ ಪ್ರವಾಸದ ಚಪಲವೂ, ಆಸಕ್ತಿಯೂ ಇಲ್ಲ. ಜನಾರ್ಧನ–ಸುಬ್ರಾಯರ ಸಂಭಾಷಣೆಯಲ್ಲಿನ ಒಂದು ತುಣುಕನ್ನು ನೋಡೋಣ.

"... ಈಗೀಗ ನೀನು ಸಹ ಅಚ್ಚ ಹಳ್ಳಿಯವನಾಗಿದ್ದೀಯ; ಓದಿದ್ದೆಲ್ಲ ಮರೆತು ಬಿಟ್ಟು ಗೊಡ್ಡರಲ್ಲಿ ಗೊಡ್ಡನಾಗಿದ್ದೀಯ"

"... ನನಗೂ ಹಾಗೆಯೇ ಅನ್ನಿಸುತ್ತದೆ."

"....ಯಾತಕ್ಕೆ ಹಾಗಿರಬೇಕು, ಹೇಳು. ಓದಿದ್ದೀ, ತಲೆಯಲ್ಲಿ ಮೆದುಳೂ ಉಂಟು. ನನ್ನ ಹಾಗೆ ಕಾದಂಬರಿ, ಕವನ ಇಂಥದು ಯಾವುದೂ ಹಿಡಿಸುವುದಿಲ್ಲವಾದರೆ ಒಂದೆರಡು ಪೇಪರು ತರಿಸಿಯಾದರೂ ಓದಬಾರದೇ? ಮೂಡೂರಿನ ಹೊರಗೆ ಒಂದು ಜಗತ್ತು ಇದೆ–ಎಂದಾದರೂ ತಿಳಿಯಂದೆ ಹೋದರೆ ಹೇಗೆ? "

" ಆ ಜಗತ್ತಿಗೆ ನಾವಿದ್ದೇವೆ – ಎಂದು ತಿಳಿದಿದೆಯೇನು? ಆದಕ್ಕೆ ನಾವು ಬೇಡ. ನಮಗೆ ಯಾತಕ್ಕೆ ಅದು ಬೇಕು? ಅಂಥದ್ದು ತಿಳಿಯುವ ಮನಸ್ಸಾದರೆ ನೀನೇ ಇದ್ದೀಯಲ್ಲ, ಮಹಾಪಂಡಿತ, ಹೇಳಿಬಿಡು–ನಿನ್ನ ಆ ಹೊರ ಜಗತ್ತು ಮೊದಲಿಗಿಂತ ಉದ್ದ ಆಗಿದೆಯೋ, ಅಥವಾ ಉರುಟು ಆಗಿದೆಯೊ ಎಂದು ಹೇಳು."
(ಮೂಕಜ್ಜಿಯ ಕನಸುಗಳು, ಎರಡನೇ ಮುದ್ರಣ, ಪುಟ 50–51).

ಕಾರಂತರು ಇಲ್ಲಿ ನನ್ನನ್ನೂ ಸ್ಥಾಪಿಸ ಹೊರಟಿಲ್ಲ. ಸುಬ್ರಾಯನ ಬದುಕಿನ ಲಯವನ್ನು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಆಧುನಿಕ ಶಿಕ್ಷಣ ಪಡೆದಿರುವ ಸುಬ್ರಾಯ ಆಧುನಿಕತೆಯ ವಿರೋಧಿಯೇನಲ್ಲ. ಅವನು ತನ್ನ ಹೆಂಡತಿ ಸೀತಾಳಂತೆ ಸಂಪ್ರದಾಯ ನಿಷ್ಠನೂ ಅಲ್ಲ, ಜನಾರ್ಧನ, ನಾರಾಯಣ, ಮಂಜುನಾಥ ಮುಂತಾದ

ವರಿಗೂ ಸುಬ್ರಾಯನಿಗೂ ಇರುವ ವೈದೃಶ್ಯಗಳಲ್ಲಿ ಮತ್ತು ಮೂಕಜ್ಜಿಗೂ ಸುಬ್ರಾಯ ನಿಗೂ ಇರುವ ವೈದೃಶ್ಯಗಳಲ್ಲಿ ಸುಬ್ರಾಯನ ಮನಸ್ಸಿನ ಲಯಗಳು ಅರಿವಿಗೆ ಬರಬೇಕು. ಮೂಕಜ್ಜಿಗೆ ಅರಳು ಮರಳು, ತಲೆಸಡಿಲು, ಅಕೆ ಅರೆಹುಚ್ಚಿ, ಹಿಂದು ಮುಂದು ನೋಡದೆ ಮಾತನಾಡುವವಳು ಎಂಬ ಸುತ್ತಲವರ ಪ್ರತಿಮೆಗಳನ್ನು ಸುಬ್ರಾಯ ಒಪ್ಪು ವುದಿಲ್ಲ ಅಷ್ಟೇ ಅಲ್ಲ, ಹಾಗೆನ್ನುವವರನ್ನು ಅವನು ಖಂಡಿಸುತ್ತಾನೆ. ತನ್ನ ನಡೆ ನುಡಿ ಗಳ ಲಯಗಳಿಗೂ ಮೂಕಜ್ಜಿಯ ಲಯಗಳಿಗೂ ಇರುವ ವ್ಯತ್ಯಾಸಗಳೂ ಅವನಿಗೆ ಗೊತ್ತು. ತಾನು ಹೇಗೆ ಇತರರಿಗೆ ಹೇಗೆ ಸಂಪೂರ್ಣವಾಗಿ ಗ್ರಾಹ್ಯನಲ್ಲವೋ ಹಾಗೆ ಮೂಕಜ್ಜಿಯೂ ಸಾಕಷ್ಟು ನಿಗೂಢಳೇ ಎಂಬ ಎಚ್ಚರದಲ್ಲಿ ಅವನು ಅವಳೊಂದಿಗೆ ವ್ಯವ ಹರಿಸುತ್ತಾನೆ. ಆದ್ದರಿಂದಲೇ ಸುಬ್ರಾಯ ಯಾರಲ್ಲೂ ಅನವಶ್ಯಕವಾಗಿ ತಪ್ಪು ಹುಡುಕ ಹೊರಡುವುದಿಲ್ಲ. ನಾವು ಭ್ರಮಿಸಿದ್ದೇ, ತಿಳಿದದ್ದೇ, ಹೇಳಿದ್ದೇ ಸತ್ಯ ಎಂಬ ಶಠತ್ವ ಮತ್ತು ಹಟಮಾರಿತನಗಳಷ್ಟನ್ನೇ ಅವನು ಖಂಡಿಸುವುದು.

"ಮೂಕಜ್ಜಿಯ ಕನಸುಗಳು" ಕಾದಂಬರಿಯ ಬಗ್ಗೆ ಸಾಮಾನ್ಯವಾಗಿ ಕೇಳಿಬರುವ ಟೀಕೆಗಳೆಂದರೆ: ಕಾರಂತರ ವಿಚಾರಗಳ ಮುಖವಾಡವಾಗಿ ಮಾತ್ರ ಮೂಕಜ್ಜಿಯ ಪಾತ್ರ ಸೃಷ್ಟಿಯಾಗಿದೆ; ಕಾದಂಬರಿಯ ಕಥಾ ಶರೀರ ತೀರಾ ದುರ್ಬಲವಾಗಿದ್ದು ಮಾನವಶಾಸ್ತ್ರದ ವಿವರಗಳೇ ವಿಜೃಂಭಿಸಿವೆ; ವಿಚಾರವಾದೀ ಕಾರಂತರು ಮೂಕಜ್ಜಿ ಯಂಥ ಪಾತ್ರ ಸೃಷ್ಟಿಸಿರುವುದು ಅವೈಜ್ಞಾನಿಕ; ಕಾರಂತರು ಅತೀಂದ್ರಿಯ ಶಕ್ತಿಗಳನ್ನು ನಂಬುತ್ತಾರೆಯೆ? ಮೂಕಜ್ಜಿಯ ಪಾತ್ರ ಕಾರಂತರ ವಾಸ್ತವವಾದೀ ದೃಷ್ಟಿಕೋನಕ್ಕೆ ಹೊರತಾದದ್ದಲ್ಲವೆ? ಕಾದಂಬರಿಯಲ್ಲಿ ಮೂಕಜ್ಜಿಯನ್ನೇ ಕೇಂದ್ರ ಪಾತ್ರವಾಗಿ, ಕೇಂದ್ರ ಪ್ರಜ್ಞೆಯಾಗಿ ಅಥವಾ ಬರೇ ಕೇಂದ್ರಬಿಂದುವಾಗಿ ನೋಡಿದಾಗ ಇಂಥ ಪ್ರತಿಕ್ರಿಯೆಗಳು ಹುಟ್ಟುತ್ತವೆ ಎಂದು ಅನ್ನಿಸುತ್ತದೆ. ಬಹಳಷ್ಟು ವಿಮರ್ಶಕರು ಮೂಕಜ್ಜಿಯ ಮಾತು ಗಳಿಗೆ, ಕಾದಂಬರಿಯಲ್ಲಿ ಮೂಕಜ್ಜಿಯ ಮೂಲಕ ಪ್ರತಿಪಾದಿತವಾಗುತ್ತವೆ ಎಂದು ಹೇಳಲಾಗುವ ವಿಚಾರಗಳಿಗಷ್ಟೇ ಪ್ರತಿಕ್ರಿಯಿಸಿದ್ದಾರೆ. ಆದರೆ ಕಾದಂಬರಿಯ ಕೇಂದ್ರ ಬಿಂದು ಮೂಕಜ್ಜಿಯಲ್ಲ. ಕಾದಂಬರಿಯ ಕೇಂದ್ರ ನೆಲೆಗಳನ್ನು ಸುಬ್ರಾಯನ ನಿರೂಪಣೆ ಯಲ್ಲೇ ಅರಸಬೇಕು. ಏಕೆಂದರೆ ಕಾದಂಬರಿಯಲ್ಲಿ ಸೂಚಿತವಾಗುವ ಹಲವು ಜೀವನ ದೃಷ್ಟಿಗಳು ಮತ್ತು ಶೈಲಿಗಳು ಸಂಧಿಸುವ ನೆಲೆಯೆಂದರೆ ನಿರೂಪಕ ಸುಬ್ರಾಯನ ಪ್ರಜ್ಞೆಯೇ. ಮೂಕಜ್ಜಿ ಪ್ರತಿಪಾದಿಸುವುದು ಒಂದು ತೆರನ ಕಾಣ್ಕೆ ಮಾತ್ರ. ಈ ಕನಸುಗಳು ಸುಬ್ರಾಯನಿಗೆ ಯಾಕೆ ಮುಖ್ಯವೆಂದರೆ ಅವು ಅವನಿಗೆ ತನ್ನ ವರ್ತಮಾನದ ಅನುಭವ, ಅವಲೋಕನಗಳಿಗೆ ಸ್ಥಾಯಿಯಾದ ಹಿನ್ನೆಲೆಯೊಂದನ್ನು ಒದಗಿಸುತ್ತವೆ. ಮೂಕಜ್ಜಿಯ ಮುಖಾಂತರ ಸೂಚಿತವಾಗುವ ಕೆಲವು "ಚಿರ ಸತ್ಯಗಳು" ನಿರೂಪಕ ತನ್ನ ದೈನಂದಿನ ಜೀವನ ಸಂದರ್ಭಗಳಲ್ಲಿ ಗಮನಿಸುವ ಸಂಗತಿಗಳಿಗೆ ಒಂದು ವಿನ್ಯಾಸವನ್ನು

ಕಟ್ಟಿಸಿಕೊಡುತ್ತವೆ. ಅಂದರೆ ಈ ಕನಸುಗಳು ಕಾದಂಬರಿಯ ಕೆಲವು ವಿವರಗಳೇ ಹೊರತು ಅವೇ ಸರ್ವಸ್ವವಲ್ಲ. ಆದ್ದರಿಂದಲೇ, "ಕಾದಂಬರಿಯ ಎಲ್ಲ ಸಾರ ಇರುವುದು ಮೂಕಜ್ಜಿ ಹಾಗೂ ಆಕೆಯ ಕುತೂಹಲ ಭರಿತ ಮನಸ್ಸಿನ ಮೊಮ್ಮಗ ಸುಬ್ರಾಯನ ನಡುವಣ ದೀರ್ಘ ಸಂಭಾಷಣೆಗಳಲ್ಲಿ" (ಗಮನ, ಡಿ.ಎಸ್. ನಾಗಭೂಷಣ, ಪುಟ 39) ಎಂಬಂಥ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

ಡಿ.ಎ. ಶಂಕರ್‌ರವರು ಮೂಕಜ್ಜಿಯ ಹೇಳಿಕೆಗಳನ್ನೇ ಕಾದಂಬರಿಯ ಮುಖ್ಯ ಭಾಗವೆಂಬಂತೆ ನೋಡಿ ಅವುಗಳು ನಿಜವಾಗಿ "ಕನಸುಗಳಲ್ಲ," "ವಿಚಾರಗಳು" ಎನ್ನುತ್ತಾರೆ. "ಕಲ್ಪನಾವಿಲಾಸವಲ್ಲ, ವೈಚಾರಿಕ ಹೊಳಹುಗಳು" ಎನ್ನುತ್ತಾರೆ. ಮೂಕಜ್ಜಿಯ ಕನಸುಗಳಿಗೆ ಕಾದಂಬರಿಕಾರರು ಒದಗಿಸುವ ಸಾಂಸ್ಕೃತಿಕ ಚರಿತ್ರೆಯ ಆಧಾರಗಳನ್ನು ಅವುಗಳನ್ನು ಅವರು ನಿರ್ವಹಿಸುವ ನೆಲೆಗಟ್ಟನ್ನು ಶಂಕರ್ ಪ್ರಶ್ನಿಸುತ್ತಾರೆ. ಶಂಕರ್ ಅವರ ಆಕ್ಷೇಪಣೆಗೆ ಮತ್ತೊಂದು ಕಾರಣವೆಂದರೆ,

> "ಕಾರ್ಲ್‌ಯುಂಗ್ ಒಂದು ಕಡೇ A great work of art is like a dream for all its apparent obviousness it does not explain itself and is never uneguivocal ಎಂದು ಹೇಳಿದ್ದಾನೆ. ಕಾರಂತರ 'ಕನಸುಗಳಿಗೆ' ಈ ಗುಣ ಇಲ್ಲ. ಅಂದರೆ ಕಾವ್ಯಕ್ಕೆ ಅಗತ್ಯವಾಗಿರುವ ಗುಣ. ಅವರ ಮೂಕಜ್ಜಿಯ ಕನಸುಗಳು ತುಂಬ Rational ಅಥವಾ ಎಚ್ಚೆತ್ತ ವೈಚಾರಿಕ ಮನಸ್ಸಿಗೆ ಸೇರಿದವು; ಒಳ ಮನಸ್ಸಿನವಲ್ಲ, ಕಲ್ಪನಾ ವಿಲಾಸಕ್ಕೆ ಸೇರಿದುವಲ್ಲ. ಹಾಗಾಗಿ ಕಾದಂಬರಿ ಈ ಎರಡೂ ಮಟ್ಟದಲ್ಲೂ ನಿರೀಕ್ಷಿತ ತೃಪ್ತಿ ನೀಡುವುದಿಲ್ಲ." (ವಸ್ತುವಿನ್ಯಾಸ, ಪುಟ 23–24)

ಈ ರೀತಿಯ ಮೂಕಜ್ಜಿ ಕೇಂದ್ರಿತ ನೆಲೆಗಳಿಗೇ ಬಂಧಿಸಿಕೊಳ್ಳದೆ ಇಡೀ ಕಾದಂಬರಿಯನ್ನು ಸುಬ್ರಾಯ ಹೇಳುವ ಕತೆಯಾಗಿ ನೋಡಿದರೆ "ಮೂಕಜ್ಜಿಯ ಕನಸುಗಳು" ಬೇರೆ ರೀತಿಯ ಅನುಭವವನ್ನೇ ಕೊಡುತ್ತದೆ. ಕತೆಗಳ ಬಗ್ಗೆ, ನಿರೂಪಕ ಮತ್ತೆ ಮತ್ತೆ ಪ್ರಸ್ತಾಪಿಸುವುದರಲ್ಲಿ ಒಂದು ನಿರ್ದಿಷ್ಟ ಉದ್ದೇಶವಿದೆ. ಮಕ್ಕಳ ಕತೆಗಳ ಬಗ್ಗೆ, ಆಧುನಿಕ ಇಂಗ್ಲಿಷ್ ಕಥಾ ಸಾಹಿತ್ಯದ ಬಗ್ಗೆ ತನ್ನ ಅನ್ನಿಸಿಕೆಗಳನ್ನು ದಾಖಲು ಮಾಡುವ ಸುಬ್ರಾಯ ತಾನು ಹೇಳುವ ನಾಗಿಯ ಕತೆಗೂ, ಮೂಕಜ್ಜಿಯ ಕತೆಗೂ ಮೇಲೆ ಸೂಚಿಸಿದ ಕತೆಗಳಿಗೂ ವೈದೃಶ್ಯಗಳನ್ನು ಸೂಚಿಸುವುದು ಸ್ಪಷ್ಟವಾಗಿಯೇ ಇದೆ. ಜನಾರ್ಧನ ಹೇಳುವ ಇಂಗ್ಲಿಷ್ ಕಾದಂಬರಿಯೊಂದರ ದುರಂತ ಪ್ರೇಮ ಕತೆಗೂ, ತನ್ನ ಜೀವನಕ್ಕೆ ತೀರಾ ಹತ್ತಿರವಾಗಿರುವ ರಾಮಣ್ಣ–ನಾಗಿಯರ ಕತೆಗೂ ಇರುವ ವ್ಯತ್ಯಾಸಗಳನ್ನು ನಿರೂಪಕ ಮತ್ತೆ ಮತ್ತೆ ಬೇರೆ ಬೇರೆ ರೀತಿಗಳಲ್ಲಿ ನಮ್ಮ ಗಮನಕ್ಕೆ ತರಲು ಪ್ರಯತ್ನಿಸುತ್ತಾನೆ. ಇವೆರಡೂ ವಾಸ್ತವವಾದೀ ಮಾರ್ಗಕ್ಕೇ ಸೇರಿದರೂ ಅವುಗಳ

ನಡುವಣ ತಾತ್ತ್ವಿಕ ವ್ಯತ್ಯಾಸ ಗಮನಾರ್ಹವಾದದ್ದು. ರಾಮಣ್ಣ-ನಾಗಿಯರ ಕತೆಯಲ್ಲಿ ನಿರೂಪಕ ಸೂಚಿಸುವ ವೈಯಕ್ತಿಕ ತರ್ಕವನ್ನು ಗಮನಿಸದೇ ಇರಲು ಸಾಧ್ಯವಿಲ್ಲ. ಇದು ನೇರವಾಗಿ ಜೀವನದಲ್ಲಿ ಕಂಡದ್ದು ಎಂದು ಕೂಡಾ ಸ್ವೀಕರಿಸಲು ಬರುವಂಥದ್ದಲ್ಲ. ಏಕೆಂದರೆ ಮುಕಜ್ಜಿ ನಿರೂಪಿಸುವ ಕನಸುಗಳ ಬಗ್ಗೆ ನಿರೂಪಕನ ಕುತೂಹಲ ಇಷ್ಟೇ ಗಹನವಾದದ್ದು ಮತ್ತು ಆ ನಿರೂಪಣೆ ವಾಸ್ತವದ ಪಾತಳಿಗೆ ಅತೀತವಾದದ್ದು ಎಂದು ಅವನಿಗೆ ಚೆನ್ನಾಗಿ ಗೊತ್ತು. ಆದರೆ. ನಿರೂಪಕ ವಾಸ್ತವೇತರ ಕತೆಗಳ ನಡುವಣ ಗುಣಾತ್ಮಕ ವ್ಯತ್ಯಾಸವನ್ನೂ ಸೂಕ್ಷ್ಮವಾಗಿ ಬಲ್ಲವನಾಗಿದ್ದಾನೆ. ಆದ್ದರಿಂದಲೇ ವಾಸ್ತವೇತರ ಪಾತಳಿಯ ಮಕ್ಕಳ ಕತೆಗಳ ಸಾಧ್ಯತೆಗಳು ಅವನನ್ನು ಆಕರ್ಷಿಸುವುದಿಲ್ಲ. ಅಂದರೆ, ಸುಬ್ರಾಯ ತನ್ನನ್ನು ವಾಸ್ತವವಾದಕ್ಕಾಗಲೀ, ವಾಸ್ತವೇತರ ನೆಲೆಗಳಿಗಾಗಲೀ ಸೀಮಿತಗೊಳಿಸಿಕೊಳ್ಳದೆ ಒಂದು ಇಡಿಯಾದ ದೃಷ್ಟಿಗಾಗಿ ಹಂಬಲಿಸುವುದು ಅರ್ಥಪೂರ್ಣವಾಗುತ್ತದೆ. ಚರಿತ್ರೆಯನ್ನಾಗಲೀ, ವರ್ತಮಾನವನ್ನಾಗಲೀ ಇಂಥದೊಂದು ಹದದಲ್ಲಿಯೇ ಅರ್ಥೈಸಿಕೊಳ್ಳಬಯಸುವ ಸುಬ್ರಾಯನನ್ನು ಜನಾರ್ಧನ ಇಲ್ಲವೇ ನಾರಾಯಣನಿಗೆ ಹೋಲಿಸಿದರೆ ಈ ಅಂಶ ಇನ್ನಷ್ಟು ಸ್ಪುಟವಾಗುತ್ತದೆ. ಸುಬ್ರಾಯ ವರ್ತಮಾನವನ್ನಾಗಲೀ, ಭೂತವನ್ನಾಗಲೀ ನಿರಾಕರಿಸುವುದಿಲ್ಲ. ಆಧುನಿಕ ಜ್ಞಾನವನ್ನಾಗಲಿ, ಪರಂಪರೆಯನ್ನಾಗಲೀ ತಿರಸ್ಕರಿಸುವುದಿಲ್ಲ. ವಾಸ್ತವವನ್ನಾಗಲೀ ಅದಕ್ಕೆ ಅತೀತವಾದದ್ದನ್ನಾಗಲೀ ಸಿನಿಕತನದಿಂದ ನೋಡುವುದಿಲ್ಲ. ಆದರೆ ಎಲ್ಲದರಲ್ಲೂ ಆತ ಗುಣಾತ್ಮಕವಾದ ಆಯ್ಕೆಗಳನ್ನು ಮಾಡಿಕೊಂಡು ತನ್ನ ಆಳತೆಗೆ ಒಗ್ಗಿಸಿಕೊಳ್ಳುವ ವೈಯಕ್ತಿಕ ತಂತ್ರವನ್ನು ತೋರಿಸುತ್ತಾನೆ. ಮೂಡೂರಿನ ವಾಸ್ತವಕ್ಕಾಗಲೀ, ಮುಕಜ್ಜಿಯ ಕನಸುಗಳಿಗಾಗಲೀ ಜನಾರ್ಧನ, ನಾರಾಯಣ, ಸೀತೆ ಮೊದಲಾದವರು ತೋರಿಸುವ ಪ್ರತಿಕ್ರಿಯೆಗಳಿಗೆ ಈ ಆಯಾಮಗಳಿಲ್ಲ. ಏಕೆಂದರೆ ಅವರು ಕೆಲವು ಆಯ್ಕೆಗಳನ್ನು ಸುಲಭವಾಗಿ ಮಾಡಿಕೊಂಡಿದ್ದಾರೆ ಮತ್ತು ಅವುಗಳನ್ನು ಸಮರ್ಥಿಸಿಕೊಳ್ಳುವಲ್ಲಿ ತೋರುವಷ್ಟು ಆಸ್ಥೆಯನ್ನು ಇತರ ಸಾಧ್ಯತೆಗಳನ್ನು ಗಮನಿಸುವುದರಲ್ಲಿ, ಅರ್ಥಮಾಡಿಕೊಳ್ಳುವುದರಲ್ಲಿ ತೋರಿಸುವುದಿಲ್ಲ. ಬಾಯ ಕತೆಗಳು, ಬಾಳಿನಕತೆಗಳು, ಬರಹದ ಕತೆಗಳು – ಇವೆಲ್ಲವುಗಳ ಸಾಧ್ಯಾ ಸಾಧ್ಯತೆಗಳ ಬಗ್ಗೆ ವಿವರವಾಗಿ ಹೇಳಿದ ನಂತರ ನಿರೂಪಕ ತನ್ನ ಕತೆಯನ್ನು "ಹಂಬಲ"ವನ್ನು ಓದುಗರಿಗೆ ಮನದಟ್ಟು ಮಾಡಿಸಲು ಸಾಕಷ್ಟು ಹೆಣಗುತ್ತಾನೆ.

ಆದರೆ ನಿರೂಪಕ ಅಜ್ಜಿಯ ಕನಸುಗಳನ್ನಷ್ಟೇ ನಿರೂಪಿಸುವುದಿಲ್ಲ. ತನ್ನ ದಾಂಪತ್ಯ ಜೀವನದ ಬಗ್ಗೆ, ತನ್ನ ಬಂಧು-ಮಿತ್ರರ ಜೀವನಗಳ ಬಗ್ಗೆ, ನಾಗಿ-ರಾಮಣ್ಣರ ಬಗ್ಗೆ ತಾನು ಕಂಡದ್ದು, ಕೇಳಿದ್ದು, – ಇವೆಲ್ಲದರ ನಿರೂಪಣೆಯನ್ನು ಅಷ್ಟೇ ಆಸಕ್ತಿಯಿಂದ ಮಾಡುತ್ತಾನೆ. ಹೀಗೆ ಕಾದಂಬರಿಯ ಉತ್ತಮ ಪುರುಷ ನಿರೂಪಣಾ ತಂತ್ರವು

ಶೂದ್ರ

ಕೇವಲ ತಂತ್ರಕ್ಕಾಗಿ ಬಳಕೆಯಾಗದೆ ಸೃಜನಶೀಲ ಅಗತ್ಯಗಳನ್ನು ಪೂರೈಸುತ್ತದೆ. ಪ್ರಥಮ ಪುರುಷ ನಿರೂಪಣೆ ಇಂಥದೊಂದು ಕತೆಗೆ ನೀಡಬಹುದಾಗಿದ್ದ ಸಮಸ್ಯೆಗಳನ್ನು ಕಾದಂಬರಿಯ ಪ್ರಸ್ತುತ ತಂತ್ರ ಒಂದು ಮಟ್ಟದಲ್ಲಿ ನಿವಾರಿಸಿಕೊಳ್ಳುತ್ತದೆ. ಕಾದಂಬರಿಯು ಮೂಕಜ್ಜಿಯ ಕನಸುಗಳನ್ನು ಸುಬ್ರಾಯನ ವೈಯುಕ್ತಿಕ ಜೀವನ ಸಂದರ್ಭದಲ್ಲಿ ಮಂಡಿಸುತ್ತದೆ. ಸುಬ್ರಾಯನ ತಳಮಳ, ಸಂಭ್ರಮಗಳನ್ನು ಅವನ ಸಮಕಾಲೀನರ ವರ್ತನೆಗಳ ವೈದೃಶ್ಯದಲ್ಲಿ ಕಟ್ಟಿಕೊಡುತ್ತದೆ. ಮೂಕಜ್ಜಿ ಬೆಳೆಯುವುದು ಸುಬ್ರಾಯನ ಕಣ್ಣುಗಳಲ್ಲಿ ಎಂಬುದನ್ನು ಅವಶ್ಯ ಗಮನಿಸಬೇಕು. ಹಾಗಾಗಿ ಕನಸುಗಳ ಅರ್ಥವಂತಿಕೆ ಸುಬ್ರಾಯನ ಪ್ರಜ್ಞೆಗೆ ಮಾತ್ರ ಸಾಪೇಕ್ಷವಾಗುತ್ತದೆ. ಇಡೀ ಕಾದಂಬರಿಯಲ್ಲಿ ತನ್ನ ವರ್ತನೆಯನ್ನು ಸ್ವಲ್ಪ ಮಟ್ಟಿಗೆ ಮಾರ್ಪಡಿಸಿಕೊಳ್ಳುವುದು ಸೀತೆ ಮಾತ್ರ. ಜನಾರ್ಧನ, ನಾರಾಯಣರಂತೆ ಬದುಕಿನ ಇತರ ಸಾಧ್ಯತೆಗಳ ಪರಿಚಯ ಸೀತೆಗೆ ಇಲ್ಲವೆಂಬುದು ಮತ್ತು ಅವಳು ಒಂದು ಮಟ್ಟದಲ್ಲಿ ಸುಬ್ರಾಯನ ಜೀವನವನ್ನು ಹಂಚಿಕೊಳ್ಳುವವಳು ಎಂಬುದರ ಜೊತೆಜೊತೆಗೇ ಮೂಕಜ್ಜಿಯನ್ನು ಹತ್ತಿರದಿಂದ ಗಮನಿಸುತ್ತಿದ್ದವಳು ಎಂಬುದನ್ನು ಗಮನಿಸಬೇಕು. ಅಲ್ಲದೆ ಮೂಕಜ್ಜಿಯ ಕನಸುಗಳಿಗಿಂತ ಹೆಚ್ಚಾಗಿ ತಾನು ಆವರೆಗೆ ಗಮನಿಸದಿದ್ದ ಮಾನವೀಯ ಮೌಲ್ಯಗಳು ಅಜ್ಜಿಯಲ್ಲಿದೆ ಎಂಬ ಅರಿವು ಆವಳಿಗೆ ಮುಖ್ಯವಾಗುತ್ತದೆ. ತಿಪ್ಪಜ್ಜಿ. ರಾಮಣ್ಣ, ನಾಗಿ ಇವರ ಬಗ್ಗೆ ಅಜ್ಜಿಯ ಕಳಕಳಿ ಸೀತೆಯ ಮನಸ್ಸಿನ ಮೇಲೆ ಬೀರುವ ಪರಿಣಾಮ ಮೂಕಜ್ಜಿಯ ವ್ಯಕ್ತಿತ್ವಕ್ಕೇ ಇನ್ನೊಂದು ಮಹತ್ವಪೂರ್ಣ ಆಯಾಮವನ್ನು ಧಾರಣ ಮಾಡುತ್ತದೆ. ಮೂಕಜ್ಜಿ ಎಂದರೆ ಬರೇ ಅವಳ ಕನಸುಗಳಲ್ಲ ಎಂಬುದು ಇದರಿಂದ ಸುಸ್ಪಷ್ಟವಾಗುತ್ತದೆ. ಅನೇಕ ಓದುಗರು ಕೇಳಬಹುದಾದ ಪ್ರಶ್ನೆಗಳನ್ನೇ ಅನಂತರಾಮ, ಜನಾರ್ಧನನಂಥವರೂ ಕೇಳುತ್ತಾರೆ. ಕಾದಂಬರಿಯ ಅನೇಕ ಪಾತ್ರಗಳು ಅವಳೊಡನೆಯ ಒಡನಾಟದಿಂದ ಆಕೆ ಎಲ್ಲರಂಥಲ್ಲ ಎಂಬುದನ್ನು "ಹುಚ್ಚಿ", "ಮರುಳು", "ಸಿಡಿಲು" ಎಂಬ ಪರಿಭಾಷೆಯಲ್ಲಿ ದಾಖಲಿಸುತ್ತವೆ. ಅವಳು ಇತರರಿಗಿಂತ ಭಿನ್ನ. ಈ ಭಿನ್ನತೆಯ ಸ್ಪಷ್ಟ ಸ್ವರೂಪ ಆ ಪಾತ್ರಗಳಿಗೆ ದಕ್ಕುತ್ತಿಲ್ಲ. ಇದೇ ತೆರನಾದ ಅನೇಕ ಪ್ರಶ್ನೆಗಳನ್ನು ಕಾದಂಬರಿಯ ಅನೇಕ ಓದುಗರು ಸಾಹಿತ್ಯ ವಿಮರ್ಶೆಯ ಪರಿಭಾಷೆಯಲ್ಲಿ ಕೇಳುತ್ತಾರೆ. ಈ ದೃಷ್ಟಿಯಿಂದ ಕಾರಂತರು ಮುನ್ನುಡಿಯಲ್ಲಿ ನೀಡಿರುವ ಒಂದು ಸೂಚನೆಯನ್ನು ಉದ್ಧರಿಸುವುದು ಅನುಚಿತವಾಗಲಾರದು:

> "ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ — ಎಂಬ ಸಂಶಯ ಬಂದರೆ, ನಮ್ಮ ಸಂಸ್ಕೃತಿಯ ನಂಬಿಕೆಗಳೇನಕವನ್ನು ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ, ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹದ ರೂಪದಲ್ಲಿ ಬದುಕಿಕೊಂಡೇ ಇದ್ದಾಳೆ."

ಮನುಷ್ಯನ ಲೈಂಗಿಕ ಜೀವನದ ಅನೇಕ ಸತ್ಯಗಳನ್ನು ಮೂಕಜ್ಜಿ ತನ್ನ ಕನಸುಗಳ ಮೂಲಕ ನುಡಿಸುತ್ತಾಳಷ್ಟೆ. ಮನುಷ್ಯನ ಇತಿಹಾಸ, ಪುರಾಣಗಳನ್ನು ಕಾಮದ ನೆಲೆಯಲ್ಲಿ ಕಾಣಿಸುವ ಪ್ರಯತ್ನವೂ ಇಲ್ಲಿದೆ. ವರ್ತಮಾನದಲ್ಲಿ ಕಾದಂಬರಿ ಹೇಳು ತ್ತಿರುವ ಕತೆಯೂ ಸುಬ್ರಾಯ ಮತ್ತು ಅವನ ಬಂಧು-ಮಿತ್ರರ ಲೈಂಗಿಕ ಜೀವನದ ಕತೆ. ಸುಬ್ರಾಯನ ವಿವಾಹ ಮತ್ತು ಕೌಟುಂಬಿಕ ಜೀವನ, ನಾರಾಯಣನ ಪ್ರೇಮ ಜೀವನ, ಜನಾರ್ಧನನ ಪ್ರೇಮ ಸಾಹಸಗಳು, ಮೂಕಜ್ಜಿಯ ಬಾಲ್ಯ ವೈಧವ್ಯ, ರಾಮಣ್ಣನ ಸೋಲು ಗೆಲುವುಗಳು, ನಾಗಿಯ ವಿವಾಹೇತರ ಸಂಬಂಧ, ಶೀನಪ್ಪನ ಲೈಂಗಿಕ ವಿಕೃತಿ, ಅನಂತರಾಯನ ಸಲಿಂಗ ಕಾಮ—ಹೀಗೆ ಒಂದು ರೀತಿಯ ಪ್ರೇಮ-ಕಾಮಗಳ ಮೀಮಾಂಸೆಯೇ ಇಲ್ಲಿ ನಡೆದಿದೆ. ಈ ಕಾರ್ಯ ಇತಿಹಾಸ ಪುರಾಣಗಳ ಬೆಳಕಿನಲ್ಲಿಯೂ ನಡೆದಿದೆ. ಮೂಲ ಪ್ರವೃತ್ತಿಗಳು ಸಾಂಸ್ಕೃತಿಕ ನಡವಳಿಕೆಗಳಾಗಿ ಮಾರ್ಪಡುವ, ಹಾಗೆ ಮಾರ್ಪಡುವಾಗ ಎದುರಾಗುವ ಸಮಸ್ಯೆಗಳು ಇವೆಲ್ಲ ನಿಧಾನವಾಗಿ ಬಿಚ್ಚಿಕೊಳ್ಳುತ್ತವೆ. ಪೌರಾಣಿಕ ಪ್ರತಿಮೆಗಳಿಗೆ ವರ್ತಮಾನದ ಸಂದರ್ಭದಲ್ಲಿ ಸುಲಭ ಸಮೀಕರಣಗಳನ್ನು ಹುಡುಕುವ ಕೆಲಸವನ್ನು ಕಾದಂಬರಿ ಮಾಡುವುದಿಲ್ಲ. ಸೃಷ್ಟಿಯ ಕಲ್ಪನೆಯನ್ನು ಕುರಿತು ಕೆಲವು ಮೂಲ ಪ್ರಮೇಯಗಳನ್ನು ಕನಸುಗಳು ನುಡಿಸುತ್ತವೆ. ಲೈಂಗಿಕ ಪ್ರತಿಮಾಗಳು ಕಾಲದಿಂದ ಕಾಲಕ್ಕೆ ಬದಲಾದ ಕೆಲವು ಸೂಚನೆಗಳನ್ನು ಅವು ಮಾಡುತ್ತವೆ. ತನ್ನ ಸುತ್ತಲ ವರ್ತಮಾನದ ಬದುಕಿನಲ್ಲಿ ಲೈಂಗಿಕ ಅಪೇಕ್ಷೆಗಳ ಒಂದು ವಿನ್ಯಾಸವನ್ನೇ ನಿರೂಪಕ ಕಂಡುಕೊಳ್ಳುತ್ತಾನೆ. ಅವನ ಭೌತಿಕ ಅವಲೋಕನಕ್ಕೆ ಕನಸುಗಳು ತರುವ ಕಾಣ್ಕೆಗಳೂ ಮಿಳಿತಗೊಂಡು ದರ್ಶನ ಸಂಕೀರ್ಣವಾಗುತ್ತದೆ. ಮೂಕಜ್ಜಿಯ ಬಗ್ಗೆ ಸುಬ್ರಾಯನಿಗೆ ಪ್ರೀತಿ ಗೌರವಗಳಿರುವಂತೆ ಅನುಮಾನ, ಕುತೂಹಲ, ವಿಸ್ಮಯಗಳೂ ಇವೆ.

ಇಡೀ ಕಾದಂಬರಿ ಸುಬ್ರಾಯ ತನ್ನ ಮನಸ್ಸಿಗೆ ಅಂಟಿದ ಸಂಸ್ಕೃತಿಯ ಹೊಟ್ಟನ್ನು ಕಳಚಿಕೊಳ್ಳುವ ಪ್ರಕ್ರಿಯೆಯೇ ಆಗಿದೆ. ಸುಬ್ರಾಯನ ಪ್ರಜ್ಞೆಯ ವಿಕಾಸವೇ ಕಾದಂಬರಿಯ ಕೇಂದ್ರವಸ್ತು. ಅವನು ತನ್ನ ಜಿಜ್ಞಾಸೆಗಳಿಗೆ ಮೂಕಜ್ಜಿಯನ್ನು ಸಾಕ್ಷಿ ಪ್ರಜ್ಞೆ ಮಾಡಿಕೊಳ್ಳುತ್ತಾನಲ್ಲದೆ ಮೂಕಜ್ಜಿ ಕಾದಂಬರಿಯ ಕೇಂದ್ರಪಾತ್ರವಾಗುವುದಿಲ್ಲ. ಅವಳ ವೈಚಾರಿಕತೆಗೆ ತಬ್ಬಿಬ್ಬಾಗಿ ಅವಳನ್ನು ಕಾದಂಬರಿಯ ಕೇಂದ್ರ ಆಕರ್ಷಣೆಯಾಗಿ ಪರಿಭಾವಿಸುವ ಓದು ಕಾದಂಬರಿಗೆ ಪೂರ್ಣ ನ್ಯಾಯ ಸಲ್ಲಿಸಲಾರದು. ಪರಂಪರೆ ಮತ್ತು ಆಧುನಿಕತೆಗಳ ಘರ್ಷಣೆಯಲ್ಲಿ ವೈಯುಕ್ತಿಕ ತರ್ಕದಿಂದ ಆಯ್ಕೆ ಮಾಡಿಕೊಳ್ಳುತ್ತಾ ಅನುಭವಗಳಿಗೆ ಒಡ್ಡಿಕೊಂಡು ಮಾಗುವ, ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳುವ ಹಲವು ಪಾತ್ರಗಳ ಒಂದು ಭವ್ಯ ವಿನ್ಯಾಸವೇ ಒಟ್ಟಾರೆ ಕಾರಂತ ಕಾದಂಬರಿ ಪ್ರಪಂಚದಲ್ಲಿ ಕಾಣುತ್ತದೆ. "ಮರಳಿ ಮಣ್ಣಿಗೆ"ಯ ರಾಮ, "ಸಮೀಕ್ಷೆ"ಯ ಶ್ರೀನಿವಾಸ, "ಬೆಟ್ಟದ

ಶೂದ್ರ

ಜೀವ", "ಅಳಿದ ಮೇಲೆ" ಕಾದಂಬರಿಗಳ ನಿರೂಪಕರು ಮೊದಲಾಗಿ ಇಂಥ ಅನೇಕ ಪಾತ್ರಗಳ ಜೊತೆ ಸುಬ್ಬಾರಾಯನನ್ನು ಇಟ್ಟು ನೋಡಬೇಕು. ಏಕೆಂದರೆ ಕಾದಂಬರಿ ಗಮನಿಸುವುದು ಸುಬ್ಬಾರಾಯನ ಬೆಳವಣಿಗೆಯನ್ನೇ ಹೊರತು ಮೂಕಜ್ಜಿಯ ಬೆಳವಣಿಗೆ ಯನ್ನಲ್ಲ. ಈ ದೃಷ್ಟಿಯಿಂದ ಮೂಕಜ್ಜಿ "ಚಿರ"ವಾದರೆ ಸುಬ್ಬಾರಾಯ "ಚರ". ಈ ಚಿರಾಚರಗಳ ಜಿಜ್ಞಾಸೆಯಲ್ಲಿ ಬದುಕಿನ ಸೂಕ್ಷ್ಮಗಳು ವಿವರಗಳಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ರಾಮಣ್ಣ-ನಾಗಿಯರ ಕತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಜಿಜ್ಞಾಸೆಯ ಸ್ವರೂಪದ ಬಗ್ಗೆ ಅನೇಕ ಮಹತ್ತ್ವಪೂರ್ಣ ಒಳನೋಟಗಳು ಹೊಳೆಯ ತೊಡಗುತ್ತವೆ. ಮಾಸ್ತಿಯವರ ಅತ್ಯುತ್ತಮ ಕತೆಗಳಲ್ಲಿ ಒಂದಾದ "ವೆಂಕಟಿಗನ ಹೆಂಡತಿ"ಗಿಂತ ತುಂಬಾ ಸಂಕೀರ್ಣವಾದ ರಾಮಣ್ಣ-ನಾಗಿಯರ ಕತೆ "ಮೂಕಜ್ಜಿಯ ಕನಸುಗಳು" ಕಾದಂಬರಿಗೆ ನೀಡುವ ನೈತಿಕ ಆಯಾಮಗಳು ದೊಡ್ಡವು. ರಾಮಣ್ಣ-ನಾಗಿಯರನ್ನು ನಿರೂಪಕ ತನ್ನ ಜೀವನದಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದಾನೆ. ಅವರಿವರು ಹೇಳಿದ ಕತೆಗಳನ್ನು ಕೇಳಿದ್ದಾನೆ. ತನ್ನ ಅಜ್ಜಿಯ ವಿಶ್ಲೇಷಣೆಗಳನ್ನು ಕೇಳಿದ್ದಾನೆ. ಅಷ್ಟೇ ಅಲ್ಲ, ಹಲವು ವರುಷಗಳ ಬಳಿಕ ಅವರಿಬ್ಬರನ್ನು ಕೂಡಿಸಿದ ತನ್ನ ಅಜ್ಜಿಯ ವರ್ತನೆಗೆ ಸಾಕ್ಷಿಯಾಗಿದ್ದಾನೆ. ಅಜ್ಜಿಯ ಜಿಜ್ಞಾಸೆಯಷ್ಟೇ ಅವಳ ಕ್ರಿಯೆಯೂ ಸುಬ್ಬಾರಾಯನನ್ನು ಬೆಳೆಸುತ್ತದೆ. "ಇರುವ ನಾಲ್ಕುದಿನ ಚಂದವಾಗಿ ಇರುವುದಷ್ಟೆ" (ಪುಟ 45) ಎಂದು ಹೇಳುವ ಅಜ್ಜಿ ರಾಮಣ್ಣ ನಾಗಿಯರನ್ನು ಮತ್ತೆ ಒಂದುಗೂಡಿಸು ವುದು ಸುಬ್ಬಾರಾಯನ ಮನಸ್ಸಿನ ಮೇಲೆ ಮಾಡುವ ಪರಿಣಾಮ ಅಷ್ಟಿಷ್ಟಲ್ಲ. ಈ ಸಂಭಾಷಣೆಯನ್ನು ಗಮನಿಸೋಣ :

"ಈಗ ಒಂದು ಮಾತಿಗೆ ಕೇಳುತ್ತೇನೆ—ಮಹಾಭಾರತ, ರಾಮಾಯಣ ಅನ್ನು ತ್ತಾರಲ್ಲ. ಅದೆಲ್ಲ ನಿಜವೇ ? ಅವತಾರ ? ಗಿವತಾರ ?"

"ನಿನಗೆ ನಾನು ಎಷ್ಟು ಸಾರಿ ಹೇಳುವುದು ಮಾಣಿ ? ದೇವರಿಗೆ ಅವತಾರ ಕೊಟ್ಟವರು ನಾವು, ನಮ್ಮ ಬುದ್ಧಿ. ಈ ಜಗತ್ತನ್ನು ಸೃಷ್ಟಿಮಾಡುವುದಕ್ಕೆ ಅವನಿಗೊಂದು ಅವತಾರ ಬೇಕೆ ? ಅದಕ್ಕೆ ಬೇಡವಾದರೆ, ಅದನ್ನು ಸಾಕು ವುದಕ್ಕೂ ಬೇಡ; ಸಾಯಿಸುವುದಕ್ಕೂ ಬೇಡ."

"ಅದು ಹೌದೆಂದು ಕಾಣಿಸುತ್ತದೆ. ರಾಮನ ಕತೆ ಅಲ್ಲಿರಲಿ, ರಾಮಣ್ಣನ ಕತೆ ಯನ್ನು ಹೇಳಿ ನೀವು" (ಪುಟ 238)

ಸುಬ್ಬಾರಾಯನಿಗೆ ಮೂಕಜ್ಜಿಯ ಕನಸುಗಳ ಬಗ್ಗೆ ಮಾತ್ರವಲ್ಲ, ಆಕೆಯ ಜೀವನದ ಬಗ್ಗೆಯೂ ಆಸಕ್ತಿಯಿಂದೆ ಎನ್ನುವುದು ಗಮನಿಸಬೇಕಾದ ವಿಷಯ. ಕಲೆ, ವಿಜ್ಞಾನ, ಮಾನವಿಕ ಭಾಷೆ—ಹೀಗೆ ಹಲವು ಹತ್ತು ಸಂಗತಿಗಳ ಬಗ್ಗೆ ಕುತೂಹಲವಿಟ್ಟುಕೊಂಡ, ಆ ಕ್ಷೇತ್ರಗಳಲ್ಲಿಯೂ ಗಮನಾರ್ಹ ಸಾಧನೆ ಮಾಡಿರುವ ಕಾರಂತರಿಗೆ ಕೇವಲ ಮಾನವ

ಶಾಸ್ತ್ರದ ಪ್ರಾಥಮಿಕ ಪಾಠಗಳನ್ನು ಹೇಳಲು ಕಾದಂಬರಿಯನ್ನು ಬರೆಯುವ ಉದ್ದೇಶ ವಿರಲಾರದು. ಈಗಾಗಲೇ ಸ್ಪಷ್ಟಪಡಿಸಿರುವಂತೆ ಮೂಕಜ್ಜಿಯ ಪಾತ್ರ ಸೃಷ್ಟಿಯನ್ನು ಕಾದಂಬರಿಯ ಒಟ್ಟಾರೆ ಅಗತ್ಯದ ಹಿನ್ನೆಲೆಯಲ್ಲೇ ನೋಡಬೇಕು. ಅಜ್ಜಿಯ ಭೂತದ ಬಗ್ಗೆ ನಿರೂಪಕನ ಕುತೂಹಲಗಳು ಔಚಿತ್ಯಪೂರ್ಣವಾಗಿವೆ. ಅಂದರೆ ಸೂಕ್ಷ್ಮಗ್ರಾಹಿ ಓದುಗರನೇಕರು ಕಾದಂಬರಿಯ ಹೊರಗೆ ಎತ್ತಬಹುದಾದ ಅನುಮಾನಗಳನ್ನು ಕಾದಂಬರಿಯ ಒಳಗೇ ಸೂಚಿಸಿ ಕಾದಂಬರಿಕಾರರು ರಚನೆಯಲ್ಲಿ ಸಂಕೀರ್ಣತೆ ಸಾಧಿಸುತ್ತಾರೆ:

> "ಒಮ್ಮೊಮ್ಮೆ ನೆನೆದಾಗ ನನ್ನ ಯೋಚನೆಗಳು ನನಗೇ ವಿಪರೀತದ್ದಾಗಿ ಕಾಣಿಸುತ್ತವೆ. ನಮ್ಮ ಅಜ್ಜಿ ಅಷ್ಟೊಂದು ದೀರ್ಘಕಾಲ ಕಾಮ ತುಂಬಿದ ಸಂಸಾರಿಕ ಆವರಣದಲ್ಲಿದ್ದು ಅಂಥ ವೈರಾಗ್ಯದ ಜೀವನ ಹೇಗೆ ನಡೆಸಿದರು? ಯೌವನ ಎಂಬುದು ಕಾದಿರಿಸಿದಾಗ ಅವರ ಮನಸ್ಸು ವಿಷಯ ವಾಸನೆಯಿಂದ ತೊಳಲಾಡದಾಯಿತೇ–ಎಂಬ ಪ್ರಶ್ನೆಗಳೂ ನನ್ನಲ್ಲಿ ಹುಟ್ಟುತ್ತವೆ. ಅಂಥವನ್ನು ಬಾಯಿಬಿಟ್ಟು ಕೇಳುವುದಾದರೂ ಹೇಗೆ? ಯಾರಾದರೂ ಕೇಳುತ್ತಾರೆಯೋ? ಕೇಳಿದರೆ ಏನು ಹೇಳಿಯಾರು? ಒಂದಲ್ಲ ಒಂದು ದಿನ ಪರೋಕ್ಷದಿಂದಲಾದರೂ ಕೇಳಬೇಕು ಎಂಬ ಆಸೆಯೇನೋ ಉಳಿದುಕೊಂಡಿತು" (ಪುಟ 81).

ಕಾದಂಬರಿಯ ಸಂಘರ್ಷದ ನೆಲೆಗಳು ಸೂಚಿತವಾಗುವುದು ಇಂಥಲ್ಲಿ. ಮೂಕಜ್ಜಿಯ ಕನಸುಗಳೇನೇ ಇರಲಿ ಅವುಗಳಿಗೆ ಸಂಪ್ರದಾಯ ಹೇಗೆ ಸ್ಪಂದಿಸಿ ಪ್ರತಿಕ್ರಿಯಿಸುತ್ತಾನೆಂಬುದೇ ಇಲ್ಲಿ ಮುಖ್ಯ. ಈ ದೃಷ್ಟಿಯಿಂದ ಈ ಕಾದಂಬರಿ ಕಾರಂತರ ಕಾದಂಬರಿಗಳ ಪ್ರಧಾನ ಧಾರೆಗೇ ಸೇರುವಂಥದ್ದಾಗಿದೆ.

●

ಕೋಮುವಾದಿತ್ವ ಹಲವು ಮೂಲಗಳಿಂದ ಬರಬಹುದು, ಹಲವಾರು ಕೋಮುಗಳಿಂದ ಬರಬಹುದು. ಆದರೆ ಇಂದು ನಮ್ಮನ್ನು ನಾವು ಜಾತ್ಯಾತೀತರು ಎಂದು ಕರೆದುಕೊಳ್ಳಲು ಸಿದ್ಧರಾಗಿರುವವರು ಒಪ್ಪಿಕೊಳ್ಳಲು ಸಿದ್ಧವಾಗಿರುವ ವಿಷಯವೆಂದರೆ, ಹಿಂದೂ ಮತಾಂಧತೆ ಅತಿ ದೊಡ್ಡ ಗಂಡಾಂತರವನ್ನು ಒಪ್ಪುತ್ತದೆ ಎನ್ನುವುದು. ಇದು ಇಂದಿನ ರಾಜಕೀಯ ಸತ್ಯ ಮತ್ತು ನಮ್ಮ ಹಿಡಿತಕ್ಕೆ ಸಿಕ್ಕಬೇಕಾಗಿರುವ ವಿಷಯ ಇದು.

— ಎನ್. ರಾಮ್

(ಹಿಂದೂ ಪತ್ರಿಕೆ)

ಗ್ರೀಕ್ ಮಹಾನ್ ಕವಯಿತ್ರಿ : ಸಾಫೋ

— ಕೆ.ಎನ್. ವಿಜಯಲಕ್ಷ್ಮಿ

ಗ್ರೀಕ್ ನಾಗರೀಕತೆ ಉಚ್ಛ್ರಾಯ ಸ್ಥಿತಿಯ ಕಾಲದಲ್ಲಿ ಸಾಫೋ ಕವಯಿತ್ರಿ ಕಾವ್ಯವನ್ನು ಬರೆದವಳು ಕಲೆ, ಸಾಹಿತ್ಯ, ತತ್ತ್ವಶಾಸ್ತ್ರ, ಗಣಿತ, ಶಿಲ್ಪಿಕಲೆಗಳು ಉನ್ನತಾವಸ್ಥೆಯನ್ನು ತಲುಪಿದ ಈ ಕಾಲ ಪ್ಲೇಟೋ, ಅರಿಸ್ಟಾಟಲ್, ಹೋಮರ್, ಈಸ್ಕಿಲಸ್, ಯೂರಿಪಿಡಿಸ್ ಮುಂತಾದ ಮಹೋನ್ನತ ಚೇತನಗಳ ಸೃಷ್ಟಿಶೀಲತೆಯ ಕಾಲ. ಇಂಥ ಕಾಲಮಾನದಲ್ಲಿ ಪ್ರತಿಭಾಪೂರ್ಣ ಭಾವಗೀತೆಗಳನ್ನು ಬರೆದ ಸಾಫೋ ಜಗತ್ತಿನ ಸಾಹಿತ್ಯದ ನಿತ್ಯ-ಕುತೂಹಲಗಳಲ್ಲಿ ಒಬ್ಬಳು. ಸಾಫೋ ಭಾವಗೀತೆಗಳು ಸಂಕ್ಷಿಪ್ತತೆ ಅರ್ಥಸಂದಿಗ್ಧತೆಯ ವೈವಿಧ್ಯ, ಪ್ರತಿಮಾನಿರ್ಮಿತಿ, ದ್ವಂದ್ವ ಕಲ್ಪನೆಗಳು ಈ ಹೊತ್ತಿಗೂ ವಿಸ್ಮಯ ಕುತೂಹಲಗಳಿಗೆ ಗ್ರಾಸ ಒದಗಿಸುತ್ತಲೇ ಬಂದಿದೆ. ಇಂಥ ಕವಯಿತ್ರಿಯ ಜೀವನ ವಿವರಗಳು, ಕಾವ್ಯಸೃಷ್ಟಿಯ ನೆಲೆಗಳನ್ನು ಕುರಿತ ಸಮೀಕ್ಷೆ ಈ ಲೇಖನದ ಆಶಯವಾಗಿದೆ.

ಸಾಫೋ ಕ್ರಿ.ಪೂ. ಏಳನೆಯ ಶತಮಾನದ ಗ್ರೀಕ್ ಕವಯಿತ್ರಿ. ಅದು ಲೆಸ್‌ಬಾಸ್ ಎಂಬ ದ್ವೀಪದ ಪಶ್ಚಿಮ ತೀರದಲ್ಲಿದೆ. ಸಾಫೋಳ ತಂದೆ ಶ್ರೀಮಂತವರ್ಗಕ್ಕೆ ಸೇರಿದವನು. ಆತನ ಹೆಸರು ಸ್ಕಮಾಂಡ್ರೋನೈಮೋಸ್. ತಾಯಿಯ ಹೆಸರು ಕ್ಲಿಸ್. ಸಾಫೋಳಿಗೆ ಚರಕ್ಸಾಸ್, ಯೂರಿಗ್ಯೂಸ್, ಲರಿಚ್ಯೋಸ್ ಎಂಬ ತಮ್ಮಂದಿರು. ಅವಳು ಆರು ವರ್ಷದ ಚಿಕ್ಕ ಹುಡುಗಿಯಾಗಿದ್ದಾಗ ಲೆಸ್‌ಬಾಸ್ ಹಾಗೂ ಅಥೆನ್ಸಿನ ನಡುವೆ ಯುದ್ಧ ಆರಂಭವಾಗಿ ಹತ್ತು ವರ್ಷಗಳ ಕಾಲ ಈ ಯುದ್ಧ ಸತತವಾಗಿ ನಡೆಯಿತು. ಲೆಸ್‌ಬಾಸ್ ದ್ವೀಪದ ಯುವಕರೆಲ್ಲ ಈ ಯುದ್ಧದಲ್ಲಿ ಮಡಿದರು. ಅಲ್ಲಿ ಗಂಡು ಸಂತತಿ ಕಡಿಮೆ ಆಯಿತು. ಈ ಯುದ್ಧದಲ್ಲಿ ಪಾಲ್ಗೊಂಡ ಸಾಫೋಳ ತಂದೆ ಸತ್ತು, ತಾಯಿ ತನ್ನ ನಾಲ್ಕೂ ಮಕ್ಕಳೊಂದಿಗೆ ಮಿಥಿಲೇನಿ ಎಂಬ ಸ್ಥಳಕ್ಕೆ ಬಂದಳು. ಅದು ಲೆಸ್‌ಬಾಸ್‌ನ ಪೂರ್ವ ತೀರದಲ್ಲಿದೆ. ಸಾಫೋ ತನ್ನ ತಾರುಣ್ಯ ಬುದ್ಧಿಮತ್ತೆಗಳಿಂದ ಪ್ರಸಿದ್ಧಳಾದಳು. ಕಪ್ಪು ಕಣ್ಣಿನ, ಕಪ್ಪು ಕೇಶರಾಶಿಯ ಅಷ್ಟೇನೂ ಸುಂದರಳಲ್ಲದ ಆವಳು ಮಾಂತ್ರಿಕತೆಯಿಂದ ಕೂಡಿದ ಕವನಗಳಿಂದಲೂ, ಸೂಜಿಗಲ್ಲಿನಂಥ ವ್ಯಕ್ತಿತ್ವದಿಂದಲೂ ಜನರನ್ನು ಆಕರ್ಷಿಸಿದ್ದಳು. ಅವರು ಅವಳನ್ನು ಕಪ್ಪು ಕೋಗಿಲೆ ಎಂದು ಕರೆಯುತ್ತಿದ್ದರು.

ನವತಾರುಣ್ಯಕ್ಕೆ ಕಾಲಿಟ್ಟ ಸಾಫೋ ಆಲ್‌ಕೋಯಿಸ್ ಎಂಬ ಯುದ್ಧವೀರ ಕವಿಯ ಗೆಳೆತನವನ್ನು ಮಾಡಿಕೊಂಡಳು. ಅವಳು ಹೆಣ್ಣುಗಳ ಬಗೆಗೆ ತೋರಿದ ಪ್ರೀತಿ ಆಸಕ್ತಿಗಳನ್ನು ಪ್ರಾರಂಭದಲ್ಲಿ ಪುರುಷರ ಬಗೆಗೆ ತೋರುತ್ತಿರಲಿಲ್ಲ. ಆಲ್‌ಕೋಯಿಸ್

ಕೆ.ಎನ್. ವಿಜಯಲಕ್ಷ್ಮಿ, ಬಿ.ಎನ್.ಎಂ. ಕಾಲೇಜು, ಬನಶಂಕರಿ 2ನೇ ಹಂತ, ಬೆಂಗಳೂರು-560070

ಗೆಳೆಯನಾಗಿದ್ದ, ಪ್ರೇಮಿಯಲ್ಲ. ಅವನು ಅಥೆನ್ಸಿನ ಯುದ್ಧದ ಸಂದರ್ಭದಲ್ಲಿ ಶಸ್ತ್ರವನ್ನು ಬಿಸುಟು ಪಲಾಯನ ಮಾಡಿದ. ಆತನಿಗೆ ಯುದ್ಧವೀರನ ವೈಭವ ಮರಣಕ್ಕಿಂತ, ಸಾಮಾನ್ಯ ಬದುಕೇ ದೊಡ್ಡದೆನಿಸಿತ್ತು. ಅವನು ಹೇಡಿಯೇನಲ್ಲ, ಯುದ್ಧಗಳಲ್ಲಿ ಕಾದಾಡಿ ಶೌರ್ಯ ಮೆರೆದವನು. ಸ್ವಾತಂತ್ರ್ಯ ಪ್ರೇಮಿ. ನಾಡು, ನುಡಿ, ದೇಶಪ್ರೇಮಗಳನ್ನು ಕುರಿತು ಕವನಗಳನ್ನು ಕಟ್ಟಿದವನು. ಪ್ರೇಮ, ಮಧು ಸೇವನೆಗಳ ಬಗ್ಗೆ ಸುಂದರ ಕವನಗಳನ್ನು ರಚಿಸಿದ ಆತ ಸಾಫೋಳಲ್ಲಿ ಅನುರಕ್ತನಾಗಿ ಅವಳಿಗೆ ಪತ್ರಗಳನ್ನು ಬರೆಯುತ್ತಾನೆ:

"ಮುಗ್ಧ ಸಾಫೋ, ಕಪ್ಪು ಕೂದಲ ಚೆಲುವೆ, ಮುದ್ದು ಮಂದಸ್ಮಿತವೆ, ನಾನು ಒಂದು ವಿಷಯ ತೋಡಿಕೊಳ್ಳಬೇಕೆಂದರೆ ಮಾತೇ ಹೊರಡುತ್ತಿಲ್ಲ. ಮೂಕನಾಗಿರುವೆ."
—ಈ ಪತ್ರಕ್ಕೆ ವಿಚಲಿತಳಾಗದ ಸಾಫೋ ಹೀಗೆ ಅಸಡ್ಡೆಯಿಂದ ಉತ್ತರಿಸುತ್ತಾಳೆ: "ನೀನೇನು ಹೇಳಬಯಸುವೆಯೋ ಅದು ಹೇಯವಲ್ಲದಿದ್ದರೆ ಸ್ಪಷ್ಟವಾಗಿ ಹೇಳು. ಸಂಕೋಚವೇಕೆ?" ಮುಂದೆ ಆಲ್‌ಕೋಯಿಸ್ ಅವಳ ಬೆಂಬಿಡದೆ ಕವನಗಳನ್ನು ಕಟ್ಟಿ ಎಷ್ಟೇ ಪರಿತಪಿಸಿದರೂ ಸಾಫೋ ಮಣಿಯಲಿಲ್ಲ. ಆ ಕವನಗಳಿಂದ ಅವಳ ಕೀರ್ತಿ ಹೆಚ್ಚಿತು. ಆಲ್‌ಕೋಯಿಸ್ ಮಾತ್ರ ಭಗ್ನಪ್ರೇಮಿಯಾಗಿ ಉಳಿದ. ಹದಿನೇಳರ ಯುವತಿ ಸಾಫೋ ಮಿಥಿಲೇನಿನಲ್ಲಿ ಅನೇಕ ಸುಂದರ ತರುಣಿಯರ ಗೆಳೆತನ ಗಳಿಸಿ ಸುಖ ಸ್ವೇಚ್ಛೆಗಳಲ್ಲಿ ಮುಳುಗಿದಳು. ಇಂದಿನ ಪಾಶ್ಚಾತ್ಯ ಪ್ರಪಂಚದ ಸ್ತ್ರೀಯರಿಗಿಂತಲೂ ಅವರು ಮುಂದುವರೆದಿದ್ದರು. ಈ ಹೆಣ್ಣುಗಳು ಯುದ್ಧದ ಹೊರತು ಎಲ್ಲ ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಮಹಾ ತತ್ತ್ವಜ್ಞಾನಿ ಪ್ಲೇಟೋ ಸಾಫೋಳನ್ನು ಕುರಿತು ಹೀಗೆ ಬರೆದಿದ್ದಾನೆ: "ಕೆಲವರು ಹೇಳುತ್ತಾರೆ, ಪ್ರಪಂಚದಲ್ಲಿ ಒಂಬತ್ತು ಅದ್ಭುತಗಳು ಮಾತ್ರವೇ ಇರುವುದು. ಆದರೆ ಲೆಸ್‌ಬಾಸ್‌ನಲ್ಲಿರುವ ಸಾಫೋ ಎಂಬ ಕವಯಿತ್ರಿ ಪ್ರಪಂಚದ ಹತ್ತನೆಯ ಅದ್ಭುತ. ಅವಳ ತಾತ್ತ್ವಿಕ ಚಿಂತನೆ ಉನ್ನತ ಮಟ್ಟದ್ದು. ಆಕೆ ಮಹಾ ಕವಿಗಳಾದ ಹೊರೇಸ್, ಓವಿಡ್‌ರಂತೆ ಶ್ರೇಷ್ಠಮಟ್ಟದ ಆದಿ ಕವಯಿತ್ರಿ" ಎಂದು ಕೊಂಡಾಡಿದ್ದಾನೆ.

ಸಾಫೋಳನ್ನು ದುಷ್ಟ ಹೆಂಗಸೆಂದು ಜರಿಯುವ ಜನ ಅಂದಿನ ಸಮಾಜದಲ್ಲಿದ್ದರು. ಇದಕ್ಕೆ ಕಾರಣ ಸಾಫೋ ಒಂದು ಸಂಸ್ಥೆಯನ್ನು ನಿರ್ಮಿಸಿ ಅಲ್ಲಿ ಚೆಲುವ ಸೂಕ್ಷ್ಮಮತಿಗಳಾದ ಹೆಣ್ಣುಮಕ್ಕಳಿಗೆ ಸಂಗೀತ, ನೃತ್ಯ, ಕಾವ್ಯರಚನಾ ಕ್ರಮಗಳನ್ನು ಹೇಳಿಕೊಡುತ್ತಿದ್ದಳು. ಮಿಥಿಲೇನಿನಲ್ಲಿ ಈ ಸಂಸ್ಥೆ ಸುಪ್ರಸಿದ್ಧವಾಗಿ ಅನೇಕ ಗಣ್ಯರನ್ನು ಆಕರ್ಷಿಸುವ ಕೇಂದ್ರವಾಗಿತ್ತು. ಅಲ್ಲಿ ಅನೇಕ ರಸಿಕ ಗಂಡು ಹೆಣ್ಣುಗಳು ಸಭೆ ಸೇರಿ ಸಂತೋಷ ಕೂಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು. 'ಉಪಪತ್ನಿ' ಎಂಬ ಪದ ಅನುಷ್ಠಾನಕ್ಕೆ ಬಂದದ್ದು ಇಲ್ಲಿಯೇ. ಶ್ರೀಮಂತ ಗ್ರೀಕರಿಗೆ ಈ ಚತುರ ವಾರಾಂಗನೆಯರಿಂದ ಸದಾ ಸೇವೆ

ದೊರಕುತ್ತಿತ್ತು. ಅವರನ್ನು ಸಾಫೋ ಬೆಚ್ಚನೆಯ ಪ್ರೇಮದ ಅಂತರಂಗದ ಗೆಳತಿಯರೆಂದು ಕರೆಯುತ್ತಿದ್ದಳು (Bosom Friends or Companions).

ಸಾಫೋ ಒಬ್ಬ ವಾರಾಂಗನೆಯೇ ಎಂಬ ಅಭಿಪ್ರಾಯವೂ ಹರಡಿತ್ತು. ಆದರೆ ಆಕೆಯ ಅಭಿಮಾನಿಗಳು ಅದನ್ನೊಪ್ಪದೆ ಬೇರೊಬ್ಬ ಸಾಫೋ ಎಂಬ ಮಹಿಳೆ ಇದ್ದಳೆಂದೂ ಅವಳ ಸಖಿಯರೂ, ಗೆಳತಿಯರೂ ಅಶ್ಲೀಲವಾಗಿ ವೇಷ ಧರಿಸುತ್ತಾರೆಂದೂ, ಇವರು ಹೆಣ್ಣು ಕುಲವೇ ತಲೆ ತಗ್ಗಿಸುವಂತೆ ತಮ್ಮ ಸ್ತನಗಳನ್ನು ಪ್ರದರ್ಶಿಸುತ್ತಾ ಎಲ್ಲರನ್ನೂ ಆಕರ್ಷಿಸುವರೆಂದು ಹೇಳುತ್ತಿದ್ದರು. ಅದೊಂದು ಹೆಣ್ಣುಗಳ ರಾಜ್ಯ. ಅಲ್ಲಿ ಗಂಡಿನ ಪ್ರಾಬಲ್ಯವಿಲ್ಲ. ಹೆಣ್ಣುಮಕ್ಕಳೇ ಬಲಿಷ್ಠರಾದ ಗಂಡಿನಂತೆ ದುಡಿಯಬಲ್ಲವರೆಂದು 1847ರಲ್ಲಿ ಒಬ್ಬ ಪ್ರವಾಸಿ ಮಾಹಿತಿಯನ್ನು ಸಂಗ್ರಹಿಸಿ ಬರೆದಿದ್ದಾನೆ.

ಸಾಫೋಳ ಕಾಲದಲ್ಲಿ ಹೆಣ್ಣುಗಳ ಕನ್ಯತ್ವಕ್ಕೂ, ಚಾರಿತ್ರ್ಯಕ್ಕೂ ಪ್ರಾಮುಖ್ಯತೆ ಇರಲಿಲ್ಲ. ಅವರ ಧಾರ್ಮಿಕ ಸಂಪ್ರದಾಯಗಳಲ್ಲೂ ಸ್ವಚ್ಛಂದ ಲೈಂಗಿಕತೆಗೇ ಪ್ರಾಮುಖ್ಯವಿದ್ದ ಕಾರಣ ಅವರು ಶಿಶ್ನದ ಗುರುತನ್ನು ತಮ್ಮ ಲಾಂಛನವುಳ್ಳವರಾಗಿದ್ದರು.

ಲೆಸ್‌ಬಾಸ್‌ನಲ್ಲಿ ಯುದ್ಧವು ನಡೆದ ಕಾಲದಲ್ಲಿ ಪಿಟ್ಟಕಸ್ ಎಂಬ ಯುದ್ಧವೀರನು ಲೆಸ್‌ಬಾಸ್ ಸೈನ್ಯದ ಮುಖ್ಯಾಧಿಕಾರಿಯಾಗಿದ್ದ. ಆತನು ಆಲ್‌ಕೋಯಿಸ್ ಹಾಗೂ ಸಾಫೋ ಇಬ್ಬರೂ ಒಳಸಂಚು ನಡೆಸುತ್ತಿರುವ ದೇಶದ್ರೋಹಿಗಳೆಂದು ಸಾರಿ ಇಬ್ಬರನ್ನೂ ಗಡೀಪಾರು ಮಾಡಿದ. ಆಲ್‌ಕೋಯಿಸ್ ಈಜಿಪ್ಟಿನತ್ತ ಹೊರಟ, ಸಾಫೋ ಲೆಸ್‌ಬಾಸನ್ನು ಬಿಟ್ಟು ಸಿಸಿಲಿಗೆ ಪ್ರಯಾಣ ಮಾಡಿದಳು. ಆಗ ಅವಳಿಗೆ ಇಪ್ಪತ್ತೊಂದು ವರ್ಷ. ಆ ನೌಕಾಯಾನದ ಸಂದರ್ಭದಲ್ಲಿ ಅವಳು ಶ್ರೀಮಂತ ವರ್ತಕ ಕೆರ್‌ಕೋಲಾಸ್ ಎಂಬಾತನನ್ನು ವಿವಾಹವಾದಳು. ಆ ಮದುವೆಯ ಬಗೆಗೆ ಸಾಫೋ ಹೀಗೆ ಬರೆಯುತ್ತಾಳೆ: "ಎಂಥ ಪ್ರೀತಿಯ ಗಂಡನನ್ನು ನಾನಾಯ್ದುಕೊಂಡೆ."

ಹೀಗೆ ದಾಂಪತ್ಯ ಜೀವನ ಆರಂಭಿಸಿದ ಕೆಲ ಕಾಲದ ನಂತರ ಸಾಫೋ ಒಂದು ಹೆಣ್ಣು ಮಗುವಿನ ತಾಯಿಯಾದಳು. ಆ ಮಗುವಿಗೆ ಅಜ್ಜಿಯ ಹೆಸರು ಕ್ಲಿಸ್ ಎಂದೇ ಇಟ್ಟಳು. ತನ್ನ ಮಗಳ ಕೊಂಡಾಟದಲ್ಲಿ ಮುಳುಗಿದ ಅವಳ ಕಾವ್ಯದ ಉದ್ಗಾರ ಹೀಗಿದೆ :

ನನಗಿರುವ ಮಗಳು ಚಿನ್ನದ ಹೂವಿನಂತೆ
ನನ್ನ ಮುದ್ದು ಕ್ಲಿಸ್
ಆಕೆಗಾಗಿ ನಾನು ಲಿಡಿಯಾಗಾಗಲಿ
ಲೆಸ್‌ಬಾಸ್‌ಗಾಗಲಿ ಹೋಗೆನೆಂದಿಗು ಮತ್ತೆ.

ಸಿಸಿಲಿಯಲ್ಲೇ ಶ್ರೀಮಂತ ಜೀವನ ನಡೆಸುತ್ತಿದ್ದಳು. ಮುಂದೆ ಸಾಫೋಳ ಗಂಡ ತೀರಿಕೊಂಡ. ವಿಧವೆಯಾದ ಸಾಫೋಗೆ ಆಗ ಇಪ್ಪತ್ತಾರು ವರ್ಷ. ಅವಳಿಗಿದ್ದ ಶಿಕ್ಷೆ ಅವಧಿಯೂ ಲೆಸ್‌ಬಾಸ್‌ನಲ್ಲಿ ಆ ವೇಳೆಗೆ ಮುಗಿದಿತ್ತು. ಏಕಾಂಗಿಯಾಗಿರಲು ಇಚ್ಛಿಸದೆ ಅವಳು ತನ್ನ ತಾಯಿನಾಡಾದ ಲೆಸ್‌ಬಾಸ್‌ಗೇ ವಾಪಸ್ಸು ಬಂದಳು. ಆ ಹೆಣ್ಣುಗಳ ದ್ವೀಪದಲ್ಲಿ ಮತ್ತೆ ತನ್ನ ಉನ್ನತ ಸ್ಥಾನವನ್ನು ಅಲಂಕರಿಸಿದಳು. ಅವಳ ಕಿರಿಯ ತಮ್ಮ ಲಾರಿಚಸ್‌ಗೆ ಗೌರವಯುತ ಹುದ್ದೆಯನ್ನು ಮಿಥಿಲೇನಿನಲ್ಲಿ ನೀಡಲಾಯಿತು. ಆತನ ಮೂಲಕ ಪ್ರತಿಷ್ಠಿತ ಸಮಾಜದ ಗಣ್ಯರ ಪರಿಚಯವೂ ಆಯಿತು. ಈಗ ಸಾಫೋ ತನ್ನ ಸುತ್ತ ಸುಂದರ ತರುಣಿಯರನ್ನು ಒಳಗೊಂಡು ತಮ್ಮ ಕೃಪಾಕಟಾಕ್ಷಕ್ಕಾಗಿ ಕಾಯುತ್ತಿರುವ ಶ್ರೀಮಂತವರ್ಗದವರನ್ನು ರಂಜಿಸಲು ದೊಡ್ಡ ಮಹಲು, ಸುತ್ತ ತೋಟ ಇರುವ ಸುಂದರ ಪರಿಸರದಲ್ಲಿ ತನ್ನ ಸಂಸ್ಥೆಯನ್ನು ಮತ್ತೆ ಆರಂಭಿಸಿದಳು. ಈಗ ಅಲ್ಲಿ ಹೆಚ್ಚು 'ಕಪ್ಪು ಕಲೆ'ಗೇ ಪ್ರಾಶಸ್ತ್ಯ ಕೊಡಲಾಯಿತು. ಇದರಿಂದಾಗಿ ಸಾಫೋಳ ಬಗ್ಗೆ ಅನೇಕ ಕಟ್ಟುಕತೆಗಳು ಹರಡಿದವು.

ಆ ಕಾಲದ ಅಂತರಂಗದ ಗೆಳತಿ ಎಂದು ಕರೆಸಿಕೊಂಡವರಲ್ಲಿ ಅತ್ಯಂತ ಚೆಲುವೆ ಗೈರಿನ್ನ ಮುಖ್ಯಳು. ಇವಳು ಸೂಕ್ಷ್ಮಮತಿಯಾದ ಕವಯಿತ್ರಿ ಆಗಿದ್ದಳು. ಇವಳು ಅನೇಕ ಪ್ರೇಮಗೀತೆಗಳನ್ನು ರಚಿಸಿದಳು. ಆದರೆ ಕ್ರಿಶ್ಚಿಯನ್ ಚರ್ಚ್‌ನವರು ಅವಳ ಪದ್ಯಗಳನ್ನೆಲ್ಲಾ ಸುಟ್ಟಿದ್ದು ಮಾತ್ರವಲ್ಲದೆ ಸಾಫೋಳೊಂದಿಗಿನ ಇವಳ ನಿಕಟ ಸಂಪರ್ಕದಿಂದ ಕುಪಿತರಾದ ಆ ಮತಾಂಧರು ಅವಳನ್ನು ಸುಟ್ಟುಹಾಕಿದರು. ಆಗ ಆಕೆಗೆ ಹತ್ತೊಂಬತ್ತು ವರ್ಷ ವಯಸ್ಸು.

ಸಾಫೋ ತನ್ನ ಇಡೀ ಪ್ರೇಮವನ್ನು ಧಾರೆಯೆರೆದದ್ದು ಅಟ್ಟೀಸ್ ಎಂಬ ಹೆಣ್ಣಿನ ಮೇಲೆ. ಅವಳು ಜೀವನದಲ್ಲೇ ಅತ್ಯಂತ ದುರಂತಮಯ ಸನ್ನಿವೇಶ ಮತ್ತು ಪ್ರೇಮ ಹತಾಶೆಯನ್ನು ಅನುಭವಿಸಿದ್ದೂ ಈ ಚೆಲುವೆಗಾಗಿಯೆ. ನವತರುಣಿ ಅಟ್ಟೀಸಳ ಬಗ್ಗೆ ಅನೇಕ ಪ್ರೇಮ ಕವನಗಳನ್ನು ಸಾಫೋ ರಚಿಸಿದ್ದಾಳೆ. ಅವಳ ಈ ಬಗೆಯ ಪ್ರೇಮ-ಕಾಮಗಳನ್ನೊಳಗೊಂಡ ಕವನಗಳು ಚರ್ಚಿನವರ ಅಪಕೃಪೆಗೆ ಸಿಕ್ಕು ಬೂದಿಯಾಗಬೇಕಾಯಿತು. ಆ ಕವನಗಳಲ್ಲಿ ಒಂದು ಹೀಗಿದೆ–

"ನಾನು ನಿನ್ನ ಪ್ರೇಮಿಸಿದೆ ಅಟ್ಟೀಸ್ ಬಹಳ ಕಾಲದ ಹಿಂದೆ. ಆಗಿನ್ನು ತಾರುಣ್ಯ ಹೂಬಿಟ್ಟ ಸಮಯ. ನೀನಾದರೋ ಎಚ್ಚೆತ್ತ ಮಗುವಂತಿದ್ದೆ."

— ಅಟ್ಟೀಸ್ ಯೌವನದಿಂದ ಕೂಡಿ ಸಾಫೋಳ ಕಣ್ತುಂಬಿ ಅವಳ ಅಂತರಂಗ ಆಲೋಚನೆಗಳಿಗೆ ಮೂರ್ತ ರೂಪವನ್ನು ಕೊಟ್ಟವಳು. ಅಟ್ಟೀಸಳು ತನ್ನ ಪ್ರೇಮವನ್ನು ತೋಡಿಕೊಂಡು ಸಾಫೋಳಿಗೆ ಒಂದು ಕಾಗದ ಬರೆದಳು:

"ಸಾಫೋ, ನನ್ನಾಣೆ ನಾ ನಿನ್ನ ಪ್ರೇಮಿಸಲಾರೆ ಇನ್ನೆಂದೂ! ಓ, ಎದ್ದೇಳು

ಹಾಸಿಂದ ನಮ್ಮ ಒಳಿತಿಗಾಗಿ. ಬಿಡು ನನ್ನ, ಕುಂದಿಲ್ಲದ ಅಲ್ಲಿ ಹೂ ಸರೋವರದ ದಂಡೆಯ ಮೇಲಿದ್ದಂತೆ. ನಿನ್ನ ರಾತ್ರಿಯಂಡಿಗೆ ಕಳಚು. ಈಜಾಡು ತಿಳಿಗೊಳದಲ್ಲಿ ಸ್ವೇಚ್ಛೆಯಾಗಿ."

ಮಿಥಿಲೇನಿನಲ್ಲಿ ಅಟ್ಟೀಸ್, ಸಾಫೋ ಇವರ ಪ್ರೇಮದ ಸಂಕೇತವಾಗಿ ಅನೇಕ ಪ್ರೇಮಗೀತೆಗಳ ಮಹಾಪೂರವೇ ಹರಿಯಿತು. ಅಟ್ಟೀಸ್ ಕೊನೆಗೂ ಸಾಫೋಗೆ ದ್ರೋಹ ಬಗೆದಳು. ಇದನ್ನು ಕಂಡು ಹೊಟ್ಟೆಕಿಚ್ಚು ತಾಳಲಾರದ ಸಾಫೋ ಪ್ರೇಮ-ಕಾಮಗಳಿಂದ ಹುಚ್ಚಿಯಂತಾದಳು.

ಪ್ರಾಣದೇವನು ನನ್ನ ದೃಷ್ಟಿಯಲ್ಲಿ ಯಾರೆಂದರೆ
ನಿನ್ನ ಬಳಿ ಕುಳಿತು ಕಣ್ಣಲ್ಲಿ ಕಣ್ಣಿಟ್ಟು ಆಲಿಸುತ್ತಾನೆ
ಮತ್ತೂ ಸಮೀಪದಲ್ಲೆ ಅವನ ಸವಿಯಾದ ಮೆಲುದನಿ
ತುಂಬು ಪ್ರೇಮದ ಪಿಸುಮಾತು.

ಈ ನಗೆ, ಎಲ್ಲಾ ಅವನಿಗಾಗಿ ಆದರದು ನನ್ನಂತರಾತ್ಮವನ್ನು ಒಡೆದು
ನನ್ನ ಹೃದಯಾಂತರಾಳವ ಹಿಡಿದು ನಡುಗಿಸಲು
ಒಮ್ಮೆ ನಿನ್ನತ್ತ ನೋಟ ಬೀರಿದಾಗ ನನ್ನ ದನಿ ಉಡುಗಿತ್ತು
ಮಾತನಾಡದೆ ನಾನು ಮೂಕಳಾದೆನು.

ಆಗ ನನ್ನ ಈ ತುಟಿಗಳಿಗೆ ಮೌನಲೇಪಿತವಾಗಿ ನನ್ನ
ತ್ವಚೆಯೊಳದಲ್ಲೆಲ್ಲಾ ಸೂಕ್ಷ್ಮ ಅಗ್ನಿಜ್ವಾಲೆ ವ್ಯಾಪಿಸಲು
ಕಣ್ಣು ಕಾಣದೆ ಸುತ್ತ ಬರೇ ಕತ್ತಲು, ಕಿವಿಯಲ್ಲಿ
ಮೊಳಗಿತ್ತು, ಮಂದ್ರ ಸಿಡಿಲಿನ ನಾದ.

ಬೆವರೊಡೆದು ಹರಿದಿತ್ತು ಜ್ವರ ತಾಪವೇರಿ
ಕಂಪಿಸುತ್ತಿತ್ತು ಈ ದೇಹ ಹುಲ್ಲಿಗಿಂತಲು ಬಳುಚಿ ನಾನು
ನನ್ನಲ್ಲಾದ ಪರಿವರ್ತನೆಗಳೆಲ್ಲಾ ನನ್ನರಿವಿಗೆ ಬರಲು
ಸಾವೆ ಸಮೀಪಿಸಿತೆಂದು ತಿಳಿದುಕೊಂಡೆನು, ಆಗ

ಸಾಫೋಳಿಗೆ ವಿರೋಧಿಯೂ ಪ್ರತಿಸ್ಪರ್ಧಿಯೂ ಆಗಿದ್ದ ಮತ್ತೊಬ್ಬ ಹೆಣ್ಣು ಮಿಥಿಲೇನಿನಲ್ಲಿ ಸಂಗೀತ ಕಾವ್ಯಗಳ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಮುಖ್ಯ ಶಿಕ್ಷಕಿ. ಅವಳ ಹೆಸರು ಆ್ಯನ್‌ಡ್ರೋಮೇಡ. ಅವಳ ಪ್ರೇಮ ಪಾಶಕ್ಕೆ ಅಟ್ಟೀಸ್ ಸಿಕ್ಕಿಬೀಳುತ್ತಾಳೆ. ಆಗ ಸಾಫೋ-

ಆ ಹಳ್ಳಿಗಾಡಿನ ಹೆಂಗಸಿನ ಹಳ್ಳಿ ವೇಷ
ನಿನ್ನ ಮರುಳು ಮಾಡಿ ಹೃದಯ ಗದ್ದಿತು ಹೇಗೆ?
ಮೊಣಕಾಲ ಮೇಲೆ ಬಟ್ಟೆ ಉಡಲೂ ಅರಿಯದ ಮೂಢೆ

ಅಟ್ಟೀಸಳ ಬಗೆಗಿನ ಕುರುಡು ಪ್ರೇಮ ಭಗ್ನಗೊಂಡಾಗ ಮೂಡಿದ ದುರಂತಮಯ ಕವನ

"ಪ್ರೇಮ ನನ್ನ ಹಳವನಾಗಿಸಿತು, ನಡುಗಿಸಿತು. ಆ ಕ್ರೂರಿಯ ಅದೃಷ್ಟ ಸಿಹಿ ಕಹಿಯೂ ಹೌದು. ಆದರೆ ನೀನು ಅಟ್ಟೀಸ್, ಓಡುವೆ ಏಕೆ ಆ್ಯಂಡ್ರಮೀಡಳೊಡನೆ ಬಿಟ್ಟೆನ್ನ ಒಬ್ಬೊಂಟಿ? ಏಕೆನ್ನ ದೂಷಿಸಿ ದ್ವೇಷಿಸುವೆ?"

ಸಾಫೋಳ ಕವನಗಳಲ್ಲಿ ಸಿಹಿ ಕಹಿಗಳ ಮಾಧುರ್ಯದೊಂದಿಗೆ ಅಪಾರ ನೋವಿನ ದುಃಖ ಮಡುಗಟ್ಟಿ ನಿಂತಿದೆ.

"ಓ ನನ್ನ ಪ್ರೇಮವೇ, ನನ್ನ ಮನ ನಡುಗುತ್ತಿದೆ ರುದ್ರ ಬಿರುಗಾಳಿಗೆ ಸಿಕ್ಕ ಓಕ್ ಮರಗಳು ಕೆಡೆದಿಳೆಗೆ ಉರುಳುವಂತೆ."

ಸಾಫೋ ತನ್ನ ಅಪನಂಬುಗೆಯ ಸಂಗಾತಿ ಅಟ್ಟೀಸಳನ್ನು ಕುರಿತು ಕೊನೆಗೆ ಹೀಗೆ ಉದ್ಗರಿಸುತ್ತಾಳೆ. ಇಲ್ಲಿ ಸೂಕ್ಷ್ಮ ನವಿರು ಭಾವನೆಗಳ ಸಮ್ಮಿಲನವನ್ನೇ ಕಾಣಬಹುದು :

"ರೋದಿಸುವಳವಳು ಬಿಟ್ಟಿರಲು ನನ್ನ, ಹೇಳುವಳು ನಾವೆಷ್ಟು ನೊಂದ ವಿರಹಿಗಳೆಂದು, ಸಾಫೋ ನನ್ನಾಣೆ, ನನ್ನಿಚ್ಛೆಯಂತೆ ನಾನಿನ್ನ ತೊರೆದು ಹೋಗುವೆನೆಂದು ತಿಳಿಯದಿರು."

ಆಗ ನಾನೆಂದೆ : "ಹೋಗು ನನ್ನ ತೊರೆದು ದೂರ ಹೋಗು. ನಿನ್ನ ಸುಖಗಳ ನೀನು ಅರಸುವವಳಾಗು. ಆದರೆ ನೆನಪಿರಲಿ, ನಿನಗಾಗಿ ನಾನು ಹೇಗೆ ಪರಿತಪಿಸಿ, ಪ್ರೇಮಿಸಿ ಹುಚ್ಚಳಾದೆನು ಎಂದು. ನಿನಗದರ ನೆನಪಿಲ್ಲದಿದ್ದರೆ ಮತ್ತೆ ನಾನೆ ನೆನಪಿಸುವೆ ಎಂಥ ಸುಂದರ ಪ್ರೇಮ ಜೀವನ ನಮ್ಮದಾಗಿತ್ತು. ಆ ನಿನ್ನ ಕೇಶರಾಶಿಯ ಸೊಬಗಿಗೆ ಗುಲಾಬಿಗಳ ಶೃಂಗಾರ, ಆ ನಿನ್ನ ಕೊಂಕು ಕುತ್ತಿಗೆಗೆ ನೂರೆಂಟು ಹೂಗಳ ನರುಗಂಪ ಹಾರ. ದಿವ್ಯ ಪರಿಮಳದ ಸುಗಂಧ ಲೇಪಿತ ನಿನ್ನ ಕೋಮಲ ಕಾಯ. ನನ್ನಂತ ರಂಗದ ಬೆಚ್ಚನೆಯ ಗೆಳತಿ, ವೈಭವೋಪೇತ ಹಾಸಿನಲಿ, ಸೂಕ್ಷ್ಮ ಕುಸುರಿ ಕಲೆಗಳ ಬೋದಿಗೆಗಳ ಇಕ್ಕೆಲದಲ್ಲಿ ನಡುವೆ ನೀ ಒರಗಿರಲು ನಿನ್ನ ಸಖಿಯರು ಸುತ್ತ. ನಾವು ನೋಡದ ಬೆಟ್ಟ ಪವಿತ್ರ ತೋಪುಗಳಿಲ್ಲ, ನದಿ ಕಾಲುವೆಗಳಿಲ್ಲ. ನವಚೈತ್ರ ಪಲ್ಲವಿಸಿದ ಕಾಡುಗಳ ಎಡೆಯಲ್ಲಿ ಕೋಗಿಲೆಗಳ ಸುಮಧುರ ಮೇಳ ಗಾನಗಳ ಅನುರಣನ. ಹೀಗೆ ನಾನು ನೀನು ಇಬ್ಬರೇ ಅಲೆಯದ ತಾಣಗಳಿಲ್ಲ...."

ಈ ಕವನವನ್ನು ಕ್ರಿ.ಪೂ. 580ರಲ್ಲಿ ಬರೆದದ್ದು. ಆಗ ಸಾಫೋಳಿಗೆ ಮೂವತ್ತೆರಡು ವರ್ಷ. ಹೀಗೆ ಅವಳು ಅಟ್ಟೀಸಳಿಗಾಗಿ ನೊಂದ ನೋವು ಅನುಭವಿಸುವ ಯಾತನೆ ಅಪಾರ.

ಆ ಕಾಲದಲ್ಲಿ ನೃತ್ಯ ಸಂಗೀತಗಳಂತೆ ಸಾಫೋಳ ಸಂಸ್ಥೆಯಲ್ಲಿ ಕಾಮ ಕಲೆಯನ್ನೂ ಬೋಧಿಸಲಾಗುತ್ತಿತ್ತು. ಈ ರೀತಿಯ ಲೈಂಗಿಕ ಶಿಕ್ಷಣ ಪರಿಣತರಾಗಿ ಶೃಂಗಾರ ಕಲೆಯಲ್ಲಿ ಪ್ರವೀಣರಾಗಿ ತಮ್ಮ ಪ್ರಿಯಕರರೊಂದಿಗೆ ಆ ಹೆಣ್ಣುಗಳು ಬೆರೆಯುತ್ತಿದ್ದರು.

ಹೆಣ್ಣು ಹೆಣ್ಣಿನೊಡನೆ ಕೂಡುವ ಸಲಿಂಗಕಾಮ ಸಾಫೋ ಹಾಗೂ ಅವಳ ಗೆಳತಿಯರ ನಡುವೆ ಇದ್ದಿತೇ ಎಂಬ ವಿವಾದದ ಕಾರಣ ಅವಳ ಸುತ್ತ ಸದಾಕಾಲ ಕಟ್ಟುಕತೆಗಳು ಹರಡುತ್ತಿದ್ದವು. ಅವಳ ವೈಯಕ್ತಿಕ ಜೀವನ ಹೇಗೇ ಇದ್ದಿರಲಿ ಅದರಿಂದ ಬಂದ ಅನುಭವ ಸಂಪತ್ತು ದೊಡ್ಡದು. ಅವಳ ಕಾವ್ಯಕ್ಕೆ ಯಾರೂ ಸರಿಸಾಟಿಯಿಲ್ಲದಂಥ ಅಪ್ರತಿಮ ಕವಯತ್ರಿ ಸಾಫೋ.

ಮದುವೆಯ ಸಂದರ್ಭಗಳಲ್ಲಿ ಶ್ರೀಮಂತ ವಧೂವರರು ತಮ್ಮ ಶೋಬನಕ್ಕಾಗಿ 'ಶೋಬನದ ಒಸಗೆ'ಗಳನ್ನು ಕಟ್ಟಿ ಹಾಡಲು ಸಾಫೋಳನ್ನು ಕರೆಸಿಕೊಳ್ಳುತ್ತಿದ್ದರು. ಇದು ಒಂದು ಸಾಮಾಜಿಕ ಪದ್ಧತಿಯೂ ಆಗಿದ್ದಿತು. ವಿವಾಹದ ರಾತ್ರಿ ಹೆಣ್ಣನ್ನು ಪ್ರಸ್ಥದ ಕೋಣೆಗೆ ನೂಕಲಾಗುತ್ತಿತ್ತು. ಅಲ್ಲಿ ವರನು ಮೈಗೆಲ್ಲಾ ಎಣ್ಣೆ ಲೇಪಿಸಿಕೊಂಡು ಕಾದು ಕುಳಿತಿರುತ್ತಿದ್ದನು. ವರನು ವಧುವನ್ನು ಕೂಡಿದ ನಂತರವಷ್ಟೆ ವಿವಾಹ ಪೂರ್ಣವಾಯಿತು ಎಂದು ವರನು ಜಾಹೀರು ಪಡಿಸುತ್ತಿದ್ದನು. ಆಗ ವಧುವಿನ ಕಡೆಯ ಹೆಣ್ಣುಮಕ್ಕಳು ಶೋಬನದ ಹಾಡುಗಳನ್ನು ಹಾಡುತ್ತಿದ್ದರು. "ಹರುಷ ಉಕ್ಕುವ ಗಂಡೆ ನಿನ್ನ ಪ್ರಾರ್ಥನೆಯಂತೆ ಸಂಗಸುಖವನಿತ್ತು ನಿನ್ನಾಸೆ ಪೂರೈಸಿದ ವಧು ನಿನಗೆ ದೊರಕಿದಳು." ಇತಿಹಾಸಕಾರರು ಉಲ್ಲೇಖಿಸಿದ ಸಂಪ್ರದಾಯಗಳೂ, ಪದ್ಧತಿಗಳೂ ಸಾಫೋ ರಚಿಸಿದ 'ಮದುವೆಯ ಹಾಡು'ಗಳಲ್ಲಿ ಕಾಣಬಹುದಾಗಿದೆ. ಅಷ್ಟೇ ಅಲ್ಲ, ಆಕೆ ಇಡೀ ಮದುವೆಯನ್ನೇ ನಿರ್ವಹಿಸುವಂಥ ಮದುವೆಯ ಸ್ತೋತ್ರದಂಥ ಹಾಡುಗಳನ್ನೂ ರಚಿಸಿದ್ದಾಳೆ.

ಸಾಫೋ ಕಾಲದಲ್ಲಿ ಹೆಣ್ಣುಮಕ್ಕಳು ಮಾಡಿಕೊಳ್ಳುತ್ತಿದ್ದ ಮುಖದ ಅಲಂಕರಣ ಇಂದಿನ ನವೀನ ಶೈಲಿಯ ಅಲಂಕರಣದಂತೆಯೇ ಇದೆ. ಕಣ್ಣಿಗೆ ಕಾಡಿಗೆ, ಕೆನ್ನೆಗೆ ಗುಲಾಬಿ ರಂಗು, ತುಟಿಗೆ ಕೆಂಬಣ್ಣ. ಮೇಲೆತ್ತಿ ಕಟ್ಟಿದ ಕೇಶ ಶೃಂಗಾರ, ತಿದ್ದಿ ತೀಡಿದ ಕುರುಳು—ಹೀಗೆ ಕುಶಲಕರ್ಮಿಗಳಂತೆ ಶೃಂಗರಿಸಿಕೊಂಡ ಅಂದಿನ ಹೆಣ್ಣುಗಳು ಅಲಂಕಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರು. ಅಂದಿನ ಉಡುಪುಗಳು ಆಕರ್ಷಕ ವಿನ್ಯಾಸಗಳಿಂದ ಕೂಡಿತ್ತು. ಮೂಳೆ, ಲೋಹ, ದಂತಗಳಿಂದ ಮಾಡಿದ ಹೇರ್ ಪಿನ್ನುಗಳು, ದಂತದ, ಮರದ ಕೆತ್ತನೆಯ ಕೆಲಸ ಮಾಡಿದ ಹೆಣಿಗೆಗಳು, ಸುಗಂಧ ದ್ರವ್ಯದ ಮಡಕೆಗಳು—ಇವು ಚಿತ್ತಾರ ಕುಸುರಿ ಕೆಲಸಗಳಿಂದ ಶೋಭಿಸುತ್ತಿತ್ತು. ಇನ್ನು ಊಟದ ತಿನಿಸುಗಳೆಂದರೆ ಎಲ್ಲಾ ಪ್ರಾಣಿ ಪಕ್ಷಿಗಳ ರುಚಿಕಟ್ಟಾಗಿ ತಯಾರಿಸಿದ ಮಾಂಸದ ತಿನಿಸುಗಳು. ಕೆಲವು ತರಕಾರಿಗಳು. ಅಂಜೂರ, ಸೇಬು, ಖರ್ಜೂರ ಮುಂತಾದ ಹಣ್ಣುಗಳನ್ನೂ ಬಳಸುತ್ತಿದ್ದರು. ಆಲಿವ್ ಎಣ್ಣೆ, ಜೇನುತುಪ್ಪಗಳನ್ನೂ ಬಳಸುತ್ತಿದ್ದರು, ಸಿಲ್‌ವಿಯಮ್ ಎಂಬ ಗಿಡದ ತೊಗಟೆಯಿಂದ ತಯಾರಿಸಿದ ರಸವನ್ನು ಸೇವಿಸುತ್ತಿದ್ದರು. ಸಿಸೇಮ್ ಎಂಬ ಮಧುರ ಪೇಯವನ್ನೂ ಕುಡಿಯುತ್ತಿದ್ದರು. ಗೋಧಿ, ಬಾರ್ಲಿ, ಬ್ರೆಡ್‌ಗಳೇ ಅವರ ಮುಖ್ಯ ಆಹಾರವಾಗಿದ್ದಿತು. ಲೆಸ್‌ಬಾಸ್‌ನಲ್ಲಿ ಸಿಗುತ್ತಿದ್ದ ದ್ರಾಕ್ಷಾ

ಮದ್ಯ ಹೆಸರುವಾಸಿಯಾಗಿದ್ದಿತು. ಅದಕ್ಕಾಗಿ ಅಕ್ಕಪಕ್ಕದಲ್ಲಿದ್ದ ದ್ವೀಪವಾಸಿಗಳು ಏಜಿಯನ್ನರು ಈ ಮದ್ಯವನ್ನು ಕೊಂಡೊಯ್ಯುತ್ತಿದ್ದರು. ನೀರಿಗೆ ಮದ್ಯ ಹಾಕುತ್ತಿರಲಿಲ್ಲ. ಸಂತೋಷ ಕೂಟಗಳಲ್ಲಿ ಬಂದ ಅತಿಥಿಗಳು ತಮ್ಮ ಬಲಭಾಗದ ಬದಿಯಲ್ಲಿ ನಗ್ನ ಪ್ರೇಯಸಿಯನ್ನು ಕುಳ್ಳಿರಿಸಿಕೊಂಡು ನಾದ ಮಾಧುರ್ಯ ಸವಿಯುತ್ತಾ ವಿವಿಧ ಮನರಂಜನೆಗಳನ್ನು ನೋಡಿ ಆನಂದಿಸುತ್ತಿದ್ದರು. ಜಾದೂ ಪ್ರದರ್ಶನ, ಕೋಡಂಗಿ ಕುಣಿತ, ಕೊನೆಯಲ್ಲಿ ಅಶ್ಲೀಲವಾಗಿ ವೇಷ ಭೂಷಣ ಧರಿಸಿಕೊಂಡ ತರುಣಿಯರ ಸಾಮೂಹಿಕ ನೃತ್ಯ–ಹೀಗೆ ಕಾರ್ಯಕ್ರಮಗಳು ಕೊನೆಗೊಳ್ಳುತ್ತಿತ್ತು.

ಸಾಫೋಳಿಗೆ ಪ್ರೇಮದೇವತೆಯಾದ ಆಫ್ರೋದಿತೆಯೇ ಸ್ಫೂರ್ತಿಯ ಸೆಲೆಯಾಗಿದ್ದಳು. ಕವನಗಳ ಪ್ರೇರಕ ಶಕ್ತಿಯಾಗಿದ್ದಳು. ಅವಳ 'ಓಡ್ ಟು ಆಫ್ರೋದಿತೆ' ಎಂಬ ಒಂದೇ ಒಂದು ಪದ್ಯ ನಮಗೆ ಸಂಪೂರ್ಣವಾಗಿ ದೊರೆತಿದೆ ಎಂದು ಅಗಸ್ಟಸ್ ಸಾಮ್ರಾಜ್ಯದಲ್ಲಿದ್ದ ರೋಮನ್ ಇತಿಹಾಸಕಾರನು ಹೇಳುತ್ತಾನೆ.

ಕ್ರೇಟಿಯಿಂದ ಬಾ ನನ್ನ ಬಳಿಗೆ, ಈ ಪವಿತ್ರ ದೇಗುಲ
ಆಫ್ರೋದಿತೆಯಲ್ಲಿಗೆ ಸೇಬುಮರಗಳ ತೋಪು
ನಿನ್ನ ಹರ್ಷಗೊಳಿಸುವುದು, ಈ ಪವಿತ್ರ ಪೀಠದತ್ತ
ಹೊಗೆಯು ನರುಗಂಪು.

ಇಲ್ಲಿ ಶೀತಜಲ ಇಳಿದು ಕೆಳಗೆ ಸೇಬುಮರಗಳ
ರೆಂಬೆಯಿಂದ ನೆರಳು ಕವಿದು ಹುಲ್ಲುಹಾಸೆಲ್ಲ ಕಪ್ಪು,
ಗುಲಾಬಿ ಹೂ, ಎಲೆಗಳ ತಳದಲ್ಲಿ ನಿಂತ ಹನಿ ಕಂಪಿಸುತ
ನಿದ್ರಿಸುವ ಮರುಳ ಮೋಹಕ ನೋಟ.

ಹರಿದ ನೀರಿನ ಮೇಲೆ ನೆರಳುಗಳ ಚಿತ್ತಾರ
ಕುದುರೆಗಳು ಮೇಯುವಲ್ಲಿ ಹೂವರಳಿ ಸುಗ್ಗಿ
ಅರೆಬಿರಿವ ನಸೆಯುಮೇಲಣ ಸುಳಿಗಾಳಿ ಸುಳಿದು
ಬೀಸುತಿದೆ ಅಹ್ಲಾದ ಮಂದಗಾಳಿ

ಈ ತಾಣದಲ್ಲಿ ಹೆಣ್ಣುಗಳ ಒಡತಿ ಸೈಪ್ರಸ್ ಮೆಲ್ಲನೆ
ಮೇಲೆತ್ತಿ ಹಿಡಿದ ಹೊನ್ನ ಮಧುಬಟ್ಟಲು
ಉತ್ಸಾಹದ ಉತ್ಸವಕ್ಕಾಗಿ ಈ ಮಧುರ
ದ್ರಾಕ್ಷಾಮದ್ಯ ನಮಗೆರೆದು ಕುಡಿಸುವಳು

ಈ ಪದ್ಯ ಪ್ರೇಮದೇವತೆ ಆಫ್ರೋದಿತೆಯನ್ನು ಕುರಿತ ಪ್ರಾರ್ಥನಾ ಪದ್ಯ. ಅಟ್ಟೀಸ್ ಳಿಂದ ನಿರಾಶೆ ಭಗ್ನಪ್ರೇಮಗಳನ್ನು ಮರೆಯಲು ಸಾಫೋ ಮತ್ತೊಬ್ಬ ಸುಂದರಿಯ

ಗೆಳೆತನ ಬೆಳೆಸುತ್ತಾಳೆ. ಅವಳ ಹೆಸರು ಗಾಂಗ್ಲಿಯು. ಅವಳು ಹೊಸದಾಗಿ ಸಾಫೋಳ ಸಂಸ್ಥೆ ಸೇರಿದವಳು. ಅವಳನ್ನು ಕುರಿತು ಸಾಫೋ "ಇಲ್ಲೇ ಇರು ಈ ರಾತ್ರಿ ನನ್ನೊಡನೆ ನನಗೆ ನೀನೆ ಉಸಿರು. ಬಾ, ಗಾಂಗ್ಲಿಯು, ಗುಲಾಬಿ ಮೊಗ್ಗೆ, ನಿನ್ನ ನವಿರು ಬಟ್ಟೆ ತೊಟ್ಟು ಬಾ. ಓ ಚೆಲುವೆ, ನಿನ್ನ ಸಂತೃಪ್ತಿ ನನ್ನ ಪ್ರೇಮ ಸಂತೃಪ್ತಿದೆ. ಓ ಸುಂದರಿ, ನಿನ್ನ ರೂಪು ವೇಷಗಳೇ ನನ್ನ ರೋಮಾಂಚಗೊಳಿಸುತಿದೆ."

ಈ ಸಂದರ್ಭದಲ್ಲಿ ಸಾಫೋಳು ನಲವತ್ತು ವರ್ಷದ ಪ್ರೌಢೆ. ಮುಪ್ಪಿಗೆ ಅಂಜುವ ಅವಳು ತನ್ನ ಚೆಲುವ ಗೆಳತಿಯರನ್ನು ಕುರಿತು "ಅಹಾ ಹೆಣ್ಣುಗಳೇ, ನಾನು ಈ ಸುಖಗಳಿಂದ ಪಾರಾಗಬಲ್ಲೆನೆ?" ಎಂದು ಪ್ರಶ್ನಿಸುತ್ತಾಳೆ. ಸಾಫೋ ತನ್ನ ಸಂಗೀತ, ನೃತ್ಯ, ಕಾವ್ಯದಲ್ಲೇ ಮಗ್ನಳಾಗಿರಲು ಒಂದು ಘಟನೆ ನಡೆಯಿತು. ಆಗ ಸಾಫೋಗೆ ನಲವತ್ತಾರು ವರ್ಷ. ಅವಳ ತಮ್ಮ ಚರಕ್ಸಸ್‌ನಿಗೆ ನಲವತ್ತನಾಲ್ಕು ವರ್ಷ. ಕ್ಸ್ಯಾಂಟಸ್ ಎಂಬ ಶ್ರೀಮಂತ ವರ್ತಕನಲ್ಲಿ ಸೇವಕಿಯಾಗಿದ್ದ ರೋಡೊಪಿಸ್ ಎಂಬ ಯುವತಿಯಲ್ಲಿ ಚರಕ್ಸಸ್ ಅನುರಕ್ತನಾದ. ರೋಡಿಪಿಸ್ ಎಂದರೆ ಗುಲಾಬಿ ಎಂಬರ್ಥ. ಆಗ ಆಕೆಗೆ ಮೂವತ್ತು ವರ್ಷ. ಅವಳನ್ನು ಶ್ರೀಮಂತ ವರ್ತಕನಿಂದ ಹಣ ಕೊಟ್ಟು ಬಿಡಿಸಿಕೊಂಡು ತಾನು ವಿವಾಹವಾಗಬಯಸಿದ. ಸಾಫೋ ಇದನ್ನು ಉಗ್ರವಾಗಿ ಪ್ರತಿಭಟಿಸಿದಳು. ಗುಲಾಮ ಹೆಣ್ಣಿನ ಸಂಬಂಧ ತಮ್ಮ ಗೌರವಕ್ಕೆ ಕುಂದು, ಆ ಹೆಣ್ಣು ಸಾರ್ವಜನಿಕರ ಸೊತ್ತು. ಆ ಚೆಲುವೆಗೆ ಮೋಸ ಹೋಗದಿರು ಎಂದು ಪತ್ರ ಬರೆದಳು. ಅಕ್ಕ ಸಾಫೋಳ ಮಾತಿಗೆ ಮಣಿಯದೆ ಚರಕ್ಸಸ್ ಆ ಗುಲಾಮ ಹೆಣ್ಣನ್ನು ಕಟ್ಟಿಕೊಂಡು ಸಮುದ್ರ ದಾಟಿ ಹೊರಟು ಹೋದ. ಇದರಿಂದ ನೊಂದ ಸಾಫೋ—

"ಮುಂದು ಎಂದಾದರೊಂದು ದಿನ ಅವ ಬಂದೇಬರುವನು. ತನಗೆ ತಕ್ಕ ಗೌರವಾನ್ವಿತ ಯುವತಿಯ ವರಿಸುವನು. ಆದರೆ ಹೆಣ್ಣುನಾಯಿ ನೀನು ಇರುವತನಕ ಕಪ್ಪವೇ. ನೀನು ನೆಲಕ್ಕೆ ಬಿದ್ದು ಮಣ್ಣುಮುಕ್ಕುತ್ತಾ ಬೇರೆಯವರ ಬೇಟೆಗೆ ಹೋಗುವ ತನಕ ಕಾಯಬೇಕು."

ಮುಂದೆ ರೋಡಿಪಿಸ್ ಸಾಫೋಳ ತಮ್ಮನೊಂದಿಗೆ ಬಹಳ ಕಾಲ ಬಾಳಲಿಲ್ಲ. ಜಾರೆಯಾದ ಅವಳು ಮತ್ತೂ ಶ್ರೀಮಂತರನ್ನು ಹುಡುಕಿ ಹೊರಟಳು. ಅಂದಿನ ಕಾಲಕ್ಕೆ ನಾಯಕಸಾನಿಯೇ ಆದಳು. ಕೆಲ ಕಾಲಾನಂತರ ಸತ್ತು ಐತಿಹಾಸಿಕ ಕಥಾವಸ್ತು ವಾದಳು. ಅವಳ ಆತ್ಮ ಡೆಲ್ಫಿ ದೇಗುಲ ಸೇರಿತು ಎಂಬ ಐತಿಹ್ಯವಿದೆ.

ಸಾಫೋಳ ಕೊನೆಯ ಪ್ರೇಮ ಪ್ರಕರಣ ಆಕೆಯ ಐವತ್ತೈದನೆಯ ವಯಸ್ಸಿನಲ್ಲಿ ನಡೆಯಿತು. ಅದೊಂದು ವಿಚಿತ್ರ ಪ್ರೇಮ. ಕ್ರಿ.ಪೂ. 557. ಆಗ ಸಾಫೋ ಜೀವನ ದಲ್ಲಿ ವಿಶೇಷ ಆಸಕ್ತಿ ಉಳ್ಳವಳು. ಒಬ್ಬ ತರುಣ ನಾವಿಕನನ್ನು ಸಂಧಿಸಿದಳು. ಆತನ ಹೆಸರು ಫಾಯನ್. ಲೆಸ್‌ಬಾಸ್‌ನ ಸಮುದ್ರಮಧ್ಯದಲೂ ಚಿಕ್ಕ ನೌಕೆಯನ್ನು ಬಾಡಿಗೆಗೆ

ಹಿಡಿದು ಅಲೆದಾಡುತ್ತಿದ್ದ ಚೆಲುವ. ಅನೇಕ ಸುಂದರ ಸ್ತ್ರೀಯರನ್ನು ಆಕರ್ಷಿಸುತ್ತಿ ಅನೇಕ ಕಟ್ಟುಕತೆಗಳಿಗೆ ವಸ್ತುವಾಗಿದ್ದಾತ. ಪ್ರೇಮದೇವತೆಯೇ ಬಂದು ಅವನಿಗೆ ಮಾಂತ್ರಿಕ ಪೋಷಕಾನ್ನು ಕೊಡಿಸಿರುವುದರಿಂದ ಆತನು ಅಷ್ಟು ಸುಂದರ ಎಂದು ಕರೆಸಿಕೊಳ್ಳುತ್ತಿದ್ದಾತ. ಯಾರದೋ ಹೆಂಡತಿಯನ್ನು ಪ್ರೇಮಿಸುತ್ತಿದ್ದಾಗ ಸಿಕ್ಕಿಬಿದ್ದು ಕೊಲೆಗೀಡಾದನು. ಅವನ ಮರಣದ ಸುದ್ದಿಯನ್ನು ಕೇಳಿದ ಸಾಫೋ "ಬೇರುಬಿಟ್ಟ ಮರದಂತೆ ನಿಶ್ಚಲಳಾಗಿ ನಿಂತು ಬಿಳುಚಿ ಮೂಕಿಯಾದಳು". ಅಪಾರ ದುಃಖ ಸಾಗರದಲ್ಲಿ ಮುಳುಗಿ ಹುಚ್ಚಿಯಂತೆ ರೋಧಿಸಲು ತೊಡಗಿದಾಗ ಆಕೆಯ ತಮ್ಮ ಸಮಾಧಾನಪಡಿಸುತ್ತಾ ನೀನು ಒಬ್ಬಂಟಿಯಲ್ಲ ನಿನಗೆ ಮಗಳಿದ್ದಾಳೆ. ಮುದಿವಯಸ್ಸಿನಲ್ಲಿ ಆಸರೆಯಾಗುತ್ತಾಳೆ ಎಂದಿದ್ದನು. ಮುಂದೆ ಆ ಮಗಳೂ ತಾಯಿಯಿಂದ ದೂರವಾದಳು. ಫಾಯಿನ್‌ನ ಕನಸಿನಲ್ಲೇ ಲೀನಳಾದ ಸಾಫೋ ಆತನ ಬಗ್ಗೆ ಅನೇಕ ಕವನಗಳನ್ನು ರಚಿಸಿದಳು.ಫಾಯಿನ್‌ನ ಕನಸಿನಲ್ಲೇ ಆತನೊಂದಿಗೆ ಹೊರಟ ಸ್ಥಳಗಳಿಗೆಲ್ಲಾ ಮತ್ತೊಮ್ಮೆ ಭೇಟಿ ಕೊಡುತ್ತಾ ನದಿ, ಬೆಟ್ಟ, ಕಾಡುಗಳಲ್ಲಿ ಅಲೆಯುತ್ತಾ ತಾವು ನಡೆದ, ಮಲಗಿದ ಜಾಗಗಳನ್ನೆಲ್ಲಾ ಚುಂಬಿಸುತ್ತಾ ಮರುಳಂತಾದಳು. ಆತನಿಲ್ಲದೆ ಜೀವನ ಅರ್ಥಹೀನ ಎನಿಸಿತು. ಆತನ ಕನಸಿನಲ್ಲೇ ಸಿಸಿಲಿಗೆ ಪ್ರಯಾಣ ಬೆಳೆಸಲು ನಿರ್ಧರಿಸಿದಾಗ ಸಾಫೋಳ ಗೆಳತಿಯರೂ ಸೋದರರೂ ತಡೆದರು. ಆದರೂ ಕೇಳದ ಅವಳು ಪ್ರಯಾಣ ಕೈಗೊಂಡಳು. ಈ ವೇಳೆಗೆ ಅವಳ ಕಾವ್ಯಾಗ್ನಿಯೂ ತಣ್ಣಗಾಗಿತ್ತು.

ಅವಳು ನೌಕಾಯಾನವನ್ನು ಕೈಗೊಂಡು ಸಿಸಿಲಿಗೆ ಹೋಗುವ ಮಾರ್ಗಮಧ್ಯ ಕಾರಿಂಥ್ ದ್ವೀಪಕ್ಕೂ, ಲ್ಯೂಕಾಸ್ ದ್ವೀಪಕ್ಕೂ ನಡುವೆ ಒಂದು ಎತ್ತರದ ಬಿಳಿಯ ಕೋಡುಗಲ್ಲು ಇಂದಿಗೂ ಭಗ್ನಪ್ರೇಮದ ಸಂಕೇತವಾಗಿ ನಿಂತಿದೆ. ಸಮುದ್ರದ ನಡುವೆ ಬೃಹತ್ತಾಗಿ ಬೆಳೆದುನಿಂತ ಈ ಬಿಳಿಯ ಶಿಲೆ ಸಾಫೋ ಏರುತ್ತಾ ಹೋದಳು. ಹೃದಯ ಒಡೆದು ಪಲಾಯನ ಮಾಡುತ್ತಿರುವ ಪ್ರೇಮಿಯವಳು. ಮೇಲೇರಿ ಕೋಡುಗಲ್ಲಿನ ತುತ್ತತುದಿಯಿಂದ ಒಮ್ಮೆಗೇ ಧುಮ್ಮಿಕ್ಕಿ ವಿಸ್ತಾರ ನೀಲ ಸಮುದ್ರದಲೆಗಳಲ್ಲಿ ಸೇರಿ ಹೋದಳು. (ಸಾಫೋ ಎಂದರೆ ನೀಲ, ನೀಲಮಣಿ ಎಂದೂ ಅರ್ಥವಿದೆ). ಹೀಗೆ ಆತ್ಮಹತ್ಯೆ ಮಾಡಿಕೊಂಡ ಸಾಫೋಳ ಪಾರ್ಥಿವ ಶರೀರವನ್ನು ದಹಿಸಿ ಅವಳ ಚಿತಾಭಸ್ಮವನ್ನು ಅವಳ ತವರೂರಾದ ಮಿಥಿಲೇನಿಗೆ ತಂದು ಅದನ್ನಲ್ಲಿ ಸಮಾಧಿ ಮಾಡಲಾಯಿತು. "ಲ್ಯೂಕಾಡಿಯಸ್ ಕೋಡುಗಲ್ಲಿಂದ ಪ್ರೇಮದ ಮತ್ತೇರಿ ಚಿಮ್ಮಿ ನೆಗೆದಳು ಬಿಳಿ ನೊರೆ ತರಂಗಗಳ ನಡುವ" ಎಂದು ಕೆಲವು ಕವಿಗಳು ಕವನ ಕಟ್ಟಿ ಹಾಡಿದರು.

ಗ್ರೀಕ್ ಇತಿಹಾಸದ ಹಿನ್ನೆಲೆಯಲ್ಲಿ ನೋಡಿದಾಗ ಮುಂದೆ ಅಥೆನ್ಸಿನ ನಾಟಕಕಾರರು ಅವಳ ಜೀವನ ಕುರಿತ ನಾಟಕಗಳನ್ನು ಪ್ರದರ್ಶಿಸಿದರು. ಇಂಗ್ಲಿಷ್ ಕವಿ

ಟೆನಿಸನ್ ಹಾಗೂ ಸ್ವಿನ್‌ಬರ್ನ್ ಸಾಫೋಳ ಕವನಗಳನ್ನು ಅನುವಾದಿಸಿದ್ದಾರೆ. ಐವನ್ ಬ್ರೌನ್ ಎಂಬಾತ ತನ್ನ 'ಡಾರ್ಕ್ ಲೇಡೀಸ್' ಎಂಬ ಪುಸ್ತಕದಲ್ಲಿ ಸಾಫೋಳ ವ್ಯಕ್ತಿತ್ವವನ್ನು ರೋಚಕವಾಗಿ ದುಷ್ಟ ಹೆಂಗಸೆಂಬಂತೆ ಚಿತ್ರಿಸಿದ್ದಾನೆ. ಅವಳ ಹೆಚ್ಚಿನ ಕವನಗಳು ಹೆಣ್ಣನ್ನು ಕುರಿತದ್ದಾಗಿದೆ. ಇಂಗ್ಲಿಷರ ಕಾನೂನು ಗಂಡು ಸಲಿಂಗ ಕಾಮಿಗಳ ಬಗ್ಗೆ ಶಿಕ್ಷಣ ಕಾನೂನು ಕ್ರಮ ಜರುಗಿಸುವಂತೆ ಹೆಣ್ಣು ಹೆಣ್ಣುಗಳ ನಡುವಿನ ಅನೈತಿಕ ಸಂಪರ್ಕವನ್ನು ಕುರಿತು ಯಾವ ಕಠಿಣ ಕ್ರಮವನ್ನೂ ಕೈಗೊಂಡಿಲ್ಲ. ಇಂಥ ವಿಕೃತ ಕಾಮ ಚಿತ್ರಣದ ದೃಶ್ಯಗಳನ್ನು ನಾಟಕಗಳಲ್ಲೂ, ಪರದೆಯ ಮೇಲೂ ಪ್ರದರ್ಶಿಸಲು ನಿಷೇಧಿಸಲಾಗಿತ್ತು ಎಂಬುದು ರ್‍ಯಾಡಿಕ್ಲಿಫ್ ಹಾಲ್ಸ್‌ಬುಕ್ ಎಂಬ ಪುಸ್ತಕದಿಂದ ತಿಳಿದು ಬರುತ್ತದೆ.

ಸಾಫೋ ತನ್ನ ಕಾಲದಲ್ಲಿ ರಚಿಸಿದ ಕವನಗಳನ್ನು ಸಾಫಿಕ್ ಸ್ಟಾಂಜ ಎಂದು (ಎರಡು ಗುರು, ಒಂದು ಲಘು) ಕರೆಯುತ್ತಾರೆ. ಅದು ನಾಲ್ಕು ಸಾಲಿನ ಪದ್ಯ, ಮೊದಲ ಮೂರು ಸಾಲು ಉದ್ದವಾಗಿಯೂ ಕೊನೆಯ ಸಾಲು ಚಿಕ್ಕದಾಗಿರುತ್ತದೆ. ಛಂದೋ ಪ್ರಯೋಗಗಳಲ್ಲಿ ಪರಿಣತಿ ಹೊಂದಿದ್ದ ಅನೇಕ ಛಂದೋಪ್ರಯೋಗಗಳನ್ನು ತನ್ನ ಕವನಗಳಲ್ಲಿ ಮಾಡಿದ್ದಾಳೆ. ಅವಳು ಅನೇಕ ತನಿಗೀತೆ (monodies)ಗಳನ್ನು ಹಾಡಿದಂತೆ ತಿಳಿದುಬರುತ್ತದೆ. ಸಾಫೋ ಒಟ್ಟು ಒಂಬತ್ತು ಪುಸ್ತಕಗಳನ್ನು ಬರೆದಂತೆ ತಿಳಿದುಬರುತ್ತದೆ. ಒಟ್ಟು 12,000 ಸಾಲುಗಳು ಬರವಣಿಗೆ ಇದ್ದರೂ ನಮಗೆ ದೊರಕಿರುವುದು 600 ಸಾಲುಗಳು ಮಾತ್ರ. ಅವಳ ಕಾವ್ಯ ಕ್ರಿಶ್ಚಿಯನ್ ಚರ್ಚಿನ ಅವಕೃಪೆಗೆ ಪಾತ್ರವಾಗಿ ಅವರು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಅವಳ ಎಲ್ಲ ಕೃತಿಗಳನ್ನೂ ಸುಟ್ಟು ಹಾಕಿದರು. ಈ ದಹನ ಕಾರ್ಯ ನಡೆದದ್ದು 380 ಎ.ಡಿ. ಬಳಿಕಯಿಂದ ಪಾರಾಗಿ ಉಳಿದ ಮತ್ತೂ ಕೆಲವು ಕವನಗಳನ್ನು ಪೋಪ್ ಗ್ರಿಗರಿ 1015ರಲ್ಲಿ ಇನ್ನೊಮ್ಮೆ ಸುಟ್ಟು ಹಾಕಿದ. ಇತಿಹಾಸಕಾರರು ಸಾಫೋಳ ಕವನಗಳ ಶೋಧನೆಯಲ್ಲಿ ತೊಡಗಿದಾಗ ಅವಳು ಬರೆದ ಕವನಗಳ ಕಾಗದದ ತುಣುಕಿನ ಪ್ರತಿಗಳು ಶವಪೆಟ್ಟಿಗೆಯನ್ನು ಅಲಂಕರಿಸಿ ಮುಚ್ಚಲಾಗಿದ್ದು ಆ ಪೆಟ್ಟಿಗೆಗಳು ಸಮಾಧಿಯಲ್ಲಿ ದೊರೆತಿವೆ.

ಅವುಗಳು ಎಷ್ಟಾದರೂ
ಉಸಿರಾಡುವ ಶಬ್ದಗಳು
ನನ್ನ ಆಣತಿಯಂತೆ
ಆದರೂ ಅವು ಶಾಶ್ವತ

ಹೀಗೆ ಕವನಗಳ ಬಗ್ಗೆ ಸಾಫೋ ಹೇಳಿರುವ ಮಾತು ಸಾರ್ವಕಾಲಿಕ ಸತ್ಯದ ಮಾತಾಗಿದೆ. ಗ್ರೀಕ್ ದೇಶದ ಆದಿಕವಯತ್ರಿ ಧೀಮಂತ ಕವಯತ್ರಿ ಸಾಫೋ ಇಂದಿಗೂ ಕಾವ್ಯರಸಿಕರ ಮನವನ್ನು ಸೂರೆಗೊಳ್ಳುತ್ತಾಳೆ. ●

ಕನಸಿಗೊಂದು ಕಣ್ಣು

ಗರ್ವ್ ಸೆ ಕಹೋ (ಓಂ) ಹಮ್ ಹಿಂದೂ ಹೈ
ಸಬ್ ಕೆ ಮಾಲಿಕ್ ಏಕ್ ಹೈ

ರಾತ್ರಿ ಹನ್ನೊಂದೂವರೆಯಾಗಿತ್ತು. ಮುಂಬಯಿ ಪೂರ್ತಿ ಮಲಗಿರಲಿಲ್ಲ. ಅಂತರಂಗದಲ್ಲಿ ನಾನಾ ರೀತಿಯ ವ್ಯವಹಾರಗಳನ್ನು ಮಲಗಿಯೇ ಮಾಡುತ್ತಿತ್ತು. ಆದರೆ ಮೊದಲಬಾರಿಗೆ ಮುಂಬಯಿಗೆ ಹೋದವನಾದ್ದರಿಂದ ಎಲ್ಲವೂ ಕುತೂಹಲವಾಗಿ ಕಾಣುತ್ತಿತ್ತು. ಯಾಕೆಂದರೆ ಮುಂಬಯಿ ಭಾರತದ ಮನಸ್ಸಿನ ಮಾರುಕಟ್ಟೆಯಾಗಿದ್ದರಿಂದ, ನಮ್ಮ ನಡುವಿನ ಕುಲಗೆಟ್ಟ ನಾಗರಿಕತೆ ಇಂಥ ಕೇಂದ್ರಗಳನ್ನು ಮಾದರಿಯನ್ನಾಗಿಟ್ಟುಕೊಂಡು ಸಾಗುತ್ತದೆ. ಇಲ್ಲಿ ಬಾಳಾಠಕ್ರೆಯಿಂದ ಹರ್ಷದ್ ಮೆಹ್ತಾತನಕ ಇದ್ದು; ಇದರ ಮಧ್ಯೆಯ ಜೀವಗರ್ಭವನ್ನು ವಿಷಮಯವಾಗಿ ಮಾಡುವ ನಡಾವಳಿಗೆ ಪೈಪೋಟಿ ಇರುತ್ತದೆ. ಇಂಥದರ ನಡುವೆ ಬದುಕಬೇಕೆನ್ನುವ ಜನ; ಇಲ್ಲಿ ನಮಗೆ ಬೇರೊಂದು ಮಾರ್ಗವಿಲ್ಲದವರು ಎಂದು ಸಾಗುತ್ತಲೇ ಇರುತ್ತಾರೆ. ಕೇಳಿದರೆ ಹೌದು ನಮ್ಮದು ಯಾಂತ್ರಿಕ ಬದುಕು ಎಂದು ನಿಟ್ಟುಸಿರು ಬಿಡುತ್ತಾರೆ.

ಎಲ್ಲೆಲ್ಲೂ ಧೂಳು ತುಂಬಿದೆ. ಕಪ್ಪುಗೊಂಡ ಹೊಗೆಯ ಕಣಗಳು, ಒಂದೇ ತಳಪಾಯದ ಮೇಲೆ ಅತಂತ್ರವಾಗಿ ನಿಂತ ವಿಚಿತ್ರ ಕುಟುಂಬಗಳು. ಸಂಸ್ಕೃತಿಯ ಪಳಿಯುಳಿಕೆಗಳು ಗೋಚರಿಸದ ನೆಲ. ಆದರೂ ಬೆಳಿಗ್ಗೆ ಐದೂವರೆಯಾದರೆ ಶ್ವೇತ ವಸ್ತ್ರಧಾರಿಗಳಾಗಿ ಗಂಡು ಹೆಣ್ಣೆನ್ನದೆ ಪೂಜಾ ತಟ್ಟೆಗಳನ್ನು ಹಿಡಿದು ಸಾಗುತ್ತಾರೆ. ಮೆಟ್ರೋ ರೈಲುಗಳ ವಾಹನಗಳ ಧ್ವನಿ ಎಲ್ಲಾ ರೀತಿಯ ಪೂಜಾ ಮನಸ್ಸನ್ನು ಮರೆಯಾಗಿಸುತ್ತದೆ. ನೆಮ್ಮದಿಯಿಲ್ಲದ ಪೂಜೆ. ಆದ್ದರಿಂದಲೇ ಬಹುಪಾಲು ಮಂದಿ ಬಾಳಾಠಕ್ರೆ ಮತ್ತು ಹರ್ಷದ್ ಮೆಹತಾ ರೀತಿಯಲ್ಲಿರಲು ತವಕಿಸುತ್ತಿರುತ್ತಾರೆ. ಈ ತವಕದ ಸುತ್ತ ಪ್ರತಿಸ್ಪರ್ಧಿಗಳಾಗಿ ಹಾಜಿಮಸ್ತಾನ್ ಅಂಥವರ ಪಡೆ ಕ್ರಿಯಾಶೀಲವಾಗಿರುತ್ತದೆ.

ಆದರೂ ಮುಂಬಯಿ ಸಾಗುತ್ತಲೇ ಬಂದಿದೆ. ಸತ್ಯವಂಗವನ್ನು ಹೊಟ್ಟೆಯಲ್ಲಿಟ್ಟು ಕೊಂಡು ಸಾಗುವಂತೆ. ಮತ್ತೆ ಬಿಡಿಸಿ ಹೇಳಬೇಕೆಂದರೆ; ನಾವು ಇಲ್ಲಿಂದ ಸತ್ಯ, ಅಭಿವೃದ್ಧಿ ಮತ್ತು ನಾಗರಿಕತೆಯ ಮಾದರಿಗಳ ರೂಪಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿಟ್ಟು ರವಾನಿಸುತ್ತೇವೆ. ಇದಕ್ಕೆ ತಕ್ಕಂತೆ ತನ್ನ ಆರ್ಭಟದೊಡನೆ ಎಲ್ಲವನ್ನು ಅವಿತಿಟ್ಟುಕೊಳ್ಳಬಲ್ಲೆ ಎಂದು ಸಮುದ್ರವಿದೆ. ಲಕ್ಷಾಂತರ ಜನರ ತವಕದ ಸಂಕೇತ ಎಂದು ಈ ಸಮುದ್ರದ ಬಗ್ಗೆ ಪ್ರೀತಿ ಹುಟ್ಟುವುದೇ ಇಲ್ಲ. ಯಾಕೆಂದರೆ ಬೇರೆಡೆ ಸಮುದ್ರ ನಮಗೆ ಕನಸುಗಳನ್ನು ತುಂಬಬಲ್ಲುದು. ಇಲ್ಲಿ ವ್ಯವಹಾರವನ್ನು ತುಂಬುತ್ತದೆ. ಇಷ್ಟಾದರೂ ನಾನೇನು ಮಾಡಬಲ್ಲೆ? ನನ್ನ ಪಾಡಿಗೆ ನಾನು ತೆಪ್ಪಗಿದ್ದೇನೆ ಎಂದು ಕಾಣುವ ಸಮುದ್ರ.

ಸಾಂತಾಕ್ರೂಜ್ ಪೂರ್ವದ ಪ್ರದೇಶಕ್ಕೆ ಪ್ರೊ॥ ಫಕನ್ ಮನ್ಸೂರ್‌ರವರ ಬಾವ ವೈದ್ಯ ಅಲಿಯವರು ಕರೆದುಕೊಂಡು ಹೋದರು. ಅವರ ಮನೆ ಇದ್ದದ್ದು ಅಲ್ಲಿ. ಅಂಥ ಸಮಯದಲ್ಲೂ ಅಲಿಯವರ ಹೆಂಡತಿ ಟೀನಾ ಮತ್ತು ಅವರ ಇಬ್ಬರು ಹೆಣ್ಣು ಮಕ್ಕಳು ಎದ್ದು ಅಡಿಗೆ ಮಾಡಿದರು. ನನಗೆ ಒಂದು ಬಕೀಟು ಬಿಸಿನೀರುಕೊಟ್ಟರು. ಮೈ ಕೈಗೆ ಹಾಯ್ ಅನ್ನಿಸಿತು. ಊಟಕ್ಕೆ ಕೂತಾಗ ಮೀನಿನ ಫ್ರೈ ಜೊತೆಗೆ ಬಿಸಿಬಿಸಿ ಅನ್ನ ಮತ್ತು ಚಪಾತಿ. ಊಟದ ನಂತರ ಐದುನಿಮಿಷ ವಾಕ್ ಹೋಗಿ ಬರುವೆ ಎಂದು ಸಂಕೋಚದಿಂದಲೇ ಕೇಳಿದೆ, ಅವರು ನಗುತ್ತ ಆಗಲಿ ಎಂದರು. ಲಿಫ್ಟ್ ನನ್ನನ್ನು ಕೆಳಗೆ ಕರೆದುಕೊಂಡು ಹೋಯಿತು. ಗೇಟಿನಲ್ಲಿ ಕಾವಲುಗಾರನಿಗೆ ಹೇಳಿದೆ. ಅವನು ಕಣ್ಣಿನಲ್ಲಿಯೇ ಸಮ್ಮತಿ ಸೂಚಿಸಿದ.

ಹನ್ನೆರಡು ಘಂಟೆಯ ಸಮಯ, ಕಾಲದ ಪ್ರಕಾರ ಮಾರನೆಯ ದಿನಕ್ಕೆ ಕಾಲಿಟ್ಟ ರಾತ್ರಿ, ಪಕ್ಕದ ಅಪಾರ್ಟ್‌ಮೆಂಟ್ಸ್‌ನಲ್ಲಿ ಟಿವಿಯನ್ನು ನೋಡುತ್ತ, ಕೇಕೆ ಹಾಕುತ್ತ ಕೂತಿದ್ದ ಜನ, ಒಂದು ಕ್ಷಣ ಈ ಜನ ಎಂಥವರು? ಅನ್ನಿಸಿತು. ಪಕ್ಕದ ರಸ್ತೆಯಲ್ಲಿ ವಾಕ್ ಮಾಡುತ್ತಲೇ ಮುಂಬಯಿ ಬಗ್ಗೆ ನಾನಾ ಯೋಚನೆಗಳು ಬಂದು ಹೋದವು. ಅಕಸ್ಮಾತ್ ದಪ್ಪದಪ್ಪ ಅಕ್ಷರಗಳಲ್ಲಿ ಹಿಂದಿಯಲ್ಲಿ ಬರೆದ ಗೋಡೆಬರಹ ಕಾಣಿಸಿತು. "ಗರ್ವ್ ಸೆ ಕಹೋ (ಓಂ) ಹಮ್ ಹಿಂದೂ ಹೈ" ಎಂದು. ತಕ್ಷಣ ಅದನ್ನು ಬರೆದು ಕೊಳ್ಳಲು ಯೋಚಿಸಿದೆ. ನನ್ನಲ್ಲಿ ಲೇಖನಿ ಇರಲಿಲ್ಲ. ಕಾಗದವೂ ಇರಲಿಲ್ಲ. ಈ ಗೋಡೆಬರಹವಿದ್ದದ್ದೂ ಆರ್.ಎಸ್.ಎಸ್.ನ ಕೇಂದ್ರದ ಮೇಲೆ, ಹೀಗೆಯೇ ವಾಕ್ ಮಾಡುತ್ತಿರುವಾಗ ಅದನ್ನು ಒಂದುಕ್ಷಣ ನಿಂತು ನೋಡಿದ್ದೆ. ಆಗ ಗಾಬರಿಯಾಗಿತ್ತು. ನಾನು ನೋಡುತ್ತಿದ್ದ ಕ್ರಮವನ್ನು ಕಂಡು ಕಳ್ಳ ಎಂದು ಬಂದು ಹಿಡಿದರೆ ಏನು ಮಾಡುವುದೆಂದು.

ಆ ಗೋಡೆಯ ಬರಹವನ್ನು ಮನಸ್ಸು ಬರೆದುಕೊಳ್ಳಲು ಪ್ರಯತ್ನಿಸುತ್ತಿತ್ತು. ಹೀಗೆ ವಾಕ್ ಮಾಡುತ್ತಿರುವಾಗ ನೂರಡಿಯ ದೂರದಲ್ಲಿ ಮತ್ತೊಂದು ಗೋಡೆಯ ಬರಹ ಕಾಣಿಸಿತು. ಅದೇ ರೀತಿಯ ಘೋಷಣೆ ಇರಬಹುದು ಎಂದು ವಾಕ್ ಮಾಡುತ್ತಿದ್ದೆ. ಅಕಸ್ಮಾತ್ ತಲೆಯೆತ್ತಿ ನೋಡಿದೆ. "ಸಬ್ ಕೆ ಮಾಲಿಕ್ ಏಕ್ ಹೈ" ಎಂದು ಬರೆದಿತ್ತು. ಅಲ್ಲಿ 'ಓಂ' ಇರಲಿಲ್ಲ, ಶಿರಡಿ ಸಾಯಿಬಾಬರವರ ಚಿತ್ರವಿತ್ತು. ಒಂದು ಕ್ಷಣ ಹಾಗೆಯೇ ನಿಂತೆ. ಆಗ ನಾನು ಮೌನಿಯಾಗಿದ್ದೆ. ನಮ್ಮೆಲ್ಲರ ಮಾಲಿಕ ಒಬ್ಬನೇ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಭಾವನೆ ಬೆಳೆಯುತ್ತ ಹೋಯಿತು. ಮನೆಗೆ ಬಂದೆ. ಅವರು ಮಾತಿನಲ್ಲಿ ತೊಡಗಿದ್ದರು. ವಾಕ್ ಆಯಿತಾ ಶ್ರೀನಿವಾಸ್ ಎಂದರು ಅಲಿ. ಅಲಿಯವರ ಮಕ್ಕಳು ಅಲ್ಲಿದ್ದ ಸೋಫಾದ ಒಂದು ಕೀಲಿಯನ್ನು ಒತ್ತಿದರು. ಅದು ನೀಟಾದ ಮಂಚವಾಯಿತು. ನಾನು ಮತ್ತು ಮನ್ಸೂರ್‌ರವರು ಎಷ್ಟು ಚೆನ್ನಾಗಿದೆ ಎಂದು ಉದ್ಗಾರ ತೆಗೆದವು. ಆ ಹೆಣ್ಣು ಮಕ್ಕಳು ಅಭಿಮಾನದಿಂದ ಎಂಟು ಸಾವಿರ ಅಂಕಲ್, ಈಗ ಇನ್ನೂ ಜಾಸ್ತಿಯಾಗಬಹುದು ಎಂದರು.

ಹಾಸಿಗೆಯ ಮೇಲೆ ಕಾಲು ಚಾಚಿದೆ. ಆ ಗೋಡೆಯ ಮಾತುಗಳು ಮನಸ್ಸಿನಲ್ಲಿ ಆವರಿಸಿಕೊಂಡಿತ್ತು. ನನ್ನ ಮುಂದೆ ಮೇರಿಯ ಪ್ರೀತಿಪಾತ್ರ ಫೋಟೋ ಇತ್ತು. ಸುತ್ತಲೂ ನೋಡಿದೆ ಮುಸ್ಲಿಂ ಸಂಸ್ಕೃತಿಗೆ ಸೇರಿದ ಯಾವುದೇ ರೀತಿಯ ಪಳೆಯುಳಿಕೆಗಳು ಇರಲಿಲ್ಲ. ಅಲಿಯವರು ನಗುತ್ತ ಮತ್ತೊಂದು ಬೆಡ್‌ಷೀಟ್‌ಕೊಟ್ಟು ಆರಾಮವಾಗಿ ಮಲಗಿ ಎಂದು ಹೋದರು. ಒಂದು ಕ್ಷಣ ಇಡೀ ಫ್ಯಾಮಿಲಿಯ ಚಿತ್ರವನ್ನು ಮುಂದಿಟ್ಟುಕೊಂಡೆ. ಅಲ್ಲಿ ಮೇರಿ ಹಸನ್ಮುಖಿ. ತನ್ನ ಕೈಯಲ್ಲಿದ್ದ ಅಭಿಮಾನದ ಮಗು. ಜಗತ್ತಿನ ಮಾಲಿಕ ಒಬ್ಬನೇ ಆ ಮಗುವಲ್ಲವೇ ? ಎಂಬ ಪ್ರಶ್ನೆ ಬಂದು ಹೋಯಿತು. ಅಲಿಯವರ ಹೆಂಡತಿ ಟೀನಾ ಗೋವಾ ಕ್ರಿಶ್ಚಿಯನ್. ಅಲ್ಲಿ ಧರ್ಮ ಮತ್ತು ಮತಕ್ಕಿಂತ ಪ್ರೀತಿಯಿಂದ ಕೂಡಿಬಾಳುವುದು ಮುಖ್ಯವಾಗಿತ್ತು. ನಿದ್ರೆ ಆವರಿಸಿತ್ತು.

ಬೆಳಿಗ್ಗೆ ಗಡಿಬಿಡಿಯಿಂದ ತಿಂಡಿತಿಂದು ಪಿಯುಸಿಎಲ್ (ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್) ರಾಷ್ಟ್ರೀಯ ಸಮಾವೇಶಕ್ಕೆ ಚರ್ಚ್‌ಗೇಟ್ ಬಳಿ ಇದ್ದ ಕ್ರಿಶ್ಚಿಯನ್ ಕಾಲೇಜಿಗೆ ಹೋದೆವು. ಅಲಿಯವರು ಬಿಟ್ಟು ಹೋದರು. ಅಲ್ಲಿ ನನಗೆ ಇಷ್ಟವಾದ ಒಂದಷ್ಟು ವ್ಯಕ್ತಿಗಳೆಲ್ಲ ಪರಿಚಯವಾದರು. ಸಮಾವೇಶದಲ್ಲಿ ಮನುಷ್ಯನ ಬದುಕಿಗೆ ರಕ್ಷಣೆಯಿಲ್ಲ, ಇಂಥ ಸಮಯದಲ್ಲಿ ನಾವೇನು ಮಾಡಬಹುದು ? ಎಂಬ ಆತ್ಮೀಯವಾದ ಚರ್ಚೆ. ಶಂಕರಗುಹಾ ನಿಯೋಗಿಯ ಕೊಲೆಯ ನಂತರದಿಂದ ರಾಜೀವ ಗಾಂಧಿಯ ಕೊಲೆಯ ನಂತರ ಉದ್ಭವಿಸಿದ ಮನುಷ್ಯ ಸಂಬಂಧಗಳು. ಯಾರದೋ ತಪ್ಪಿಗೆ ಮುಗ್ಧ ಜನರ ಬಂಧನ, ಹಿಂಸೆ. ತಮಿಳುನಾಡು ಮತ್ತೊಂದು

ಪಂಜಾಬ್ ಆಗುವ ಭಯ. ನಿಜವಾದ ಮಾಲಿಕ ನಮ್ಮೊಡನೆ ಇಲ್ಲ. ಅದಕ್ಕಾಗಿಯೇ ಎಲ್ಲೆಂದರಲ್ಲಿ ಹಿಂಸೆ.

ಸಂಜೆ ಸಮುದ್ರ ದಂಡೆಯ ಪಕ್ಕ ಸುತ್ತಾಡುವ ಎಂದು ಹೋದೆವು. ಪ್ರೊ॥ ಮನ್ಸೂರ್‌ರವರು ತಮ್ಮ ಬಾಲ್ಯದ ಕಥೆಗಳನ್ನೆಲ್ಲ ಹೇಳುತ್ತ ಸಾಗಿದ್ದರು. ರಸ್ತೆಯಲ್ಲಿ ಸಾಗುವ ಕುದುರೆ ಸಾರೋಟುಗಳು. ಸಮುದ್ರದ ಅಲೆಗಳು ರಸ್ತೆಯನ್ನು ಕೊರೆಯು ದಿರಲೆಂದು ಕಲ್ಲುಗಳನ್ನು ಕೆತ್ತಿ ಲಿಂಗಾಕಾರದಲ್ಲಿಟ್ಟ ದಪ್ಪದಪ್ಪನೆಯ ಕಲ್ಲುಗಳು. ಉದ್ದಕ್ಕೂ ಕೂತ ನೂರಾರು ಮಂದಿ ಹುಡುಗ-ಹುಡುಗಿಯರು ಅಪ್ಪುಗೆಯಲ್ಲಿ ಮೈ ಮರೆತವರು. ಆಕ್ಷಣಕ್ಕೆ ತಮಗೆ ತಾವೇ ಮಾಲಿಕರೆಂದು ಆತ್ಮೀಯಗೊಂಡವರು. ಹೀಗೆ ಸುತ್ತಾಡುತ್ತಲೇ ಒಂದು ಗ್ಲಾಸ್ ಬಿಯರ್ ಕುಡಿಯಬೇಕೆನ್ನಿಸಿತು. ಹುಡುಕಿ ಕೊಂಡು ಹೋದೆವು. ಮನ್ಸೂರ್‌ರವರು ಕುಡಿಯದಿದ್ದರೂ ನನಗೋಸ್ಕರ ಬಂದರು. ಕೊನೆಗೆ ಗೊತ್ತಿಲ್ಲದೆ ಡಿಸ್ಕೋ ಡ್ಯಾನ್ಸ್ ಮುಂದೆ ಕುಡಿಯುತ್ತಿದ್ದ ಬಾರ್‌ಗೆ ಹೋಗಿ ಗಾಬರಿಗೊಂಡೆವು. ಅಲ್ಲಿಯ ಗದ್ದಲ ಮೆದುಳನ್ನು ಕಿತ್ತುಕೊಡುವ ರೀತಿಯಲ್ಲಿತ್ತು. ಕೊನೆಗೆ ಸ್ವಲ್ಪ ದೂರದಲ್ಲಿದ್ದ ಸಾಮಾನ್ಯ ಬಾರ್‌ಗೆ ಹೋದೆವು. ಅದು ನಿಜವಾದ ಪ್ರೋಲೆಟೇರಿಯನ್ ಬಾರ್ ಆಗಿತ್ತು. ಕೆಳಗಡೆಯಿಂದ ಅಡಿಗೆ ಮಾಡುವ ಹೊಗೆ ಒಂದೇ ಸಮನೆ ಬರುತ್ತಿತ್ತು. ಜನ ತಮ್ಮ ಪಾಡಿಗೆ ತಾವು ಕುಡಿದು ಮಾತಾಡಿ ಹೋಗು ತ್ತಿದ್ದರು. ನಮ್ಮ ಪಕ್ಕದ ಟೇಬಲ್ಲಿನಲ್ಲಿ ಇಬ್ಬರು ಯುವ ದಂಪತಿಗಳು ಬಂದು ಕೂತರು. ಅವರಲ್ಲಿ ಹೆಂಗಸು ತನ್ನ ಮಗು ಅಳದಿರಲೆಂದು ಮಗುವಿನ ತುಟಿಗೆ ಮೊಲೆಯನ್ನು ಕೊಟ್ಟಳು. ಆ ಯುವಕರು ಕುಡಿದರು. ಊಟಮಾಡಿದರು. ಸುತ್ತಲೂ ಇದ್ದ ಯಾರೂ ಅವರ ಕಡೆ ಗಮನ ಹರಿಸಲಿಲ್ಲ. ನನಗೆ ಅಚ್ಚರಿಯೆನಿಸಿತು. ಬೆಂಗಳೂರು ಆಗಿದ್ದರೆ ಕಿತ್ತುತಿನ್ನುವ ರೀತಿಯಲ್ಲಿ ನೋಡುತ್ತಿರುತ್ತಾರೆ. ನಮ್ಮ ಟೇಬಲ್‌ನಲ್ಲೇ ಇಬ್ಬರು ಯುವಕರು ಬಂದು ಕೂತರು. ಅವರಲ್ಲಿ ಒಬ್ಬ ಮುಸ್ಲಿಂ ಹುಡುಗ ಮತ್ತೊಬ್ಬ ಹಿಂದೂ, ಲವಲವಿಕೆಯ ಹುಡುಗರು, ವರ್ಕ್‌ಷಾಪ್‌ನಲ್ಲಿ ಕೆಲಸ ಮಾಡುವ ಹುಡುಗರು. ಒಂದಷ್ಟು ಕುಡಿದರು. ಪರಿಚಯವಾದರು. ವಿಳಾಸಕೊಟ್ಟರು. ತೆಗೆದುಕೊಂಡರು. ಅವರಲ್ಲಿ ಪಟೇಲ್ ಎಂಬ ಹುಡುಗ ಚೂಟಿಯಾದ ಹುಡುಗ.

ನಾವು ಹೊರಟೆವು. ಮತ್ತೆಲ್ಲೋ ಹೋಗಿ ಊಟಮಾಡಿದೆವು. ನಮಗಾಗಿ ಉಳಿಯಲು ವ್ಯವಸ್ಥೆ ಮಾಡಿದ್ದ ಹಿಂದಿ ವಿದ್ಯಾಲಯದಲ್ಲಿ ಬೇರೆಬೇರೆ ಭಾಷೆಯವರೊಡನೆ ಹರಟೆ, ಅವರ ಕ್ರಾಂತಿಯ ಅನುಭವಗಳು, ಮಾರನೆಯ ದಿನವೂ ಅದೇ ಚರ್ಚೆ. ಸಂಜೆ ಒಂದಷ್ಟು ಗೆಳೆಯರು ಆಂಧ್ರದ ಕ್ರಾಂತಿಕಾರಿ ನಾಯಕ ಕನ್ನಾಭಿರನ್ ಜೊತೆ ಕಾಲ ಕಳೆದದ್ದು, ಮಹಾರಾಷ್ಟ್ರದ ಮಾಧವ ಸಾಟೆಯವರು, ಲೋಹಿಯಾ, ಜಯಪ್ರಕಾಶ್

ನಾರಾಯಣ್ ಮತ್ತು ಮಧುಲಿಮಯೆ ಬಗ್ಗೆ ಆತ್ಮೀಯವಾದ ಕಥೆಗಳನ್ನು ಹೇಳುತ್ತ ಹೋದರು. ಈ ಎಲ್ಲದರ ಮಧ್ಯೆ ಸುತ್ತಿಬಳಸಿ ಅಯೋಧ್ಯೆಯ ವಿಷಯ ಬರುತ್ತಿತ್ತು. 'ಗರ್ವ್ ಸೆ ಕಹೋ ಹಮ್ ಹಿಂದೂ ಹೈ' ಎಂಬ ಮಾತು ಮತ್ತಷ್ಟು ಅನಾಯಕತ್ವವನ್ನು ಸೃಷ್ಟಿಸುವ ಸಂದರ್ಭದಲ್ಲಿ ಇದ್ದೇವೆ ಎಂಬ ಪ್ರಶ್ನೆ ಎಲ್ಲರ ಮುಂದೆಯೂ ಇತ್ತು. ಈಗ ಇದನ್ನು ಬರೆಯುವ ಕಾಲಕ್ಕೆ 'ಗರ್ವ್ ಸೆ ಕಹೋ' ಎಂಬ ಧ್ವನಿಯಿಂದ ಸಾಕಷ್ಟು ರಕ್ತವನ್ನು ಚೆಲ್ಲಿದ್ದೇವೆ. ಮಾಯಲಾರದ ನೋವು ಮಡುಗಟ್ಟಿದೆ. ಮುಂಬಯಿ ಸೃಷ್ಟಿಸುವ ವ್ಯವಹಾರವನ್ನು ಮೀರಿದ ಧರ್ಮನಿರಪೇಕ್ಷ ಮಾರ್ಗ ಬೇಕಾಗಿದೆ.

ಭಾರತದ ಬೇರೆ ಬೇರೆ ಮೂಲೆಗಳಿಂದ ಬಂದ ಗೆಳೆಯರಿಂದಾಗಿ ಕಾಣಬೇಕಾಗಿದ್ದ ಮುಂಬಯಿ ಗೆಳೆಯರನ್ನು ನೋಡಲಾಗಲಿಲ್ಲ.

31-12-92

— ಶೂದ್ರ ಶ್ರೀನಿವಾಸ್

●

ಪುಸ್ತಕ ವಿಮರ್ಶೆ

ಸಮಕಾಲೀನತೆ-ವಚನ ಸಾಹಿತ್ಯ

— ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

'ವಚನ' ಪ್ರಕಾರವನ್ನು ಒಂದು ಚಳುವಳಿಯೆನ್ನುವ, ನಿರಂತರ ಹರಿಯುತ್ತಿರುವ ಸಾಹಿತ್ಯಧಾರೆ ಎನ್ನುವ ಮಾತೂ ಸರಿ. ತನ್ನ ಇಂಗದ ದಾಹದಿಂದ ಉಪನದಿಗಳನ್ನು ನುಂಗಿಕೊಳ್ಳುತ್ತ, ತುಂಬಿಕೊಳ್ಳುತ್ತ ಮಹಾನದಿಯಾಗಿ ತನ್ನ ವಿರಾಟ ಸ್ವರೂಪವನ್ನು ಬೀಗುತ್ತಿರುವ ಈ ವಚನ ಮನೋಧರ್ಮ ಸಾಹಿತ್ಯ ವಿಕಾಸದ ವಿಸ್ಮಯವೂ ಹೌದು.

ಈ ಮಹಾನದಿಯು ನಾಡಿನ ಸಂಪತ್ತಾಗಿರುವುದು ಇದರ ಪ್ರವಾಹದ ಎದುರು ನಿಲ್ಲಲಾಗದ ಎಷ್ಟೋ ಉಪಚಳುವಳಿಗಳು, ಪಂಥಗಳು ನಿರ್ಜೀವವಾಗಿರುವ ಉದಾಹರಣೆಗಳು ನಮ್ಮ ಮುಂದೆ ಇವೆ.

ಹಾಗೆಂದು ಉಳಿದ ಪ್ರಕಾರಗಳನ್ನು, ಪಂಥ ಚಳುವಳಿಗಳನ್ನು ಹಗುರವಾಗಿ

ಜರಗನಹಳ್ಳಿ ಶಿವಶಂಕರ್, ಶುಭದ ಪ್ರಕಾಶನ, ಜರಗನಹಳ್ಳಿ, ಜೆ.ಪಿ. ನಗರ, ಬೆಂಗಳೂರು-560078

ಕಾಣದೆ ಒಂದು ಚಳುವಳಿ ತನ್ನ ಆಯುಷ್ಯವನ್ನು ಎಷ್ಟು ದೀರ್ಘಕಾಲ ಜೀವಂತವಾಗಿ, ಆರೋಗ್ಯವಾಗಿ, ಕ್ರಿಯಾಶೀಲವಾಗಿ ಉಳಿಸಿಕೊಂಡಿದೆ ಎನ್ನುವುದೆ ಇಲ್ಲಿನ ಮಾತು. ಮಾತ್ರ ವಚನ ಸಾಹಿತ್ಯ ಬೇರೆ ಸಾಹಿತ್ಯ ಪ್ರಕಾರಗಳನ್ನು ತುಳಿತಕ್ಕೆ ಒಳಪಡಿಸಿದೆಯೆಂಬ ಮುಗ್ಧತೆಯು ಇದಲ್ಲ.

ಒಂದು ನಿರ್ದಿಷ್ಟ ಸಂದರ್ಭದ ಕಾವ್ಯ ಅಥವಾ ತತ್ವ ಭವಿಷ್ಯದಲ್ಲಿ ಚಿಂತನೆಗೆ, ಅಧ್ಯಯನಕ್ಕೆ ಗುರಿಪಡಿಸುವ ಪರಿಪಾಠವಿದ್ದರೂ ಕಾವ್ಯವೆ ಮುಕ್ಕೊಂದು ಕಾವ್ಯ ಚಳುವಳಿಗೆ ವಸ್ತುವಾಗುವ, ಸ್ಫೂರ್ತಿಯಾಗುವ ವಿಶಿಷ್ಟತೆಯೆ ವಚನದ ಪ್ರಭಾವ, ಚೈತನ್ಯ ಎನ್ನಬಹುದು.

ಬದಲಾಗುವ ಸಾಮಾಜಿಕ ವ್ಯವಸ್ಥೆಯು ಒಟ್ಟೊಟ್ಟಿಗೆ ಭಾಷೆಯು ಗ್ರಂಥಸ್ಥ ನಲೆಯಿಂದ ಆಡು ಭಾಷೆಯು ನೆಲೆಗೆ ಬದಲಾಯಿಸಿರುವ ಸತ್ಯಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಆದರೂ ವಚನ ತನಗಿರುವ ನಿರ್ದಿಷ್ಟ ಬಂಧವನ್ನು ತನ್ನ ಹಿಡಿತದ ಪ್ರಭಾವದಲ್ಲಿ ಕಾದಿರಿಸಿಕೊಂಡು ನಡೆಯುತ್ತಿದೆ. ಧರ್ಮಾಂಧತೆಯು ದಬ್ಬಾಳಿಕೆಗಳಲ್ಲೂ, ಪ್ರಭುತ್ವ ಭಾಷಾ ವ್ಯಾಮೋಹದ ಸಾಂಕ್ರಾಮಿಕ ರೋಗಗಳಿಂದಲೂ ಇದು ಮುಕ್ತವಾಗಿ ಬದುಕುವ ಶಕ್ತಿಯನ್ನು ಸಾಬೀತು ಪಡಿಸಿದೆ.

ಜಾತೀಯತೆ, ಧರ್ಮಾಂಧತೆ, ಅಜ್ಞಾನಗಳ ಸಮಾಜದ ವ್ಯವಸ್ಥೆಯು ಎದುರು ಶತಮಾನಗಳಿಂದ ಸಮರ ಹೂಡಿದ್ದರೂ ಪೂರ್ಣ ಪ್ರಮಾಣದ ಫಲಿತಾಂಶ ಕಾಣದೆ ಅಸಮಾಧಾನದ ಒಟ್ಟಿಗೆ ಒಂದು ಪಂಗಡದ ಧರ್ಮಗ್ರಂಥಗಳಾಗಲೂ ಒಪ್ಪದೆ ಸಾಹಿತ್ಯದ ಮೂಲಕ ಬದುಕನ್ನೆ ಪ್ರತಿನಿಧಿಸುವುದು ಕೂಡ ಅನನ್ಯವಾದದ್ದು.

ಇಂತಹ ಪ್ರಯತ್ನಗಳ ಹಿನ್ನಲೆಯಲ್ಲಿ ವಚನದ ಪ್ರಾಮಾಣಿಕ ಅರಿವನ್ನು ಜನ ಸಮುದಾಯಕ್ಕೆ ತಲುಪಿಸುವ ಮಂತ್ರ ಮಾತು ಕೃತಿಗೆ ಇಳಿಸಿದಂತೆ ತಾವು ನೀಡಿದ ಪ್ರವಚನಗಳನ್ನು ಕೃತಿಯ ರೂಪದಲ್ಲಿ ಹೊರತಂದಿರುವ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಶ್ರಮ ಶ್ಲಾಘನೀಯವಾದದ್ದು.

ಪ್ರಚಲಿತವಾದ ಹೆಚ್ಚಿನ ವಚನಗಳಿಗೆ ವ್ಯಾಖ್ಯಾನದ ಅಗತ್ಯವಿಲ್ಲದಂತೆ ಮೇಲು ನೋಟಕ್ಕೆ ಕಂಡರೂ ಅದರ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸುವ ಈ ಪುಸ್ತಕ ಪ್ರಸ್ತುತ ಸಂದರ್ಭಕ್ಕೆ ಅತ್ಯವಶ್ಯಕವೆಂದು ಕಾಣುತ್ತದೆ. ಕಾವ್ಯಾಲಂಕಾರದ ಪ್ರತಿಮಾ ರೂಪಕಗಳಿಗೆ ಒಂದು ಸೀಮಿತ ಅಥವ ಸಾಂದರ್ಭಿಕ ಅರ್ಥಗಳನ್ನು ಕಲ್ಪಿಸಿಬಿಡುವ ಅಪಾಯ ವಿದ್ದರೂ ತಮ್ಮ ಮನೋಧರ್ಮಗಳನ್ನು ಪ್ರತಿಬಿಂಬಿಸುವ ಸಮರ್ಥ ರೀತಿಯಲ್ಲಿ ಅರ್ಥೈಸಿದ್ದಾರೆ.

●

ಐದು ಮಿನಿಕವನಗಳು

೧. ಕೆಲಕಾಲ
ಮರುಭೂಮಿಯಲ್ಲಿ ನನ್ನ ವಾಸ್ತವ್ಯ
ಈಗ
ಕಡಲ ನಡುವೆ ತಂಗಿರುವೆ
ಬಾಯಾರಿದ್ದೆ ಆಗ
ಬಾಯಾರಿದ್ದೇನೆ ಈಗಲೂ.

೨. ನಾನು ಒಂಟಿಯಲ್ಲ
ಏಕಾಂತ ನನ್ನ ಶಾಶ್ವತ ಜೊತೆಗಾರ.

೩. ದಿವ್ಯದ ನಡುವೆ ಕಾದಿದ್ದೇನೆ
ಸತ್ಯದ ಸಾಕ್ಷಾತ್ಕಾರ ಆದೀತು ಎಂದು.

೪. ಪ್ರೇಮ ವಿಲಕ್ಷಣವಾದದ್ದು
ತೋರಿಕೆಗೆ ವಿವಶರನ್ನಾಗಿಸುತ್ತದೆ
ನಿಜದಲ್ಲಿ
ಅದಮ್ಯ ಶಕ್ತಿಯನ್ನು ನೀಡುತ್ತದೆ.

೫. ಬಯಸಿದ್ದು ಕೈ ಸೇರಿದಾಗ
ತೃಪ್ತಿಗೊಳ್ಳುವುದು ಸಹಜ
ಜೊತೆಗೆ
ಉಪದೇಶ ನೀಡುವುದು ಸುಲಭ.

— ಡಾ॥ ಎಚ್.ಎಸ್. ಸುಜಾತ

ಡಾ॥ ಎಚ್.ಎಸ್. ಸುಜಾತ, 53, 'ಸುಹಾಸ', 6ನೇ ಬ್ಲಾಕ್, ಕುವೆಂಪುನಗರ
ಮೈಸೂರು-570 023

ಈಗ ಕಂಡ ಪುಸ್ತಕಗಳು

ಜಾಣೆ (ಕವನ ಸಂಕಲನ) : ಎಂ.ಆರ್. ಕಮಲ, ಕಲ್ಯಾಣಿ ಪ್ರಕಾಶನ, ನಂ. 86, ಎಚ್.ವಿ.ಆರ್. ಲೇಔಟ್, ಮಾಗಡಿ ರಸ್ತೆ, ಬೆಂಗಳೂರು–560079, ಬೆಲೆ : 30 ರೂ. ಎಂ.ಆರ್. ಕಮಲ ಅವರು ತಮ್ಮ ಮೊದಲನೆಯ ಕವನ ಸಂಕಲನ 'ಶಕುಂತಳೋಪಾಖ್ಯಾನ'ದಿಂದ ಕಾವ್ಯ ಬರೆಯಬಲ್ಲೆ ಎಂದು ತೋರಿಸಿಕೊಂಡಿದ್ದಾರೆ. ತುಂಬ ಆಪ್ತವಾಗಿ ಬರೆಯುವ ಇವರು ಈ ಸಂಕಲನದಲ್ಲೂ 'ಜಾಣೆ'ಯಾಗಿಯೇ ಕಾವ್ಯದ ಮಧ್ಯೆ ನಿಲ್ಲುತ್ತಾರೆ.

ಸ್ತ್ರೀ ಪುರುಷ : ಲೇಖಕಿ : ಛಾಯಾ ದಾತಾರ್, ಅನು : ಸರಸ್ವತಿ ರಿಸಬೂಡ್, ಇಳಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು–18, ಬೆಲೆ : 24 ರೂ. ಶ್ರೀಮತಿ ಛಾಯಾ ದಾತಾರ್ ಈಗಾಗಲೇ ತಮ್ಮ ಮಹಿಳಾ ಚಳುವಳಿಗಳಿಂದ ಹಾಗೂ ತಮ್ಮ ಬರವಣಿಗೆಯಿಂದ ಮಹಾರಾಷ್ಟ್ರದಲ್ಲಿ ಸುದ್ದಿಯಾದವರು. ಸ್ತ್ರೀಯರ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಯೋಚಿಸುವ ಇವರು 'ಸ್ತ್ರೀ ಪುರುಷ' ಎಂಬ ಉತ್ತಮ ಕೃತಿಯನ್ನು ಕೊಟ್ಟಿದ್ದಾರೆ. ಕನ್ನಡಕ್ಕೆ ಸರಸ್ವತಿ ರಿಸಬೂಡ್ ಅವರು ತಂದಿದ್ದಾರೆ. ಓದಬಹುದಾದ ಕೃತಿ. ಅನುವಾದ ಅಡ್ಡಿಯಿಲ್ಲ.

ಗಿರಿಸ್ನೇಹ : ಲೇಖಕಿ : ಶಮಂತ, ಇಳಾ ಪ್ರಕಾಶನ. ಚಾಮರಾಜಪೇಟೆ, ಬೆಂಗಳೂರು-18, ಬೆಲೆ : 24 ರೂ. ಇದು ಶಮಂತ ಅವರ ಮೊದಲ ಕೃತಿ, ಸಾಹಿತ್ಯ ಮತ್ತು ಹೋರಾಟದಲ್ಲಿ ಆಸಕ್ತಿಯಿರುವ ಇವರು ತಮ್ಮನ್ನು 'ಚಾರಣ' ಸಾಹಸಕ್ಕೆ ಅರ್ಪಿಸಿಕೊಂಡವರು. ಅದರ ಅನುಭವವನ್ನು ಆತ್ಮೀಯವಾಗಿ ಬರವಣಿಗೆಯಲ್ಲಿ ಹಂಚಿಕೊಂಡಿದ್ದಾರೆ.

ವಚನ ಚಳುವಳಿ (ಲೇಖನಗಳು) : ಡಾ॥ ಬಸವರಾಜ ಸಬರದ. ಪಲ್ಲವಿ ಪ್ರಕಾಶನ, ಗುಲಬರ್ಗಾ-6. ಬೆಲೆ : 40 ರೂ. ಇದು ಬಸವರಾಜ ಸಬರದ ಅವರು ಬೇರೆ ಬೇರೆ ಸಂದರ್ಭದಲ್ಲಿ ಬರೆದ ಲೇಖನಗಳು, ವಚನ ಚಳುವಳಿಯನ್ನು ಕುರಿತ ಈ ಲೇಖನಗಳು; ಆ ಚಳುವಳಿಯನ್ನು ಮತ್ತಷ್ಟು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ.

ಅಮೃತಮತಿ ಸ್ವಗತ (ಕವನ ಸಂಕಲನ) : ಹೆಚ್.ಎಲ್. ಪುಷ್ಪ, ಅನ್ವೇಷಣೆ ಪ್ರಕಾಶನ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-40, ಬೆಲೆ : 15 ರೂ. ಈ ಸಂಕಲನದಲ್ಲಿಯ ಕವನಗಳು ಈಗಾಗಲೇ ಅಲ್ಲಲ್ಲಿ ಪ್ರಕಟಗೊಂಡವು. ಇಲ್ಲಿಯ ಐವತ್ತೂರು ಕವನಗಳಲ್ಲಿ ಓದಬಹುದಾದ ಒಂದಷ್ಟು ಕವನಗಳನ್ನು ಹೆಚ್. ಎಲ್. ಪುಷ್ಪಾರವರು ಬರೆದಿದ್ದಾರೆಂಬುದೇ ಸಂತೋಷದ ಸಂಗತಿ.

ಕವಿ ಸಂಹಾರ (ಕವನ ಸಂಕಲನ) : ಸಿದ್ಧಲಿಂಗ ದೇಸಾಯಿ, ಮಾನಸ ಪ್ರಕಾಶನ, ಧಾರವಾಡ, ಬೆಲೆ: 15 ರೂ. ಇದು ಸಿದ್ಧಲಿಂಗ ದೇಸಾಯಿ ಅವರ ಮೂರನೆಯ ಕವನ ಸಂಕಲನ, ಧಾರವಾಡ ಕಡೆಯ ಭಾಷೆಯನ್ನು ಅತ್ಯಂತ ಗಟ್ಟಿಯಾಗಿ ರೂಢಿಸಿಕೊಂಡು ಬರೆಯುತ್ತಿರುವ ಕವಿ. ತುಂಟತನ ಮತ್ತು ವಿಚಾರಶೀಲತೆಯನ್ನು ಕಾವ್ಯವಾಗಿಸುವ ತನ್ಮಯತೆ ಸಿದ್ಧಲಿಂಗ ದೇಸಾಯಿ ಅವರಿಗಿದೆ.

ದೇಶಕೋಶ ದಾಸವಾಳ (ಕವನ ಸಂಕಲನ) : ಎಲ್.ಎನ್. ಮುಕುಂದರಾಜ್, ಭಾವನಾ ಪ್ರಕಾಶನ, ನಂ. 2, 1ನೇ ಮಹಡಿ, ಕಿಲಾರಿ ರಸ್ತೆ, ಬಳೇಪೇಟೆ ಕ್ರಾಸ್, ಬೆಂಗಳೂರು-53, ಬೆಲೆ: 36 ರೂ. ಮುಕುಂದರಾಜ್ ತಮ್ಮ ಈ ಮೊದಲನೆಯ ಸಂಕಲನವನ್ನು ತುಂಬು ಉತ್ಸಾಹದಿಂದ ತಂದಿದ್ದಾರೆ. ಇಲ್ಲಿಯ ಓದಬಹುದಾದ ಕವನಗಳಿಗೆ ಸುರೇಖ ಮುದ್ದಾದ ರೇಖಾಚಿತ್ರಗಳನ್ನು ಬಿಡಿಸಿದ್ದಾರೆ.

ನಾನೂ ಬರೀಬೇಕಂತೀನಿ (ಕವನ ಸಂಕಲನ) : ಹರೀಶ ಹೂಲಿ, ಆಕೃತಿ ಪ್ರಕಾಶನ, ಅಂಬಿಕಾನಗರ-581363, ಬೆಲೆ: 5 ರೂ. ಬಾಲಕ ಹರೀಶ ಹೂಲಿ ತನ್ನ ಪುಟ್ಟ ವಯಸ್ಸಿನಲ್ಲಿಯೇ ಕಾವ್ಯದ ಜೊತೆ ಆಟವಾಡಲು ತೊಡಗಿರುವುದು ಸಂತೋಷದ ಸಂಗತಿ. ಇಲ್ಲಿ ಚೆನ್ನಾಗಿ ಆಡಿರುವ ಕೆಲವು ಕವನಗಳು ಮುಗ್ಧತೆಯ ದೃಷ್ಟಿಯಿಂದ ಅಚ್ಚುಕಟ್ಟಾಗಿವೆ.

ನನ್ನೊಳಗಿನ ಕೋಗಿಲೆ (ಕವನ ಸಂಕಲನ) : ಮೊಳಕಾಲ್ಮೂರು ಶ್ರೀನಿವಾಸ ಮೂರ್ತಿ, ಗಣಶ್ರೀ ಪ್ರಕಾಶನ, 'ನಿವೇದಿತಾ', 98, 7ನೇ ಅಡ್ಡರಸ್ತೆ, ಶಂಕರನಗರ, ಬೆಂಗಳೂರು-22, ಬೆಲೆ: 15 ರೂ. ಶ್ರೀನಿವಾಸಮೂರ್ತಿಯವರು ವಾಣಿಜ್ಯ ಅಧಿಕಾರಿಯಾಗಿ ಸದಾ ಕಾವ್ಯದ ಬಗ್ಗೆ ಯೋಚಿಸುವಂಥವರು. ಇಲ್ಲಿಯ ಬಹುಪಾಲು ಕವನಗಳಿಗೆ ಭಾವುಕತೆ ಜಾಸ್ತಿಯಾಯಿತು. ಆದರೆ ಇಲ್ಲಿ 'ನನ್ನೂರು' ರೀತಿಯ ಕೆಲವು ಉತ್ತಮ ಕವನಗಳೂ ಇವೆ.

ಮುರಿದ ರೆಕ್ಕೆಗಳು : ಖಲೀಲ್ ಗಿಬ್ರಾನ್, ಕನ್ನಡಕ್ಕೆ: ಮೊಳಕಾಲ್ಮೂರು ಶ್ರೀನಿವಾಸಮೂರ್ತಿ, ಗಣಶ್ರೀ ಪ್ರಕಾಶನ, ಬೆಂಗಳೂರು-22, ಬೆಲೆ: 30 ರೂ. ಗಿಬ್ರಾನ್‌ನ 'ಬ್ರೋಕನ್ ವಿಂಗ್ಸ್' ಈಗಾಗಲೇ ಚರ್ಚೆಯಾಗಿ ಲಕ್ಷಾಂತರ ಓದುಗರನ್ನು ಆಕರ್ಷಿಸಿರುವಂಥದ್ದು. ಶ್ರೀನಿವಾಸಮೂರ್ತಿಯವರು ಅತ್ಯಂತ ತನ್ಮಯತೆಯಿಂದ ಕನ್ನಡಕ್ಕೆ ಇದನ್ನು ತಂದುಕೊಟ್ಟಿದ್ದಾರೆ. ಒಬ್ಬ ಉತ್ತಮ ಅನುವಾದಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

— ಸಿದ್ಧಾರ್ಥ

ಶ್ರೇಷ್ಠ ಪರಂಪರೆಯ ಪೋಷಣೆಗೆ ಲಲಿತಕಲಾ ವಿಶ್ವವಿದ್ಯಾನಿಲಯ :-

ಮೈಸೂರಿನಲ್ಲಿ ಲಲಿತಕಲೆಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸರ್ಕಾರ ಈಗಾಗಲೇ ನಿರ್ಧರಿಸಿದೆ. ಈ ವಿಶ್ವವಿದ್ಯಾನಿಲಯವು ಜಾನಪದ, ಶಿಲ್ಪಕಲೆ, ಚಿತ್ರ ರಚನೆ, ಸಂಗೀತ ಮುಂತಾದ ರಂಗಗಳಲ್ಲಿ ಆಸಕ್ತ ಕಲಾವಿದರಿಗೆ ಹೆಚ್ಚಿನ ಉತ್ತೇಜನ ಹಾಗೂ ಸೂಕ್ತ ತರಬೇತಿ ನೀಡಲಿದೆ.

ಕನ್ನಡ ಭವನ :-

ಕನ್ನಡಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪ್ರತಿಷ್ಠಿತ ಕನ್ನಡ ಭವನದ ನಿರ್ಮಾಣಕ್ಕೆ ಸರ್ಕಾರ ಮಂಜೂರಾತಿ ನೀಡಿದೆ.

ಕರ್ನಾಟಕ ದರ್ಶನ :—

ಕರ್ನಾಟಕದ ಶ್ರೇಷ್ಠ ಪರಂಪರೆಯನ್ನು ಪ್ರತಿಬಿಂಬಿಸುವ ಪ್ರದರ್ಶನಾಂಗಣವನ್ನು ಬೆಂಗಳೂರು ನಗರ ಸಮೀಪ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇಡೀ ಕರ್ನಾಟಕದ ಹಿರಿಮೆಯ ಕೇಂದ್ರಗಳ ಭವ್ಯ ಸ್ಮಾರಕಗಳ ಪರಿಚಯವನ್ನು ಒಂದೇ ಕಡೆ ಒದಗಿಸಲಿದೆ. ಇದರಿಂದ ಪ್ರವಾಸಿಗರಿಗೆ ಕರ್ನಾಟಕದ ಸಮಸ್ತ ಪರಿಚಯ ಒಂದೇ ಕಡೆ ವೀಕ್ಷಿಸಲು ಅನುವಾಗುವುದು.

ಅಖಿಲ ಭಾರತ ಸಂಗೀತ ಪ್ರಶಸ್ತಿ : —

ಕರ್ನಾಟಕ, ಹಿಂದೂಸ್ಥಾನಿ ಶಾಸ್ತ್ರೀಯ ಹಾಗೂ ಕರ್ನಾಟಕ ಸಂಗೀತವನ್ನು ಪೋಷಿಸುವಲ್ಲಿ ವಿಶಿಷ್ಟ ಸ್ಥಾನ ಹೊಂದಿದೆ. ಈ ಶ್ರೇಷ್ಠ ಸಂಪ್ರದಾಯವನ್ನು ಮುಂದುವರೆಸಲು ಅಖಿಲ ಭಾರತ ಸಂಗೀತ ಪ್ರಶಸ್ತಿಯನ್ನು ಸ್ಥಾಪಿಸಲು ಉದ್ದೇಶಿಸಿದೆ.

ಸಂಗೀತ ಉತ್ಸವ :—

ಶ್ರೀ ಬಸವರಾಜ ರಾಜಗುರು, ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್ ಅವರ ಅಗಲಿಕೆಯಿಂದ ರಾಜ್ಯ ಮೂವರು ಶ್ರೇಷ್ಠ ಸಂಗೀತಗಾರರನ್ನು ಕಳೆದುಕೊಂಡಿದೆ. ಇವರ ನೆನಪಿನಲ್ಲಿ ಮೂರು ದಿನಗಳ ವಾರ್ಷಿಕ ಸಂಗೀತ ಉತ್ಸವವನ್ನು ಏರ್ಪಡಿಸಿ ಪ್ರತಿಭಾ[illegible]ರನ್ನು ಆಹ್ವಾನಿಸುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ.

ಕುವೆಂಪು ಹಾಗೂ ಬೇಂದ್ರೆ ಪ್ರತಿಷ್ಠಾನ : —

ಕರ್ನಾಟಕದ ಇಬ್ಬರು ಶ್ರೇಷ್ಠ ಲೇಖಕರ ಜನ್ಮಸ್ಥಳಗಳಲ್ಲಿ ಪ್ರತಿಷ್ಠಾನಗಳನ್ನು ಸರ್ಕಾರ ಸ್ಥಾಪಿಸಲಿದೆ. ವಿಶ್ವಾದ್ಯಂತ ಸಾಹಿತ್ಯ ಪ್ರೇಮಿಗಳು ಹಾಗೂ ವಿದ್ಯಾರ್ಥಿಗಳನ್ನು ಶ್ರೇಷ್ಠ ಲೇಖಕರ ಹುಟ್ಟೂರುಗಳಿಗೆ ಆಕರ್ಷಿಸಿ ಅವರ ಸಾಧನೆಯನ್ನು ಸ್ಮರಿಸುವ ಉದ್ದೇಶ[illegible]ದಿದೆ.

“ಕರ್ನಾಟಕ ವಾರ್ತೆ”

FNP/KRNU/72 No. M (2) PRB 211/73/74

SHOODRA Kannada Monthly

ಶೂದ್ರ

ಮುಖಪುಟ :

ಸಾಫ್ಹೋ ಕವನ ಸಂಕಲನದ ಒಂದು ಕಲೆ

M. Srinivas, Editor for Shoodra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore-29